Collaborative Research Activities with various Research Centre.
Related cover pages.

# ಅಧ್ಯಯನಾಂಗ
# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ – 583276

**2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ**

# ಅಮುಗೆರಾಯಮ್ಮನ ವಚನಗಳು


**ನಿಬಂಧಕಾರರು**

**ಕವಿತ ಕೆ.ಎಸ್.**

ನೋಂದಣಿ ಸಂಖ್ಯೆ – KVTM/K 140901030086
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

**ಮಾರ್ಗದರ್ಶಕರು**

**ಡಾ. ಡಿ.ಸುಮಂಗಳ**
ಕನ್ನಡ ಸಹ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು



**ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್**
**ಜಯಲಕ್ಷ್ಮೀಪುರಂ, ಮೈಸೂರು**

**2014–15**

# ಪರಿವಿಡಿ

## ಅಮುಗೆರಾಯಮ್ಮನ ವಚನಗಳು


| | | | ಪುಟ ಸಂಖ್ಯೆ |
|---|---|---|---|
| | | ಪ್ರಸ್ತಾವನೆ | ೧–೨ |
| ಅಧ್ಯಾಯ – ೧ | : | ಅಧ್ಯಯನದ ಉದ್ದೇಶ ಮತ್ತು ಸ್ವರೂಪ | ೩–೭ |
| ಅಧ್ಯಾಯ – ೨ | : | ವಚನ ಚಳುವಳಿ ಹಿನ್ನೆಲೆ | ೮–೩೧ |
| ಅಧ್ಯಾಯ – ೩ | : | ವಚನ ಸಾಹಿತ್ಯದ ಉಗಮ ಮತ್ತು ಉದ್ದೇಶ | ೩೨–೩೪ |
| ಅಧ್ಯಾಯ – ೪ | : | ವಚನ ಯುಗದಲ್ಲಿ ಮಹಿಳೆಯರ ಸ್ಥಾನಮಾನ | ೩೫–೩೮ |
| ಅಧ್ಯಾಯ – ೫ | : | ಅಮುಗೆರಾಯಮ್ಮಳ ಕಾಲ–ದೇಶ–ವಿಚಾರ | ೩೯–೪೩ |
| ಅಧ್ಯಾಯ – ೬ | : | ರಾಯಮ್ಮನ ವಚನಗಳ ಅಧ್ಯಯನ<br>೧. ವಿಡಂಬನೆ<br>೨. ಆತ್ಮನಿವೇದನೆ<br>೩. ವಿರಕ್ತ, ಲಿಂಗ, ಅರಿವು, ಅನುಭಾವ<br>೪. ನೈತಿಕಪ್ರಜ್ಞೆ | ೪೪–೯೮ |
| ಅಧ್ಯಾಯ – ೭ | : | ರಾಯಮ್ಮನ ವಚನಗಳ ಒಟ್ಟು ಸಾಹಿತ್ಯಿಕ ವಿಶ್ಲೇಷಣೆ | ೯೯–೧೦೧ |
| | : | ಉಪಸಂಹಾರ | ೧೦೨–೧೦೩ |
| | : | ಪರಾಮರ್ಶನ ಗ್ರಂಥಗಳು | ೧೦೪–೧೦೫ |


* * * * *

# ಪ್ರಸ್ತಾವನೆ

ಸುದೀರ್ಘವಾದ ಎರಡೂವರೆ ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ 'ವಚನಸಾಹಿತ್ಯ' ಒಂದು ನಿರ್ಣಾಯಕ ಘಟ್ಟ. ಕ್ರಿ.ಶ. ೧೨ನೇ ಶತಮಾನದಲ್ಲಿ ಪ್ರಾರಂಭಗೊಂಡ ಈ ಸಾಹಿತ್ಯ ಕೇವಲ ಸಾಹಿತ್ಯಿಕ ದೃಷ್ಟಿಯಿಂದ ಮಾತ್ರವಲ್ಲದೆ ಸಾಮಾಜಿಕ, ಧಾರ್ಮಿಕತೆಯ ದೃಷ್ಟಿಯಿಂದ, ರಾಜಕೀಯವಾಗಿಯೂ ಈ ಚಳುವಳಿ ಆಳುವ ವರ್ಗಕ್ಕೆ ಎಚ್ಚರಿಕೆಯ ಗಂಟೆಯಾಯಿತು. ಸಾಮಾಜಿಕ ಅಸಮಾನತೆಯ ಸಂದಿಗ್ಧ ಪರಿಸ್ಥಿತಿಯಲ್ಲಿ 'ಬಸವಣ್ಣ' ಕ್ರಾಂತಿಯ ರೂವಾರಿಯಾದರು. ಆ ಕಾಲದ ಜಾತಿ ಅಸಮಾನತೆ, ಲಿಂಗ ಅಸಮಾನತೆ, ಜೊತೆಗೆ ಉಳ್ಳವರು, ಪಂಡಿತರೆಂಬುವರ ಅಹಂ ಮುರಿಯಲು ಈ ವಚನ ಚಳುವಳಿ ಪ್ರಾರಂಭವಾಯಿತು. ಬಸವಣ್ಣನವರ 'ಇಷ್ಟಲಿಂಗ'ದ ಕಲ್ಪನೆ ಜಗಜ್ಜಾಹಿರವಾಯಿತು. ಅಸಂಖ್ಯಾತ ಜನಶರಣರು ಕಲ್ಯಾಣವನ್ನರಸುತ್ತ ಬಂದರು. ಅವರೆಲ್ಲರೂ ಸಕ್ರಿಯವಾಗಿ ಕ್ರಾಂತಿಯಲ್ಲಿ ಧುಮುಕಿದರು. ಅನುಭವ ಮಂಟಪದಲ್ಲಿ ಶಿವಶರಣರೆಲ್ಲ ಸೇರಿ ಚರ್ಚೆ, ಸಂವಾದದಲ್ಲಿ ತೊಡಗುತ್ತಿದ್ದರು. ಎಲ್ಲಾ ವರ್ಗದ ಜನ ಸೇರಿ ಸಹಪಂಕ್ತಿ ಭೋಜನ ಮಾಡುತ್ತಿದ್ದರು. ಕಾಯಕದೊಂದಿಗೆ ಆಧ್ಯಾತ್ಮಿಕ ಔನ್ನತ್ಯಕ್ಕೆ ಏರಿದರು. ಮೇಲುಕೀಳೆಂಬ ತರತಮ ಭಾವ ಹೋಗಿ ತಾವೆಲ್ಲ ಒಂದೇ 'ಶರಣ'ರೆಂಬ ವಿನೀತ ಭಾವ ಎಲ್ಲರಲ್ಲೂ ಆವರಿಸಿತು.

ಈ ಬದಲಾವಣೆ ಆಳುವ ವರ್ಗಕ್ಕೆ ಬೇಕಿರಲಿಲ್ಲ. ಆಷಾಢಭೂತಿಗಳು ರಾಜನ ಕಿವಿ ಚುಚ್ಚಿದರು. ಪುರೋಹಿತಶಾಹಿ ವರ್ಗಗಳೆಲ್ಲ ಒಂದಾಗಿ ಶರಣರ ಭಾವನೆಗೆ ಧಕ್ಕೆ ತಂದರು. ಪರಿಣಾಮ ಶರಣರೆಲ್ಲಾ ತಮ್ಮ ಅಮೂಲ್ಯ ಗ್ರಂಥ ವಚನಗಳೊಂದಿಗೆ ಕಲ್ಯಾಣ ತ್ಯಜಿಸಬೇಕಾಯಿತು. ಜಗತ್ತಿನಲ್ಲಿ ಮೊಟ್ಟಮೊದಲ ದೀನದಲಿತರ ಚಳುವಳಿ ಯಶಸ್ವಿಯಾಗದೇ ಹೋಯಿತಾದರೂ, ಕಿಚ್ಚಿನ ಕಾವನ್ನು ಮಾತ್ರ ಕಳೆದುಕೊಳ್ಳಲಿಲ್ಲ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಜನಪದ ಸಾಹಿತ್ಯದಲ್ಲಿ ಮಾತ್ರ ಕಾಣಿಸಿಕೊಂಡ ಸ್ತ್ರೀಯರು ಅನಂತರ ಮರೆಯಾಗುತ್ತಾರೆ. ಅವರ ಅಸ್ತಿತ್ವದ ದಾಖಲೆ ಸಾಹಿತ್ಯದಲ್ಲಿ ವಚನಕಾರರ ಆಗಮನದವರೆವಿಗೂ ಕಾಣಸಿಗುವುದಿಲ್ಲ. ಶತಮಾನಗಳಿಂದಲೂ ಮೂಕವಾಗಿಯೇ ಉಳಿದಿದ್ದ ಮಹಿಳೆಯರಿಗೆ ಮೊಟ್ಟಮೊದಲಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದವರು ವಚನಕಾರರು. ಕೇವಲ ಕೌಟುಂಬಿಕ ಘಟಕಕ್ಕೆ ಮಾತ್ರ ಸೀಮಿತವಾಗಿದ್ದ ಮಹಿಳೆಯರಿಗೆ ಆಧ್ಯಾತ್ಮಿಕ ಉನ್ನತಿ ಸಾಧ್ಯವಿದೆ ಎಂದು ತೋರ್ಪಡಿಸಿ ಅಸಂಖ್ಯಾತ ಮಹಿಳೆಯರು ವಚನ ಚಳುವಳಿಗೆ ಧುಮುಕಿದರು.

ಅವರಲ್ಲಿ ಪ್ರಮುಖರೆಂದರೆ ಅಕ್ಕಮಹಾದೇವಿ, ಸತ್ಯಕ್ಕ, ಬೊಂತಾದೇವಿ, ಅಕ್ಕಮ್ಮ, ನಾಗಲಾಂಬಿಕೆ, ಕಾಳವ್ವೆ ಮುಂತಾದವರು. ಇವರೆಲ್ಲಾ ತಮ್ಮ ಸಾಧನೆಯಿಂದ ಉನ್ನತಿಗೇರಿದವರು. ಅವರಲ್ಲಿ ಅಮುಗೆರಾಯಮ್ಮ ಕೂಡ ಒಬ್ಬರು. ಈಕೆಯ ೧೧೩ ವಚನಗಳು ಲಭ್ಯವಿದ್ದು; ವಚನಗಳ ವಿಚಾರಗಳನ್ನು ಅರಿಯುವ ಪ್ರಯತ್ನವನ್ನು ಈ ನಿಬಂಧನೆಯಲ್ಲಿ ಮಾಡಲಾಗಿದೆ.

# ಉಪಸಂಹಾರ

೧೨ನೇ ಶತಮಾನದ ಈ ಶರಣ ಚಳುವಳಿ, ವಚನ ಚಳುವಳಿ ಜಾಗತಿಕ ಮಟ್ಟದಲ್ಲಿ ಸ್ಥಾನಮಾನ ಪಡೆಯದೇ ಹೊದುದು ವಿಪರ್ಯಾಸವೇ ಸರಿ. ಬಸವಾದಿ ಶರಣರ ಚಿಂತನೆಗಳು ಸಾವಿರ ವರ್ಷಗಳ ಮುಂದಿನ ಆಲೋಚನೆಗಳನ್ನು ಒಳಗೊಂಡಿದುದು ವಿಶೇಷ. ಬಸವಾದಿ ಪ್ರಮಥರ ಈ ವೈಚಾರಿಕ ಕ್ರಾಂತಿಯ, ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುವ ವಚನಕಾರರು ಸ್ತ್ರೀಯರಿಗೂ ಸಮಾನ ಪ್ರಾಶಸ್ತ್ಯ ನೀಡಿದವರು. ಅವರ ಪ್ರಧಾನ ಆಶಯ ಸ್ತ್ರೀಯರು. ಸ್ತ್ರೀಯರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದ ಶರಣರ ಆಧ್ಯಾತ್ಮಿಕ, ಕಾಯಕ ಸಮಾನತೆ ನೀಡಿದರು. ಅಂದು ಅವರು ನೀಡಿದ ಚಿಂತನೆಗಳನ್ನೇನಾದರೂ ಅನ್ವಯ ಮಾಡಿಕೊಂಡು ಆಚರಣೆಗೆ ತಂದರೆ ಭ್ರಷ್ಟಾಚಾರ, ಜಾತಿಸಮಸ್ಯೆ, ಅಸ್ಪೃಶ್ಯತೆ, ಸ್ತ್ರೀ–ಪುರುಷರ ಅಸಮಾನತೆ ಎಂಬ ಹತ್ತು ಹಲವಾರು ಸಾಮಾಜಿಕ ಪಿಡುಗುಗಳಿಗೆ ದಿವ್ಯೌಷಧವಾಗಿದೆ.

ಕಲ್ಯಾಣದಲ್ಲಿ ಕ್ರಾಂತಿಯಾದಾಗ ಹಲವು ಶರಣರೆಲ್ಲಾ ಗುಂಪುಗುಂಪಾಗಿ ಅಲ್ಲಲ್ಲಿ ಚದುರಿಹೋದರು. ತಾವು ರಚಿಸಿದ ಅಮೂಲ್ಯ ವಚನಗ್ರಂಥಗಳೊಂದಿಗೆ ಹರಿದುಹಂಚಿಹೋದರು. ಕೆಲವು ಮಹಿಳೆಯರ ಒಂದೊಂದೇ ವಚನಗಳು ದೊರೆತಿವೆ. ಈ ಸಂಗ್ರಹ ಸಂಪಾದನೆಯ ಕೆಲಸ ಅಷ್ಟು ಸುಲಭವಲ್ಲ. ಹುಳುಬಿದ್ದ ತಾಳೆಗರಿಗಳೆಷ್ಟೋ, ಮುರಿದುಹೋದವೆಷ್ಟೋ – ಅವುಗಳನ್ನೆಲ್ಲಾ ಒಕ್ಕಣೆ ಮಾಡಿ ನಮ್ಮ ಮುಂದೆ ಸಿದ್ಧರೂಪಕ್ಕೆ ತಂದಿರುವಲ್ಲಿ ಹಲವು ವಿದ್ವಾಂಸರುಗಳ ಶ್ರಮವಿದೆ. 'ವಚನಸಾಹಿತ್ಯ ಪಿತಾಮಹ'ರೆಂದು ಖ್ಯಾತರಾದ 'ಫ.ಗು.ಹಳಕಟ್ಟಿ' ತಮ್ಮ ಜೀವಮಾನವನ್ನೇ ವಚನಸಾಹಿತ್ಯದ ಅಧ್ಯಯನಕ್ಕಾಗಿ ಮೀಸಲಿರಿಸಿದ ಮಹಾನುಭಾವರು. ನಂತರ ಆರ್.ಸಿ.ಹಿರೇಮಠ, ಭೂಸನೂರುಮಠ, ಸ.ಸ.ಮಾಳವಾಡ, ಎಲ್.ಬಸವರಾಜು, ಎಂ.ಎಂ.ಕಲಬುರ್ಗಿ, ಚಿದಾನಂದಮೂರ್ತಿ ಮುಂತಾದ ಸಂಶೋಧಕರು ಈ ನೆಲೆಯಲ್ಲಿ ಶ್ರಮಗೈದಿರುತ್ತಾರೆ. ವಚನಕಾರರ ತತ್ವಾದರ್ಶಗಳು, ಆಧ್ಯಾತ್ಮಿಕತೆ, ಚರ್ಚಾಗೋಷ್ಠಿ ವೈಚಾರಿಕತೆ, ಮಹಿಳೆಯರ ಸ್ಥಾಮಾನ, ಕಾಯಕ ಸಿದ್ಧಾಂತ, ದಾಸೋಹ, ಅನುಭಾವ ಇವುಗಳ ಕುರಿತು ಚಿಂತನೆಯ ಜೊತೆಗೆ ಮಹಿಳಾ ವಚನಕಾರ್ತಿಯಾದ ಅಮುಗೆ ರಾಯಮ್ಮನನ್ನು ಕುರಿತ ಹಿನ್ನೆಲೆ, ಆಕೆಯ ವಚನಗಳ ವೈಶಿಷ್ಟ್ಯತೆಯನ್ನು ಈ ನಿಬಂಧನೆಯಲ್ಲಿ ಪ್ರಸ್ತುತಪಡಿಸಲಾಗಿದೆ. ಆಕೆಯು ಪ್ರಸ್ತಾಪಿಸಿರುವ ವಿಡಂಬನೆ, ಡಂಬಾಚಾರ, ವೇಷಧಾರಿಗಳು, ಭವಿಗಳನ್ನು ಕುರಿತು ವಿಡಂಬನೆ, ತಿರುಗಾಟ, ಲಿಂಗ, ಅನುಭಾವ ಆತ್ಮನಿವೇದನೆಯಂತಹ ವಚನಗಳ ವಿಶ್ಲೇಷಣೆ ಮಾಡಲಾಗಿದೆ. ಒಬ್ಬ ಸಾಮಾನ್ಯ ನೇಯ್ಗೆಕಾಯಕ ಅಮುಗಿದೇವಯ್ಯನ ಪತ್ನಿ ರಾಯಮ್ಮನೂ ತನ್ನ ಆಧ್ಯಾತ್ಮಿಕ ಅತ್ಯುನ್ನತ ನಿಲುವಿನಲ್ಲಿ ತಾನು ಕಂಡ ಅಂತರಂಗದ ಅನುಭಾವವನ್ನು, ಲೌಕಿಕ

ಡಂಬಾಚಾರಗಳನ್ನು ನಿರ್ಭಯದಿಂದ ಹೇಳಿದುದು ಮಹಿಳೆಯರಿಗೆ ವಚನಕಾರರು ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವಾಗಿದೆ.

ಶರಣರ ದೇಹದ ಮೇಲೆ ಲಿಂಗ ಧರಿಸುವುದು, ಶಿವತತ್ವಾಚಾರಣೆಗಳು ಇವೆಲ್ಲಾ ಆ ಕಾಲದಲ್ಲಿಯೇ ಸ್ಥಾಪಿತ ಸಿದ್ಧಾಂತಗಳೇನಲ್ಲ. ಮೊದಲೇ ಇದ್ದ ಈ ಆಚರಣೆಗಳನ್ನು ತಮ್ಮ ಧಾರ್ಮಿಕ ಭಾವನೆಗಳಿಗೆ ತಕ್ಕಂತೆ ಬದಲಾಯಿಸಿಕೊಂಡು ವಿಶಿಷ್ಟ ಆಚರಣೆಗಳನ್ನು ಜಾರಿಗೆ ತಂದರು. ಈ ನೂತನ ಆಚರಣೆಗಳು ಮೇಲ್ವರ್ಗದವರಿಗೆ ಬೇಕಿರಲಿಲ್ಲ. ಮನುಷ್ಯ ಸಮಾಜದಲ್ಲಿ ಬದುಕಬೇಕಾದರೆ ಹೇಗೆ ಸದ್ವಿನಯ, ಸದಾಚಾರಗಳನ್ನು ಮೈಗೂಡಿಸಿಕೊಂಡು, ಭವಬಂಧನಗಳಿಂದ ಬಿಡುಗಡೆಹೊಂದಿ ಹೇಗೆ ಆದರ್ಶಯುತವಾಗಿ ಬದುಕಬೇಕೆಂದು ಸ್ವತಃ ತೋರ್ಪಡಿಸಿರುತ್ತಾರೆ. ಸದಾ 'ಮುಗಿದಕ್ಕೈ, ಬಾಗಿದ ತಲೆಯಾಗಿದ್ದ' ಶರಣರ ನಿಲುವು ಅನುಕರಣೀಯವಾದವುಗಳು.

ಒಟ್ಟಾರೆ ಅಮುಗೆಯ ರಾಯಮ್ಮನ ವಚನಗಳು. ಕನ್ನಡ ಸಾಹಿತ್ಯಕ್ಕೆ ಅತ್ಯಮೂಲ್ಯ ಕೊಡುಗೆಗಳಾಗಿವೆ. ಆಕೆಯ ವಚನಗಳನ್ನು ಅಧ್ಯಯನ ನಡೆಸಿದ ಬಳಿಕ ಆಕೆಯು ಡಂಬಾಚಾರಿಗಳಿಗೆ ನಿಷ್ಠುರವಾಗಿ ತೆಗಳಿದ ಸಂದರ್ಭ, ವಚನಗಳು ಸದಾ ಕಣ್ಣ ಮುಂದೆ ಬರುತ್ತವೆ. ಶಿವನ, ಲಿಂಗದ ಪರಮಭಕ್ತೆಯ ಅಭಿನ್ನ ನಿಲುವನ್ನು, ನಿಷ್ಠೆಯನ್ನು ಇವರ ವಚನಗಳು ಕಟ್ಟಿಕೊಡುತ್ತವೆ.

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

# ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು


ನಿಬಂಧಕಾರರು

ನಾಗರಾಜ .ವೈ

ನೋಂದಣಿ ಸಂಖ್ಯೆ – KVTM/K 140901030088

ಕನ್ನಡ ಎಂ.ಫಿಲ್ ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಡಿ.ಸುಮಂಗಳ

ಕನ್ನಡ ಸಹಪ್ರಾಧ್ಯಾಪಕರು

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು

ಮೈಸೂರು


ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

2014–15

## ಪ ರಿ ವಿ ಡಿ

# ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು


| ಅಧ್ಯಾಯಗಳು | | ಪಠ್ಯ ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ – ೧ | : | ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | ೧–೨ |
| ಅಧ್ಯಾಯ – ೨ | : | ದೇಜಗೌರವರ ಪರಿಚಯ ಮತ್ತು ವ್ಯಕ್ತಿ ವಿಶೇಷ | ೩–೧೧ |
| ಅಧ್ಯಾಯ – ೩ | : | ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ದೇಜಗೌರವರ ಕೊಡುಗೆಗಳು | ೧೨–೨೪ |
| ಅಧ್ಯಾಯ – ೪ | : | ದೇಜಗೌರವರ ಶೈಕ್ಷಣಿಕ ಹೋರಾಟಗಳು | ೨೫–೬೦ |
| ಅಧ್ಯಾಯ – ೫ | : | ದೇಜಗೌರವರ ಸಾಹಿತ್ಯಿಕ ಒಟ್ಟು ವಿಶ್ಲೇಷಣೆ | ೬೧–೭೪ |
| ಅಧ್ಯಾಯ – ೬ | : | ಉಪಸಂಹಾರ | ೭೫–೭೭ |
| | | ಪರಾಮರ್ಶನ ಗ್ರಂಥಗಳು | ೭೮–೭೯ |


* * * * *

# ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಶ್ರೀಯುತ ದೇಜಗೌ ಅವರ ಅನುಭವ ವ್ಯಾಪ್ತಿ ಗಹನವಾದದ್ದು. ಅವುಗಳಲ್ಲಿ ಶಿಕ್ಷಣವನ್ನು ಕುರಿತಂತೆ ಮಂಡಿಸಿರುವ ವಿಚಾರಧಾರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕೆಳಕಂಡಂತೆ ವಿಂಗಡಿಸಿಕೊಂಡು ಅಧ್ಯಯನ ನಡೆಸಿದ್ದೇನೆ.

- ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳು
- ಶಿಕ್ಷಣ ಮಾಧ್ಯಮವಾಗಿ ಮಾತೃಭಾಷೆ ಕುರಿತಾದ ಚಿಂತನೆಗಳು
- ಉನ್ನತ ಶಿಕ್ಷಣ ಮತ್ತು ದೇಜಗೌ ಅವರ ಶೈಕ್ಷಣಿಕ ಚಿಂತನೆಗಳು
- ದೇಜಗೌ ಅವರ ಶೈಕ್ಷಣಿಕ ಹೋರಾಟಗಳು
- ಆಡಳಿತ ತಜ್ಞರಾಗಿ ದೇಜಗೌ
- ಮಾನವೀಯ ಮೌಲ್ಯಗಳ ಚಿಂತಕರಾಗಿ ದೇಜಗೌ
- ಜಾನಪದ ಚಿಂತಕರಾಗಿ ದೇಜಗೌ
- ಕನ್ನಡದ ಶಾಸ್ತ್ರೀಯ ಭಾಷೆಯ ಅಂಕಿತಕ್ಕಾಗಿ

ಇವೆಲ್ಲವುಗಳನ್ನು ಸಮಗ್ರವಾಗಿ ಮತ್ತು ವೈಜ್ಞಾನಿಕವಾಗಿ ಅವರ ಶೈಕ್ಷಣಿಕ ಜೀವನ ದೃಷ್ಟಿಕೋನಗಳನ್ನು ಚಿಂತನೆಗಳನ್ನು ಅನಾವರಣಗೊಳಿಸುವುದು ಪ್ರಸ್ತುತ ನಿಬಂಧದ ವ್ಯಾಪ್ತಿ ಮತ್ತು ಉದ್ದೇಶವಾಗಿದೆ.

ದೇಜಗೌ ಅವರ ಭಾಷಣಗಳಲ್ಲಿ ಶೈಕ್ಷಣಿಕ ಚಿಂತನೆಗಳನ್ನು ಗಮನಿಸಿದಾಗ ಇನ್ನು ಹಲವಾರು ಕ್ಷೇತ್ರಗಳಲ್ಲಿ ದೇ.ಜವರೇಗೌಡರು ಚಿಂತಿಸಿರುವುದನ್ನು ನೋಡುವುದಾದರೆ ಮಾನವೀಯ ಮೌಲ್ಯಗಳ ಚಿಂತಕರಾಗಿ ದೇಜಗೌರವರು ಯಾವ ರೀತಿ ಚಿಂತನೆ ಮಾಡಿದ್ದಾರೆಂದರೆ ಇಂದಿನ ಆಧುನಿಕ ಜಗತ್ತಿನಲ್ಲಿ ದಿನೇ ದಿನೇ ಮಾನವೀಯ ಮೌಲ್ಯಗಳು ಕುಸಿಯುತ್ತಿದ್ದು, ಸಮಾಜ ಅಧೋಗತಿಗೆ ಇಳಿಯುತ್ತಿರುವುದರ ಬಗ್ಗೆ ದೇಜಗೌ ಅವರಿಗೆ ಬೇಸರವಿದೆ. ಜಾಗತೀಕರಣ, ಖಾಸಗೀಕರಣ ಉದಾರೀಕರಣ ನೀತಿಯಿಚಿದಾಗಿ ಮನುಷ್ಯ ಹಣಕ್ಕೆ ಬೆಲೆಕೊಡುತ್ತಿದ್ದಾನೆಯೇ ಹೊರತು, ಮಾನವೀಯ ಮೌಲ್ಯಗಳಿಗಲ್ಲ, ಮಾನವನ

ಬೃಹಜ್ಜೀವನ ಸಕಲ ವ್ಯಾಪಾರ ವ್ಯವಹಾರಗಳು ಆತನ ಧೀಶಕ್ತಿ ಚಿದ್ವಿಲಾಸಗಳನ್ನವಲಂಬಿಸಿದೆಯೆಂದು ದೇಜಗೌ ಹೇಳುತ್ತಾರೆ.

ಮನುಷ್ಯನ ಹೃದಯದಲ್ಲಿರುವ ರಾಗ ದ್ವೇಷಾದಿ ಭಾವನೆಗಳನ್ನು ಪರಿಷ್ಕಾರಗೊಳಿಸುವ ಕಲೆ ಸಾಹಿತ್ಯಕ್ಕಿದೆಯೆಂದು ದೇಜಗೌ ತಿಳಿಸುತ್ತಾರೆ. ಆನಂದವೇ ಜೀವನದ ಪರಮಗುರಿ, ವಿಶೇಷವಾದ ವಿದ್ವತ್ತು ನಿರಂತರ ಆಲೋಚನೆ, ದೀರ್ಘತಪಸ್ಸುಗಳ ಮೂಲಕ ಉತ್ತಮವಾದ ಜೀವನವನ್ನು ಮಾನವ ರೂಪಿಸಿಕೊಳ್ಳಬೇಕು.

ಸಾಹಿತ್ಯವು ಓದುಗನ ಮೇಲೆ ಗಾಢವಾದ ಪರಿಣಾಮವನ್ನುಂಟುಮಾಡಿ ಅವರ ಮನಸ್ಸಿನಲ್ಲಿ ಮಾನವೀಯ ಮೌಲ್ಯಗಳು ಮೂಡುವಂತೆ ಮಾಡುತ್ತದೆಂದು ದೇಜಗೌ ತಿಳಿಸುತ್ತಾರೆ.

ಸಮಾಜದ ಜನಸಮುದಾಯವು ದೀನರ ಅಶಕ್ತರ ಮೇಲೆ ಸಹಾನುಭೂತಿ, ಕರುಣೆ ಇಟ್ಟುಕೊಳ್ಳಬೇಕೆಂದು ಅವರ ನಿಲುವು.

# ಅಧ್ಯಾಯ ಆರು

# ಉಪಸಂಹಾರ

ದೇಜಗೌ ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮದೇ ಆದ ಸ್ಥಾನವನ್ನು ಗುರುತಿಸಿಕೊಂಡಿರುವ ದೇಜಗೌರವರು ಉಪಕುಲಪತಿಗಳಾಗಿದ್ದಾಗ ಕನ್ನಡದ ಹಲವಾರು ಸಾಹಿತ್ಯ ಪ್ರಕಟಣೆಗೆ ಕಾರಣರಾಗಿದ್ದಾರೆ. ತಮ್ಮ ಭಾಷಣಗಳಲ್ಲಿ ಹಲವಾರು ಶೈಕ್ಷಣಿಕ ಚಿಂತನೆಗಳ ಬಗ್ಗೆ ಪ್ರಸ್ತಾಪ ಮಾಡಿರುವ ಅವರು ಬಿ.ಕಾಂ., ಬಿ.ಸಿ.ಎ.ಗಳಿಗೆ ಕನ್ನಡ ಭಾಷೆ ಕೈಬಿಡುವ ಸಂದರ್ಭ ಬಂದಾಗ ವಿಶ್ವವಿದ್ಯಾನಿಲಯದಲ್ಲಿ ಚರ್ಚಿಸಿ ಕನ್ನಡ ಭಾಷೆಯ ಅಧ್ಯಯನಕ್ಕೆ ಕಾರಣರಾಗಿದ್ದಾರೆ.

ಇಂಥ ಸಾಧಕ ದೇಜಗೌ ಅವರ ಭಾಷಣಗಳಲ್ಲಿ "ಶೈಕ್ಷಣಿಕ ಚಿಂತನೆಗಳು" ಎನ್ನುವ ವಿಷಯವನ್ನು ನಾನು ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿದ್ದು ಇದರಲ್ಲಿ ಒಟ್ಟು ೬ ಅಧ್ಯಾಯಗಳನ್ನು ಮಾಡಿಕೊಂಡು ಒಂದೊಂದು ಅಧ್ಯಾಯವನ್ನು ಕೂಲಂಕಷವಾಗಿ ಚರ್ಚಿಸಿದ್ದೇನೆ.

ಕರ್ನಾಟಕ ರತ್ನ, ನಾಡೋಜ ದೇಜಗೌ ಸ್ವತಃ ಪ್ರಾಧ್ಯಾಪಕರಾಗಿ ಉಪಕುಲಪತಿಗಳಾಗಿ ಶೈಕ್ಷಣಿಕ ಸಂಸ್ಥೆಗಳ ಹುಟ್ಟುಹಾಕಿದ ಶೈಕ್ಷಣಿಕ ಸಲಹೆಗಾರರಾಗಿ ಕನ್ನಡನಾಡು ನುಡಿಗೆ ಸಲ್ಲಿಸಿದ ಸೇವೆ ಚಿರಸ್ಥಾಯಿ. ಶತಮಾನದ ಹೊಸ್ತಿಲಲ್ಲಿ ನಿಂತು, ವಯೋಸಹಜ ಅನೇಕ ದೈಹಿಕ ಬೇನೆಗಳಿದ್ದರೂ ಅದನ್ನು ಮೆಟ್ಟಿ ಈಗಲೂ ಕನ್ನಡದ ಕೆಲಸವೆಂದರೆ ಸಾಕು ಕಾರ್ಯಗತಗೊಳಿಸಲು ಸದಾ ಸಿದ್ಧ.

ಇಂಥ ಮಹಾನ್ ಶಿಕ್ಷಣತಜ್ಞ ಶೈಕ್ಷಣಿಕ ವಲಯದ ಸಲಹೆಗಾರರಾದ ಡಾ. ದೇ.ಜವರೇಗೌಡರವರು ಪ್ರಸ್ತುತ ಮೈಸೂರಿನ ಜಯಲಕ್ಷ್ಮೀಪುರಂನ ತಮ್ಮ ಮಗನ ಮನೆಯಲ್ಲಿ ವಾಸವಾಗಿದ್ದಾರೆ. ಕನ್ನಡದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇತ್ತೀಚೆಗೆ ಇವರ ಹಲವಾರು ಗ್ರಂಥಗಳು ಪುನರ್‌ಮುದ್ರಣಗೊಂಡಿವೆ.

ಒಟ್ಟಾರೆ ನೂರರ ಪ್ರಾಯದ ಸಂದರ್ಭದಲ್ಲಿಂದೂ ಕನ್ನಡ, ಕನ್ನಡ ಶಾಲೆ, ಕರ್ನಾಟಕದ ಪ್ರಗತಿ, ಉನ್ನತ ಶಿಕ್ಷಣ, ಸ್ವಾಯತ್ತತೆ ಶಿಕ್ಷಣದ ಗುಣಮಟ್ಟ ಕುರಿತಂತೆ ದೇಜಗೌ ಅಪಾರ ಕಾಳಜಿ, ಆಸಕ್ತಿ ಹೊಂದಿದ್ದಾರೆ. ಉನ್ನತ ಶಿಕ್ಷಣದ ಬಗ್ಗೆ ಅವರಿಗಿರುವ ಕಳಕಳಿ, ಅಕ್ಕರೆ, ಆತಂಕ ನಮ್ಮನ್ನೂ ಚಿಂತನೆಗೀಡು ಮಾಡುತ್ತದೆ.

ಅಧ್ಯಯನಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

# "ಕುವೆಂಪು ಅವರ ಮಕ್ಕಳ ಸಾಹಿತ್ಯ"

ನಿಬಂಧಕಾರರು

**ನೇತ್ರಾವತಿ.ಬಿ**

ನೋಂದಣಿ ಸಂಖ್ಯೆ – KVTM/K 140901030089

ಕನ್ನಡ ಎಂ.ಫಿಲ್ ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

**ಡಾ. ಎಚ್.ಪಿ.ಗೀತಾ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು

**ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್**
**ಜಯಲಕ್ಷ್ಮೀಪುರಂ, ಮೈಸೂರು**

**2014–15**

## ಪರಿವಿಡಿ

# "ಕುವೆಂಪು ಅವರ ಮಕ್ಕಳ ಸಾಹಿತ್ಯ"


| ಅಧ್ಯಾಯಗಳು | | ಪಠ್ಯ ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ – ೧ | : | ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | ೧–೫ |
| ಅಧ್ಯಾಯ – ೨ | : | ಕನ್ನಡದಲ್ಲಿ ಮಕ್ಕಳ ಸಾಹಿತ್ಯ | ೬–೨೮ |
| ಅಧ್ಯಾಯ – ೩ | : | ಕುವೆಂಪು ಅವರ ಮಕ್ಕಳ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು | ೨೯–೫೦ |
| ಅಧ್ಯಾಯ – ೪ | : | ನಿಸರ್ಗ | ೫೧–೭೩ |
| ಅಧ್ಯಾಯ – ೫ | : | ಭಾಷೆ | ೭೪–೯೧ |
| ಅಧ್ಯಾಯ – ೬ | | ಉಪಸಂಹಾರ | ೯೨–೯೬ |
| | | ಪರಾಮರ್ಶನ ಗ್ರಂಥಗಳು | ೯೭–೧೦೦ |
| | | ಛಾಯಾಚಿತ್ರಗಳು | ೧೦೧–೧೦೩ |


* * * * *

# ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

**ಕು**ವೆಂಪು ಎಂಬ ಕಾವ್ಯನಾಮದಿಂದ ಪ್ರಖ್ಯಾತಿಯನ್ನು ಪಡೆದಿರುವ ಪದ್ಮಭೂಷಣ ಡಾಕ್ಟರ್ ಕೆ.ವಿ.ಪುಟ್ಟಪ್ಪನವರು ಇಪ್ಪತ್ತನೇ ಶತಮಾನದಲ್ಲಿ ಕನ್ನಡ ಸಾಹಿತ್ಯವು ಕಂಡಂತಹ ಶ್ರೇಷ್ಠ ಕವಿ. ಅವರ ಸಾಹಿತ್ಯ ಸೃಷ್ಟಿ ವೈವಿಧ್ಯಮಯವಾದುದು ಹಾಗೂ ಸಮೃದ್ಧವಾದುದು. ಆದ್ದರಿಂದಲೇ ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯು ಕುವೆಂಪುರವರ ಸಾಹಿತ್ಯ ಬೆಳವಣಿಗೆಯ ಸಾಧನೆಗಳಿಂದ ಮತ್ತು ಅವರು ಇತರ ಕವಿಗಳ ಮೇಲೆ ಬೀರಿದ ಪ್ರಭಾವದಿಂದ ಕಂಗೊಳಿಸುತ್ತಿದೆ.

ಕುವೆಂಪುರವರು ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಸತ್ವಪೂರ್ಣವಾದ ಕೃತಿಗಳನ್ನು ರಚಿಸಿದ್ದಾರೆ. "ಕಾವ್ಯ, ನಾಟಕ, ಕಾದಂಬರಿ, ಸಣ್ಣಕಥೆ, ಲಲಿತ ಪ್ರಬಂಧ, ಜೀವನಚರಿತ್ರೆ, ಆತ್ಮಕಥೆ, ಕಾವ್ಯಮೀಮಾಂಸೆ, ಮಕ್ಕಳ ಸಾಹಿತ್ಯ, ವಿಚಾರಸಾಹಿತ್ಯ, ಸಾಹಿತ್ಯವಿಮರ್ಶೆ" ಹೀಗೆ ಸುಮಾರು ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ನಿರ್ಮಿಸಿ ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಕುವೆಂಪು ಸಾಹಿತ್ಯದ ಮುಖ್ಯ ಲಕ್ಷಣಗಳೆಂದರೆ ಅದಮ್ಯವಾದ ನಿಸರ್ಗ ಪ್ರೇಮ, ಅಧ್ಯಾತ್ಮ ಮತ್ತು ವೈಚಾರಿಕತೆ ಅಷ್ಟೇ ಅಲ್ಲದೆ ಮಾನವೀಯ ಮೌಲ್ಯಗಳ ಶೋಧನೆಯ ನೆಲೆಯನ್ನು ಅವರ ಸಾಹಿತ್ಯ ಒಳಗೊಂಡಿದೆ. ಇವರ ಬದುಕು, ಬರಹ, ಸಾಮಾಜಿಕ, ಸಾಂಸ್ಕೃತಿಕ ಕಾಳಜಿ ಇವುಗಳೆಲ್ಲ ಮಹತ್ವಪೂರ್ಣವಾದವುಗಳಾಗಿವೆ. ಈ ಎಲ್ಲಾ ದೃಷ್ಟಿಯಿಂದ ಕುವೆಂಪು ಅವರ ಸಾಹಿತ್ಯವನ್ನು ಅಧ್ಯಯನ ಮಾಡುವುದರಿಂದ ಹೊಸ ಚಿಂತನೆಯನ್ನು ಬೆಳೆಸಿಕೊಳ್ಳಬಹುದಾಗಿದೆ.

ಕುವೆಂಪು ಅವರ ಸಾಹಿತ್ಯ ಸೃಷ್ಟಿ ಮೌಲಿಕವಾದದ್ದಾಗಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಅವರು ಸಿದ್ಧಿಯನ್ನು ಪಡೆದಿದ್ದಾರೆ. ಏಕೆಂದರೆ ಅವರ ಸಾಹಿತ್ಯವು ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗೂ ಉಂಟು. ಇಷ್ಟೊಂದು ವೈವಿಧ್ಯ, ಸಮೃದ್ಧಿಗಳನ್ನುಳ್ಳ ಸಾಹಿತ್ಯವನ್ನು ಕೊಟ್ಟ ಬರಹಗಾರರು ಇತರ ಬೇರೆ ಭಾಷೆಯಲ್ಲಿ ವಿರಳವೆಂದೇ ಹೇಳಬಹುದು.

ಕುವೆಂಪು ಅವರ ದೃಷ್ಟಿ ಮಹತ್ತಿನತ್ತ ಹಾಗೂ ಬೃಹತ್ತಿನತ್ತಲೇ ಮೊದಲಿನಿಂದಲೂ ಕೇಂದ್ರೀಕೃತವಾಗಿರುವುದನ್ನು ಕಾಣಬಹುದು. ಮಹಾಕಾವ್ಯ, ಬೃಹತ್ತಾದ ಕಾದಂಬರಿಗಳು,

ಭಾವಗೀತೆಗಳನ್ನು ರಚಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಸತ್ವಪೂರ್ಣವಾದ, ಮೌಲ್ಯಯುತವಾದ ಕೃತಿಗಳನ್ನು ರಚಿಸಿದ್ದಾರೆ.

"ಶ್ರೀ ರಾಮಾಯಣ ದರ್ಶನಂ" ಕುವೆಂಪು ಅವರ ಮಹಾಕಾವ್ಯ. ಇದರಲ್ಲಿನ ಪ್ರತಿಯೊಂದು ಪಾತ್ರಗಳು ಜೀವತುಂಬಿಕೊಂಡಿದೆ. 'ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ' ಈ ಮೂರು ಅಂಶಗಳು ತಮ್ಮ ಕಣ್ಣುಗಳಿದ್ದ ಹಾಗೆ ಎಂದು ಕುವೆಂಪುರವರೆ ಸ್ವತಃ ಹೇಳಿಕೊಂಡಿದ್ದಾರೆ.

ವಚನಕಾರರನ್ನು ಬಿಟ್ಟರೆ ಕುವೆಂಪು ಅವರೇ ಕನ್ನಡದ ಮೊದಲ ಸಾಮಾಜಿಕ ಕವಿ ಎಂದು ಹೇಳಬಹುದು. ಇವರ ಸಾಹಿತ್ಯ ಪ್ರಪಂಚಕ್ಕೆ ಒಳಗಾಗದ ವಸ್ತುವೇ ಇಲ್ಲ.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆಯ ಮಾತಿನಂತೆ 'ಕುವೆಂಪು ಕೈಹಾಕದ ಸಾಹಿತ್ಯ ಪ್ರಕಾರವಿಲ್ಲ' ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, 'ಅಮಲನ ಕಥೆ' ಎಂಬ ಕೃತಿಯಿಂದ ಹಿಡಿದು 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯದವರೆಗೂ ಸಾಧನೆ ಮಾಡಿರುವ ಕುವೆಂಪುರವರು ರಾಷ್ಟ್ರಕವಿ ಆಗಿದ್ದರೂ ಕೂಡ ಮಕ್ಕಳ ಸಾಹಿತ್ಯವನ್ನು ಮಾತ್ರ ಕಡೆಗಣಿಸಿಲ್ಲ.

'ಮಕ್ಕಳ ಸಾಹಿತ್ಯ' ಅದರ ಹೆಸರೇ ಸೂಚಿಸುವಂತೆ ಇದು ಮಕ್ಕಳಿಗಾಗಿಯೇ ರಚಿತವಾಗಿರುವಂತಹ ಸಾಹಿತ್ಯವಾಗಿದೆ. ಆದರೆ ಕುವೆಂಪುರವರ ಮಕ್ಕಳ ಸಾಹಿತ್ಯವು ಕೇವಲ ಮಕ್ಕಳಿಗೆ ಮಾತ್ರವಲ್ಲದೆ ಹಿರಿಯರಿಗೂ ಕೂಡ ಆಸಕ್ತಿಯನ್ನು ಹುಟ್ಟಿಸುತ್ತದೆ. ಇದಕ್ಕೆ ಪೂರಕವಾಗಿ ಕುವೆಂಪುರವರ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ಒಂದು ಸೂಕ್ತ ಉದಾಹರಣೆಯಾಗಿದೆ.

'ಮಕ್ಕಳ ಸಾಹಿತ್ಯ' ಎಂದ ತಕ್ಷಣ ಅದರ ರಚನೆ ಅಷ್ಟು ಸುಲಭವೇನಲ್ಲ. ಏಕೆಂದರೆ ರಚನೆ ಮಾಡುವಂತಹ ಸಾಹಿತ್ಯವು ಮೃದುತ್ವದಿಂದ ಕೂಡಿರುವ ಮಕ್ಕಳ ಮನಸ್ಸಿಗೆ ಅರ್ಥವಾಗುವಂತಿರಬೇಕು. ಇದರಲ್ಲಿ ತಂತ್ರಗಾರಿಕೆ ಅತೀ ಅವಶ್ಯಕ ಎನ್ನಬಹುದು. ಅಷ್ಟೇ ಅಲ್ಲದೆ ಇಂತಹ ಸಾಹಿತ್ಯವನ್ನು ಇತರರು ರಚಿಸಲು ಸಾಧ್ಯವಾಗದ ಮಾತಾಗಿದೆ. ಯಾರು ಮಕ್ಕಳ ಮನಸ್ಸನ್ನು ಅರಿತಿರುತ್ತಾರೊ ಅಂತಹವರು ಮಾತ್ರ ಈ ಸಾಹಿತ್ಯವನ್ನು ರಚಿಸಲು ಸಾಧ್ಯ.

ಮುಖ್ಯವಾಗಿ ಮಕ್ಕಳಿಗೆ ಅರ್ಥವಾಗುವ ಸರಳವಾದ ಭಾಷೆ. ಆಸಕ್ತಿಯಿರುವ ವಿಷಯಗಳ ಬಗ್ಗೆ ಮೊದಲು ತಿಳಿದು ನಂತರ ಸಾಹಿತ್ಯವನ್ನು ರಚಿಸಬೇಕಾಗುತ್ತದೆ. ಹೀಗಾಗಿ,

ಮಕ್ಕಳ ಸಾಹಿತ್ಯ ತನ್ನದೇ ಆದ ಒಂದು ವಿಶಿಷ್ಟ ಬೆಲೆ–ನೆಲೆಯನ್ನು ಹೊಂದಿದ್ದು ಪ್ರತಿಯೊಬ್ಬರಿಗೂ ಅತ್ಯಂತ ಪ್ರಿಯವಾದ ಒಂದು ಸಾಹಿತ್ಯವಾಗಿದೆ.

ಕುವೆಂಪುರವರ ಮಕ್ಕಳ ಸಾಹಿತ್ಯದಲ್ಲಿನ ಕಥೆ, ನಾಟಕ, ಕವನಗಳು ಒಂದೊಂದು ಒಂದು ರೀತಿಯಾದ ನೀತಿಯನ್ನು ಹೇಳುವಂತದ್ದಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮಕ್ಕಳ ಸಾಹಿತ್ಯ ಹಿರಿಯರಿಗೆ, ಕಿರಿಯರಿಗೆ ಅತ್ಯಂತ ಪ್ರಿಯವಾದ ಸಾಹಿತ್ಯ ಪ್ರಕಾರವಾಗಿದೆ.

ಪ್ರಸ್ತುತ ಕುವೆಂಪುರವರ ಮಕ್ಕಳ ಸಾಹಿತ್ಯವನ್ನು ಕುರಿತು ಬರೆಯುವ ಸಂದರ್ಭದಲ್ಲಿಯೇ ಅವರ ಸಾಹಿತ್ಯ ದರ್ಶನ, ವ್ಯಕ್ತಿತ್ವ ಪರಿಚಯ, ಮಕ್ಕಳ ಸಾಹಿತ್ಯದಲ್ಲಿ ಕಂಡುಬರುವ ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಬಂಧ ಸಾಹಿತ್ಯದ ಮೂಲಕ ಮಕ್ಕಳಿಗೆ ತಿಳಿಸುವಂತಹ ಮಾನವೀಯ ಮೌಲ್ಯಗಳು ಹಾಗೂ ಮಕ್ಕಳ ಸಾಹಿತ್ಯಕ್ಕೆ ಕುವೆಂಪುರವರ ಪ್ರಭಾವದ ಬಗೆ. ಹೀಗೆ ಇನ್ನೂ ಹಲವು ಅಂಶಗಳನ್ನು ತಿಳಿಸುವುದು ಈ ನಿಬಂಧದ ಉದ್ದೇಶವಾಗಿದೆ.

ಈ ಮೇಲಿನ ಉದ್ದೇಶಗಳನ್ನು ಒಳಗೊಂಡಂತೆಯೇ ಈ ಅಧ್ಯಯನವನ್ನು ಒಟ್ಟು ಆರು ಅಧ್ಯಾಯಗಳನ್ನಾಗಿ ವಿಭಾಗ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಮೊದಲು ಕುವೆಂಪುರವರ ಕಿರುಪರಿಚಯದೊಂದಿಗೆ ಅವರ ವ್ಯಕ್ತಿತ್ವ, ಅವರು ಕನ್ನಡ ಸಾಹಿತ್ಯಕ್ಕೆ ನೀಡಿರುವಂತಹ ಕೊಡುಗೆ, ಅವರ ಸಾಹಿತ್ಯದ ಲಕ್ಷಣಗಳನ್ನು ತಿಳಿಯುವುದರ ಜೊತೆಗೆ ಕುವೆಂಪುರವರು ಇತರ ಸಾಹಿತ್ಯಗಳಂತೆ ಮಕ್ಕಳ ಸಾಹಿತ್ಯಕ್ಕೆ ನೀಡಿರುವಂತಹ ಪ್ರಾಮುಖ್ಯತೆಯನ್ನು ತಿಳಿಯಬಹುದಾಗಿದೆ.

ಎರಡನೇ ಅಧ್ಯಾಯದಲ್ಲಿ ಮಕ್ಕಳ ಸಾಹಿತ್ಯದ ರಚನೆಯ ಬಗ್ಗೆ, ಇಂತಹ ಸಾಹಿತ್ಯದ ಬೆಳವಣಿಗೆಗೆ ಕಾರಣರಾದ ರಚನೆಕಾರರ ಪರಿಚಯವನ್ನು ಮಾಡಲಾಗುತ್ತದೆ. ಮುಖ್ಯವಾಗಿ ಮಕ್ಕಳ ಸಾಹಿತ್ಯದ ಲಕ್ಷಣಗಳು, ಅದರ ವಿಧಗಳು ಹಾಗೂ ಪ್ರಕಾರಗಳನ್ನು ತಿಳಿಸಲಾಗುತ್ತದೆ. ಇಂತಹ ಮಕ್ಕಳ ಸಾಹಿತ್ಯದ ಬಗ್ಗೆ ಅನೇಕರ ಅಭಿಪ್ರಾಯವನ್ನು ಕಲೆ ಹಾಕುವುದು. ಅದರ ಜೊತೆಯಲ್ಲೇ ಕುವೆಂಪುರವರ ಮಕ್ಕಳ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ನಾಟಕಗಳಲ್ಲಿ ಬರುವ ಒಟ್ಟು ಸಾರಾಂಶವನ್ನು ಪರಿಚಯಿಸುವುದು. ಈ ಸಾಹಿತ್ಯದಲ್ಲಿ ಬರುವಂತಹ ನೀತಿಯನ್ನು, ಅಗತ್ಯವಾಗಿರುವ ಅಂಶಗಳನ್ನು ಮಕ್ಕಳಿಗೆ ಅಳವಡಿಸಲು ಕುವೆಂಪುರವರು ಮಾಡಿರುವ ಪ್ರಯತ್ನವನ್ನು ಕಾಣಬಹುದಾಗಿವೆ.

ಮೂರನೇ ಅಧ್ಯಾಯದಲ್ಲಿ ಕುವೆಂಪುರವರ ಮಕ್ಕಳ ಸಾಹಿತ್ಯದಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳನ್ನು ಅವಲೋಕಿಸುವುದು. ಅವರ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ನಾಟಕಗಳಲ್ಲಿ ಬರುವಂತಹ ಮಾನವೀಯ ಗುಣಗಳಾದ 'ಪ್ರೀತಿ, ಪ್ರೇಮ, ವಾತ್ಸಲ್ಯ, ಕರುಣೆ, ಔದಾರ್ಯತೆ, ಭಕ್ತಿ, ಶ್ರದ್ಧೆ, ಕ್ಷಮಾಗುಣ'ಗಳನ್ನು ಮಕ್ಕಳಲ್ಲಿ ಬೆಳೆಸಲು ಮುಂದಾಗಿರುವುದು. ಇದರ ಜೊತೆಯಲ್ಲಿ ಮಕ್ಕಳಿಗೆ ಕವನಗಳ ಮೂಲಕ ಭಾಷಾಭಿಮಾನ, ದೇಶಾಭಿಮಾನವನ್ನು ಪ್ರಚೋದಿಸುವುದು. ಇಂತಹ ಸಾಹಿತ್ಯದಿಂದ ಮಕ್ಕಳ ಬೆಳವಣಿಗೆಯಲ್ಲಿ ಆಗುವ ಪರಿಣಾಮವನ್ನು ತಿಳಿಸಲಾಗುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ ಕುವೆಂಪುರವರಿಗಿರುವ ನಿಸರ್ಗ ಪ್ರೇಮ ಮಕ್ಕಳ ಸಾಹಿತ್ಯದ ಮೂಲಕ ಮಕ್ಕಳಿಗೆ ಇಷ್ಟವಾಗುವ, ಆಸಕ್ತಿ ತೋರುವ ಕಥೆ, ಕವನ, ನಾಟಕಗಳ ಪ್ರಕಾರವಾಗಿ ಅವರಲ್ಲಿ ಪ್ರಕೃತಿಯ ಬಗ್ಗೆ ಆಸಕ್ತಿ ಮೂಡಿಸುವುದು, ಅದರ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ಪ್ರಕೃತಿ – ಮನುಷ್ಯನಿಗಿರುವ ಸಂಬಂಧವನ್ನು ಈ ಮೂಲಕ ಪರಿಚಯಿಸಲಾಗುವುದು. ಈ ಅಧ್ಯಾಯದಲ್ಲಿ ಮುಖ್ಯವಾಗಿ ಕುವೆಂಪುರವರಿಗಿರುವ ನಿಸರ್ಗ ಪ್ರೀತಿಯ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.

ಐದನೇ ಅಧ್ಯಾಯದಲ್ಲಿ ಕುವೆಂಪುರವರು ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾದ ಭಾಷೆಯನ್ನು ಬಳಸಿ ಮಕ್ಕಳ ಸಾಹಿತ್ಯವನ್ನು ಪರಿಚಯಿಸಲು ಮುಂದಾಗಿದ್ದಾರೆ ಎಂಬ ಅಂಶದ ಜೊತೆಗೆ ಮಕ್ಕಳಿಗೆ ಅರ್ಥವಾಗದೆ ಇರುವಂತಹ ಪದಗಳನ್ನು ಆಡುಭಾಷೆಯ ಮೂಲಕ ಪರಿಚಯಿಸಲಾಗುವುದನ್ನು ಕಾಣಲಾಗುತ್ತದೆ.

ಆರನೇ ಅಧ್ಯಾಯವು ಕೊನೆಯ ಅಧ್ಯಾಯವಾಗಿದ್ದು ಇದರಲ್ಲಿ ಒಟ್ಟಾರೆಯಾಗಿ ಕುವೆಂಪುರವರ ಮಕ್ಕಳ ಸಾಹಿತ್ಯದ ಬಗ್ಗೆ, ಆ ಸಾಹಿತ್ಯದಲ್ಲಿ ಬರುವಂತಹ ಮಾನವೀಯ ಮೌಲ್ಯಗಳನ್ನು ಮಕ್ಕಳು ಅಳವಡಿಸಿಕೊಳ್ಳುವುದರ ಬಗ್ಗೆ ಹಾಗೂ ಕುವೆಂಪುಗಿರುವ ನಿಸರ್ಗ ಪ್ರೇಮ, ಅದರ ಬಗ್ಗೆ ಅವರಿಗಿರುವ ಪ್ರೀತಿ, ಕಾಳಜಿಯನ್ನು ಬೆಳೆಯುತ್ತಿರುವ ಮಕ್ಕಳಿಗೆ ತಮ್ಮ ಸಾಹಿತ್ಯದ ಮೂಲಕ ಅವರಲ್ಲೂ ಪ್ರಕೃತಿ ಪ್ರೇಮವನ್ನು ಉಂಟುಮಾಡಲು ಮುಂದಾಗಿರುವುದನ್ನು ಕಾಣಬಹುದು. ಇದಷ್ಟೇ ಅಲ್ಲದೆ ಮಕ್ಕಳ ಸಾಹಿತ್ಯ ಕುಂಠಿತವಾಗುವುದಕ್ಕೆ ಕಾರಣ. ಅದನ್ನು ಪ್ರೋತ್ಸಾಹಿಸಲು ವಹಿಸಬೇಕಾದ ಕ್ರಮಗಳನ್ನು ತಿಳಿಸಲಾಗುವುದು.

ಹೀಗೆ ಮಕ್ಕಳ ಸಾಹಿತ್ಯ ಎಂಬುದು ಕೇವಲ ಸಾಹಿತ್ಯವಾಗಿ ಉಳಿಯದೆ ಬೆಳೆಯುವ ಪ್ರತಿಯೊಂದು ಮಗುವಿಗೂ ಈ ಸಾಹಿತ್ಯವೇ ಪ್ರತಿಯೊಂದು ಹೆಜ್ಜೆಯ ತಳಪಾಯವಾಗಬೇಕು ಎಂಬ ಆಶಯದ ಮೂಲಕ ಕುವೆಂಪುರವರ ಮಕ್ಕಳ ಸಾಹಿತ್ಯವು ಇಂದಿಗೂ ನಮ್ಮ ಸಮಾಜಕ್ಕೆ

ಮುಖ್ಯವಾದ ಕೊಡುಗೆ ಆಗಿದೆ ಎಂದು ಹೇಳಬಹುದು.

ಕುವೆಂಪುರವರ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಮಕ್ಕಳ ಸಾಹಿತ್ಯವನ್ನು ಅವಲೋಕಿಸುವುದಾದರೆ 'ಅಮಲನ ಕಥೆ, ಹಾಳೂರು, ಬೊಮ್ಮನ ಹಳ್ಳಿಯ ಕಿಂದರಿಜೋಗಿ, ನನ್ನ ಮನೆ, ಮೇಘಪುರ, ಮರಿವಿಜ್ಞಾನಿ, ಮೋಡಣ್ಣನ ತಮ್ಮ, ನನ್ನ ಗೋಪಾಲ, ನರಿಗಳಿಗೇಕೆ ಕೋಡಿಲ್ಲ' – ಹೀಗೆ ಕಥೆ, ಕವನ, ನಾಟಕಗಳನ್ನು ಕುವೆಂಪುರವರ ಮಕ್ಕಳ ಸಾಹಿತ್ಯ ಒಳಗೊಂಡಿದ್ದು ಇಂತಹ ಸಾಹಿತ್ಯವನ್ನು ಅಧ್ಯಯನ ಮಾಡುವುದಾಗಿದೆ.

ಈ ಎಲ್ಲಾ ದೃಷ್ಟಿಯಿಂದ ಮಕ್ಕಳ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಯಾವ ರೀತಿ ಬಂದಿದೆ ಎಂಬುದನ್ನು ತಿಳಿಸುವುದೇ ಈ ನಿಬಂಧದ ಮುಖ್ಯ ಉದ್ದೇಶವಾಗಿದೆ.

# ಅಧ್ಯಾಯ ಆರು

# ಉಪಸಂಹಾರ

ಮಲೆನಾಡಿನ ಮಡಿಲಿನಲ್ಲಿ ಪ್ರೀತಿಯ ಕೂಸಾಗಿ ಜನಿಸಿದ ಕುವೆಂಪು ಅವರು ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಒಬ್ಬ ಪ್ರಮುಖ ಸಾಹಿತಿಯಾಗಿ, ತತ್ವಜ್ಞಾನಿಯಾಗಿ, ವೈಚಾರಿಕ ಚಿಂತಕನಾಗಿ, ದಾರ್ಶನಿಕನಾಗಿ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಕನ್ನಡ ನಾಡಿಗೆ ಸಾಂಸ್ಕೃತಿಕ ನೆಲೆಗಟ್ಟನ್ನು ಒದಗಿಸಿದ ಇವರು ವರ್ಗೀಕೃತ ಶ್ರೇಣಿಗಳನ್ನು ವಿರೋಧಿಸುತ್ತಾ ಸಮಾನತೆಯ ಸಮಾಜವನ್ನು ನಿರ್ಮಿಸಬೇಕೆಂಬ ಆದರ್ಶವನ್ನು ಹೊಂದಿದ್ದರು. ಆದ್ದರಿಂದಲೇ, 'ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು' ಎಂಬ ಸಂದೇಶವನ್ನು ವಿಶ್ವದೆಲ್ಲೆಡೆ ಸಾರಿದರು.

ಇಂತಹ ವಿಶ್ವಮಾನವನಿಗೆ ಅನೇಕ ವ್ಯಕ್ತಿಗಳ ಪ್ರಭಾವವಿರುವುದನ್ನು ಕಾಣಬಹುದು. ಅವರಲ್ಲಿ ಮುಖ್ಯವಾಗಿ 'ರಾಮಕೃಷ್ಣ. ಪರಮಹಂಸರು, ವಿವೇಕಾನಂದರು, ವರ್ಡ್ಸ್‌ವರ್ತ್, ಟಾಲ್‌ಸ್ಟಾಯ್ ಹಾಗೂ ಗುರುಗಳಾದ ಟಿ.ಎಸ್.ವೆಂಕಣ್ಣಯ್ಯ ಮತ್ತು ಎ.ಆರ್.ಕೃಷ್ಣಶಾಸ್ತ್ರಿ ಇವರೆಲ್ಲರ ಪ್ರಭಾವ ಕುವೆಂಪುರವರ ಮೇಲೆ ಆಗಿದೆ. ಇಂತಹವರ ಪ್ರಭಾವವನ್ನು ಪಡೆದಿರುವ ಕುವೆಂಪು ಅವರ ಸಾಹಿತ್ಯವು ಕೇವಲ ಸಾಹಿತ್ಯವಾಗಿ ಮಾತ್ರ ಉಳಿಯದೆ ಒಂದು ಅತ್ಯುತ್ತಮವಾದ ಮಟ್ಟವನ್ನು ತಲುಪಿದೆ. ಏಕೆಂದರೆ, ಅವರ ಯಾವುದೇ ಪ್ರಕಾರದ ಸಾಹಿತ್ಯವನ್ನು ಗಮನಿಸಿದರೂ ಅದರಲ್ಲಿ ಒಂದಲ್ಲ ಒಂದು ರೀತಿಯ ಸಂದೇಶವನ್ನು ಕಾಣುತ್ತೇವೆ.

ಕುವೆಂಪು ಅವರು ನವೋದಯ ಕಾಲದ ಪ್ರಮುಖ ಕವಿಯಾಗಿ ಕಾಣಿಸಿಕೊಂಡಿದ್ದಾರೆ. ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅದರಲ್ಲೂ 'ಮಕ್ಕಳ ಸಾಹಿತ್ಯ' ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಮಹತ್ವ ಪೂರ್ಣವಾದುದಾಗಿದೆ.

ಆಧುನಿಕ ಕಾಲಘಟ್ಟದ ಪ್ರಮುಖ ಸಾಹಿತಿಯಾದ ಕುವೆಂಪುರವರು ಮಕ್ಕಳ ಸಾಹಿತ್ಯದಲ್ಲಿ ಕಥೆ, ಕವನ, ನಾಟಕಗಳ ಮೂಲಕ ಸರಳವಾದ ಭಾಷೆಯನ್ನು ಬಳಸಿ ಮಕ್ಕಳಿಗೆ ಮಾನವೀಯ ಮೌಲ್ಯಗಳನ್ನು, ಪ್ರಕೃತಿಯ ಚಿತ್ರಣವನ್ನು ಪರಿಚಯಿಸಿದ್ದಾರೆ.

ಮಕ್ಕಳ ಸಾಹಿತ್ಯದ ಮೂಲಕ ಮಕ್ಕಳ ಮನಸ್ಸು ಮತ್ತು ಬುದ್ಧಿಯನ್ನು ಚುರುಕುಗೊಳಿಸಿದ್ದಾರೆ. ಮಾನವೀಯ ಗುಣಗಳನ್ನು ರೂಪಿಸಿರುವುದರ ಜೊತೆಗೆ ಹಾಸ್ಯದ ಹೊನಲನ್ನೇ ಹರಿಸಿದ್ದಾರೆ. ಇದನ್ನು ನಾವು 'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಎಂಬ ಕವನದಲ್ಲಿ ಕಾಣಲಾಗಿದೆ.

ಮಕ್ಕಳ ಮನಸ್ಸನ್ನು ಅರಿತಿರುವ ಕವಿ ಕುವೆಂಪು ಸರಳವಾದ ಆಡುಭಾಷೆಯನ್ನೇ ಬಳಸಿ ಕವಿತೆ, ಕಥೆ, ನಾಟಕಗಳ ರೂಪದಲ್ಲಿ ರಚಿಸಿರುವುದರಿಂದ ಮಕ್ಕಳ ಮನಸ್ಸನ್ನು ಸೆಳೆದಿದೆ. ಏಕೆಂದರೆ, ಪದ್ಯದ ರೂಪದಲ್ಲಿರುವ ಕವನಗಳು, ಕಲ್ಪನೆಯಿಂದ ರಚಿತವಾಗಿರುವ ಕಥೆಗಳು ಹಾಗೂ ದೃಶ್ಯವಾಗಿ ಮೂಡಿಬಂದಿರುವ ನಾಟಕಗಳು ಮಕ್ಕಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ.

ಕುವೆಂಪುರವರ ಮಕ್ಕಳ ಸಾಹಿತ್ಯದಲ್ಲಿ ಬಂದಿರುವ ಕವನಗಳೆಲ್ಲವೂ ಲಯ, ಪ್ರಾಸವನ್ನು ಒಳಗೊಂಡಂತೆ ಸುಲಲಿತವಾದ ಭಾಷೆಯನ್ನು ಬಳಸಿರುವುದರಿಂದ ಮಕ್ಕಳು ಅದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಇದರಿಂದ ಮಕ್ಕಳ ಮನಸ್ಸಿಗೆ ಉಲ್ಲಾಸ, ಉತ್ಸಾಹ ನೀಡುವ ಕಾವ್ಯ ಚಮತ್ಕಾರವನ್ನು ಕುವೆಂಪು ತಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿಸಿದ್ದಾರೆ.

ಇಂತಹ ಸಾಹಿತ್ಯವನ್ನು ಕೊಡುಗೆಯಾಗಿ ನೀಡಿರುವ ಕುವೆಂಪುರವರು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಂತಹ ಸಾತ್ವಿಕ ಗುಣಗಳಾದ 'ಪ್ರೀತಿ, ಪ್ರೇಮ, ಕರುಣೆ, ಭಕ್ತಿ, ಶ್ರದ್ಧೆ, ಔದಾರ್ಯ' ಹೀಗೆ ಇನ್ನೂ ಹಲವಾರು ಗುಣಗಳನ್ನು ಮಾನವೀಯ ಮೌಲ್ಯಗಳಾಗಿ ಮಕ್ಕಳಲ್ಲಿ ಅಳವಡಿಸುವ ಪ್ರಯತ್ನವನ್ನು ಈ ಸಾಹಿತ್ಯದಲ್ಲಿ ಮಾಡಿದ್ದಾರೆ.

ಇಷ್ಟೆಲ್ಲಾ ಅಲ್ಲದೆ ಕುವೆಂಪು ಅವರ ಮಕ್ಕಳ ಸಾಹಿತ್ಯದಲ್ಲಿ ಬರುವ ಪಾತ್ರಚಿತ್ರಣವಂತು ಅದ್ಭುತವಾಗಿದೆ. ಇಲ್ಲಿ ಮನುಷ್ಯನಿಗಿರುವಷ್ಟೇ ಪ್ರಾಮುಖ್ಯತೆಯನ್ನು ಕನಿಷ್ಠ ಪ್ರಾಣಿಗಳಿಗೂ ದೊರೆತಿರುವುದನ್ನು 'ಅಮಲನ ಕಥೆ'ಯಲ್ಲಿ ನೋಡಿದ್ದೇವೆ. ಹಾಗೂ ಅಮಲ-ಮಧುರನಿಗಿದ್ದ ದೇವರ ಮೇಲಿನ ಭಕ್ತಿ, ಶ್ರದ್ಧೆಯನ್ನು ತಿಳಿಸುವುದರ ಜೊತೆಗೆ ಕವಿಯು ಪ್ರೀತಿಸುವ ಪ್ರಕೃತಿಯ ಚಿತ್ರಣವನ್ನು ಈ ಕಥೆಯಲ್ಲಿ ಬಿಂಬಿಸಿದ್ದಾರೆ.

ಪ್ರಾಣಿ-ಪಕ್ಷಿಗಳಿಗೆ ಒಂದು ಸುಂದರವಾದ ಸಂಬಂಧವನ್ನು ಕಲ್ಪಿಸಿ ಆ ಪ್ರಾಣಿ-ಪಕ್ಷಿಗಳ ಮೂಲಕವೇ ಮಕ್ಕಳಿಗೆ ಅವಶ್ಯಕವಾಗಿರುವ ಮಾನವೀಯ ಗುಣಗಳಲ್ಲಿ ಒಂದಾಗಿರುವ 'ಕರುಣೆ, ಔದಾರ್ಯತೆ, ಸಹಾಯ ಮಾಡುವ ಮನಸ್ಸು' ಇವುಗಳೆಲ್ಲವನ್ನು ಕವಿ 'ನರಿಗಳಿಗೇಕೆ ಕೋಡಿಲ್ಲ' ಎಂಬ ಕಥೆಯ ಮೂಲಕ ತಿಳಿಸಿದ್ದಾರೆ. ನೋಡಲು ಪುಟ್ಟ ಕಥೆಯಂತಿರುವ ಈ ಕೃತಿಯಲ್ಲಿ ಪ್ರಾಣಿ-ಪಕ್ಷಿಗಳ ಮಾತುಕತೆ, ಅವುಗಳು ನಡೆದುಕೊಳ್ಳುವ ರೀತಿ, ಅವುಗಳಲ್ಲಿ ಇರುವಂತಹ ಒಳ್ಳೆಯ ಗುಣಗಳು, ಕೆಟ್ಟಗುಣಗಳು, ಮಾಡಿದಂತಹ ತಪ್ಪಿಗೆ ಸಿಗುವ ಶಿಕ್ಷೆ ಯಾವ ಬಗೆಯದ್ದಾಗಿರುತ್ತದೆ ಎಂಬ ಅಂಶಗಳನ್ನೆಲ್ಲಾ ಒಳಗೊಂಡಂತೆ ಈ ಕಥೆಯನ್ನು ಮಕ್ಕಳಿಗೆ ಪರಿಚಯಿಸಿದ್ದಾರೆ.

'ಹಾಳೂರು' ಕವನವು ಕುವೆಂಪು ಅವರ ಮಕ್ಕಳ ಸಾಹಿತ್ಯಕ್ಕೆ ಒಳಪಟ್ಟಿದ್ದರೂ ಕೂಡ ಈ ಕವನವು ಮಕ್ಕಳಿಗಿಂತ ಹೆಚ್ಚಾಗಿ ದೊಡ್ಡವರಿಗೆ ಅನ್ವಯಿಸುವಂತದ್ದಾಗಿದೆ. ಆದರೂ ಕೂಡ ಮಕ್ಕಳು ತಿಳಿದುಕೊಳ್ಳಬೇಕಾದ ಅನೇಕ ಅಂಶಗಳನ್ನು ಈ ಕವನದಲ್ಲಿ ಕಾಣಲಾಗಿದೆ. ಹಾಗೂ ಈ ಕವನದಲ್ಲಿ ಹಳ್ಳಿಯ ಚಿತ್ರಣ, ಹಳ್ಳಿಗಳು ಹಾಳಾಗುತ್ತಿರುವುದಕ್ಕೆ ಮುಖ್ಯವಾದ ಕಾರಣವೇನು? ಹಾಗೆಯೇ ಮುಂದೆ ಹಾಳಾಗದಂತೆ ವಹಿಸಬೇಕಾದ ಎಚ್ಚರಿಕೆಯನ್ನು ಕವಿಯು ಈ ಕವನದ ಸಾಲುಗಳ ಮೂಲಕ ತುಂಬಾ ಜಾಣ್ಮೆಯಿಂದ ಮಕ್ಕಳ ಮುಂದಿಟ್ಟಿದ್ದಾರೆ.

ಹಿರಿಯರು-ಕಿರಿಯರೆನ್ನದೆ ಪ್ರತಿಯೊಬ್ಬರಿಗೂ ಅಚ್ಚು-ಮೆಚ್ಚಾಗಿರುವ ಕುವೆಂಪು ಅವರ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಕವನದಲ್ಲಿ ಒಂದು ಹಳ್ಳಿಯು ಇಲಿಗಳ ಕಾಟದಿಂದ ಅನುಭವಿಸುವ ಕಷ್ಟವನ್ನು ಕವಿಯು ಹಾಸ್ಯದ ಮೂಲಕ ಪರಿಚಯಿಸುತ್ತಾ ಹೋಗಿದ್ದಾರೆ. ನಂತರದಲ್ಲಿ ಬರುವ ಜೋಗಿಯ ಆಗಮನ ಮಕ್ಕಳಲ್ಲಿ ಹೊಸ ಚೈತನ್ಯವನ್ನು ಮೂಡಿಸುವಂತಹ ದೃಶ್ಯವನ್ನು ಈ ಕೃತಿಯಲ್ಲಿ ಕಾಣಲಾಗಿದೆ.

ನಿಷ್ಕಲ್ಮಷವಾದ, ನಿರ್ಮಲ ಮನಸ್ಸಿಗೆ ದೇವರು ಒಲಿಯುತ್ತಾನೆ. ಅದರಲ್ಲೂ ಮುಗ್ಧ ಮನಸ್ಸಿನಿಂದ ಕೂಡಿರುವ ಮಕ್ಕಳಿಗಂತೂ ಬೇಗನೆ ಒಲಿಯುತ್ತಾನೆ. ಎಂಬುದನ್ನು 'ನನ್ನ ಗೋಪಾಲ' ನಾಟಕದಲ್ಲಿ ಕವಿಯು ಸೊಗಸಾಗಿ, ಕಣ್ಣಿಗೆ ಕಟ್ಟುವಂತಹ ದೃಶ್ಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. 'ಭಕ್ತಿಯ'ಯನ್ನು ಪ್ರಧಾನವಾಗಿಟ್ಟುಕೊಂಡು ರಚಿಸಿರುವ ಈ ನಾಟಕದಲ್ಲಿ ಕುವೆಂಪು ಇಡೀ ಕಾಡಿನ ಸೌಂದರ್ಯವನ್ನು ಪರಿಚಯಿಸಿದ್ದಾರೆ. ಹಾಗೆಯೇ ಇದರಲ್ಲಿ ಬರುವ ಬನದ ಗೋಪಾಲ- ಪುಟ್ಟಗೋಪಾಲನ ಪಾತ್ರಗಳಂತು ಮನಸ್ಸಿಗೆ ತೀರಾ ಹತ್ತಿರವೆಂಬಂತೆ ಭಾಸವಾಗುತ್ತದೆ.

ಪ್ರಕೃತಿಯ ಮಡಿಲಲ್ಲಿ ಹುಟ್ಟಿದ ಕುವೆಂಪು ಅವರು 'ಪ್ರಕೃತಿ'ಯನ್ನೇ ಪ್ರಧಾನವಾಗಿಟ್ಟುಕೊಂಡು ರಚಿಸಿರುವ ಕೃತಿಯೇ 'ಮೋಡಣ್ಣನ ತಮ್ಮ' ಎಂಬ ನಾಟಕ. ಇದರಲ್ಲಿ ಇಡೀ ಪಾತ್ರಗಳು ಮೋಡ ಮತ್ತು ಒಬ್ಬ ಪುಟ್ಟ ಬಾಲಕನ ಸಂಭಾಷಣೆಯನ್ನೇ ಕಾಣಬಹುದಾಗಿದೆ. ಪ್ರಕೃತಿಯ ಸೌಂದರ್ಯದಲ್ಲಿ ಒಂದಾಗಿರುವ ಮೋಡದ ಜೊತೆ ಮಾತಾಡುವ ರೀತಿಯಂತೆ ಕವಿಯು ತನ್ನ ಕಲ್ಪನೆಯ ಮೂಲಕ ನಮಗೆ ಪರಿಚಯಿಸಿರುವುದು ತುಂಬಾ ಸೊಗಸಾಗಿದೆ.

ಕುವೆಂಪು ಅವರ ಮಕ್ಕಳ ಸಾಹಿತ್ಯದಲ್ಲಿ ಬರುವ 'ಶಿಶು ಗೀತಾಂಜಲಿ' ಎಂಬ ಕೃತಿಯು ಮಕ್ಕಳಿಗೆಂದೇ ಮೀಸಲಾಗಿರುವ ಕವನಗಳನ್ನು ಇದರಲ್ಲಿ ರಚಿಸಿದ್ದಾರೆ. 'ನನ್ನ ಮನೆ, ಮರಿವಿಜ್ಞಾನಿ, ಮೇಘಪುರ' ಎಂಬ ಕವನಗಳಲ್ಲಿ ಮಕ್ಕಳ ಬುದ್ಧಿಶಕ್ತಿಯನ್ನು

ಚುರುಕುಗೊಳಿಸುವಂತೆ, ಅವರ ಚಿಂತನಾಶೀಲತೆಯನ್ನು ಬೆಳೆಸುವ ಅನೇಕ ಕವನಗಳನ್ನು ಕುವೆಂಪು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ.

ಈ ಮೇಲೆ ತಿಳಿಸಿರುವ 'ಕಥೆ, ಕವನ, ನಾಟಕ'ಗಳನ್ನು ಕುವೆಂಪು ಅವರ ಮಕ್ಕಳ ಸಾಹಿತ್ಯವು ಒಳಗೊಂಡಿದೆ ಎಂಬುದನ್ನು ಪರಿಚಯಿಸುವುದರ ಜೊತೆಯಲ್ಲೇ ಕುವೆಂಪು ಅವರು ಮಕ್ಕಳ ಸಾಹಿತ್ಯವನ್ನು ರಚಿಸುವುದಷ್ಟೇ ಅಲ್ಲದೆ ಇತರ ಸಾಹಿತ್ಯಗಳಂತೆ ಈ ಸಾಹಿತ್ಯಕ್ಕೂ ನೀಡಿರುವಂತಹ ಪ್ರಾಮುಖ್ಯತೆಯನ್ನು ತಿಳಿಯಲಾಗಿದೆ.

ಮಕ್ಕಳ ಸಾಹಿತ್ಯವು ಮಕ್ಕಳ ಬೆಳವಣಿಗೆಗೆ ಅವಶ್ಯಕವಾಗಿರುವ ಸಾಹಿತ್ಯವಾಗಿದ್ದು, ಇಂತಹ ಸಾಹಿತ್ಯವನ್ನು ಮಕ್ಕಳಿಗೆ ಪರಿಚಯಿಸುವುದರಿಂದ ಅವರಲ್ಲಿ ಮಾನವೀಯ ಮೌಲ್ಯಗಳೆನ್ನುವ 'ಪ್ರೀತಿ, ಪ್ರೇಮ, ಕರುಣೆ, ಭಕ್ತಿ, ಶ್ರದ್ಧೆ' ಹೀಗೆ ಇನ್ನೂ ಅನೇಕ ಗುಣಗಳನ್ನು ಬೆಳೆಸಲು ಪ್ರಯತ್ನ ಪಟ್ಟಿದ್ದಾರೆ.

ನಿಸರ್ಗದ ಮಗುವಾಗಿ ಜನಿಸಿರುವ ಕುವೆಂಪು ಮಕ್ಕಳ ಸಾಹಿತ್ಯದಲ್ಲೂ ಕೂಡ ಪ್ರಕೃತಿಯನ್ನು, ಪ್ರಕೃತಿಯ ಸೌಂದರ್ಯವನ್ನು ಚಿತ್ರಿಸಿರುವುದನ್ನು ಕಂಡಿದ್ದೇವೆ. ಹಾಗೆಯೇ ಕವಿಗಿರುವ ಪ್ರಕೃತಿಯ ಮೇಲಿನ ಪ್ರೀತಿಯು ಎಷ್ಟು ಆಳವಾಗಿದೆ ಎಂಬುದನ್ನು ಅಂದಾಜಿಸಲಾಗಿದೆ. ಅಂತಹ ನಿಸರ್ಗ ಪ್ರೀತಿಯನ್ನು ತಮ್ಮ ಕಥೆ, ಕವನ, ನಾಟಕಗಳ ಮೂಲಕವೇ ಮಕ್ಕಳಲ್ಲೂ ಅಳವಡಿಸಲು ಮುಂದಾಗಿರುವುದನ್ನು ತಿಳಿದುಕೊಂಡಿದ್ದೇವೆ. ಅದರಲ್ಲೂ ಮುಖ್ಯವಾಗಿ ಪ್ರಕೃತಿಗೂ ಮನುಷ್ಯನಿಗಿರುವ ಸಂಬಂಧವನ್ನು ಕೂಡ ಅವರ ಸಾಹಿತ್ಯ ಪ್ರಕಾರಗಳಲ್ಲಿ ಗಮನಿಸಲಾಗಿದೆ.

ಕುವೆಂಪು ಅವರ ಮಕ್ಕಳ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ನಾಟಕ, ಇವುಗಳಲ್ಲಿ ಯಾವುದೇ ಆಗಿರಲಿ ಪ್ರತಿಯೊಂದೂ ಕೂಡ ತುಂಬಾ ಸರಳವಾಗಿ ರಚಿಸಿದ್ದಾರೆ. ಕನ್ನಡ ಭಾಷೆಯನ್ನು ಬಳಸಿಕೊಂಡು ಮಕ್ಕಳ ಮನಸ್ಸಿಗೆ ನಾಟುವಂತಹ, ಆಸಕ್ತಿ ಮುಡಿಸುವಂತಹ ಕನ್ನಡ ಪದಗಳನ್ನು ಪರಿಚಯಿಸಿ ಅರ್ಥಮಾಡಿಸಿದ್ದಾರೆ. ಹಾಗೆಯೇ ಮನೆಗಳಲ್ಲಿ ಆಡುವಂತಹ ಆಡುಭಾಷೆಯನ್ನೇ ಬಳಸಿರುವುದರಿಂದ ಮಕ್ಕಳಿಗೆ ಅರ್ಥವಾಗದೇ ಇರುವಂತಹ ಪದಗಳನ್ನು ಕೂಡ ಸುಲಭವಾಗಿ ಅರ್ಥೈಸಿದ್ದಾರೆ.

ಹೀಗೆ ಪಂಜೆ ಮಂಗೇಶರಾಯರು, ಶಿವರಾಮಕಾರಂತರು ಇನ್ನೂ ಅನೇಕರು ಕನ್ನಡದಲ್ಲಿ 'ಮಕ್ಕಳ ಸಾಹಿತ್ಯವನ್ನು ರಚಿಸುವುದರೊಂದಿಗೆ ಕನ್ನಡ ಸಾಹಿತ್ಯಕ್ಕೆ ಉಡುಗೊರೆಯಾಗಿ ನೀಡಿದರು. ಇಂತಹ ಮಹಾನ್ ವ್ಯಕ್ತಿಗಳಿಂದ ರಚನೆಗೊಂಡ ಮಕ್ಕಳ ಸಾಹಿತ್ಯವನ್ನು ಬೆಳೆಸಿ, ಯಶಸ್ವಿಯಾಗಿ ಮುನ್ನೆಡಿಸಿಕೊಂಡು ಬಂದವರೇ ನಮ್ಮ ರಾಷ್ಟ್ರಕವಿ ಕುವೆಂಪು.

ಇಂತಹ ಸಾಹಿತ್ಯವನ್ನು ಕುವೆಂಪು ತುಂಬಾ ಅಚ್ಚುಕಟ್ಟಾಗಿ ಅತೀ ಜಾಣ್ಮೆಯಿಂದ ರಚಿಸಿ ಮಕ್ಕಳ ಮನಸ್ಸನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಎಲ್ಲೋ ಒಂದು ಕಡೆ ಇತ್ತೀಚಿನ ದಿನಗಳಲ್ಲಿ ಮಕ್ಕಳ ಸಾಹಿತ್ಯದ ರಚನೆಯು ಅಷ್ಟಾಗಿ ಕಂಡುಬರುತ್ತಿಲ್ಲವೆಂಬುದೆ ಬೇಸರದ ವಿಷಯವಾಗಿದೆ. ಈ ಬಗೆಯ ಸಾಹಿತ್ಯ ಕುಂಠಿತ ಆಗಿರುವುದಕ್ಕೆ ಅನೇಕ ಕಾರಣಗಳು, ಸಮಸ್ಯೆಗಳಿರಬಹುದು. ಅಂತಹದ್ದೇನೆ ಸಮಸ್ಯೆಗಳಿದ್ದರು ಅದನ್ನು ಪರಿಹರಿಸಿ ಮುನ್ನೆಡೆಸುವ ಶಕ್ತಿ ನಮ್ಮ ಕೈಲಿದೆ.

ಅಲ್ಪಪ್ರಮಾಣದಲ್ಲಿ ಮಕ್ಕಳ ಸಾಹಿತ್ಯವನ್ನು ಕುರಿತಂತೆ ಅನೇಕ ಲೇಖನಗಳು, ಪ್ರಬಂಧಗಳು ಪ್ರಕಟಗೊಂಡಿದ್ದರೂ ಕೂಡ ಇನ್ನೂ ಹೆಚ್ಚಿನ ಮಟ್ಟದಲ್ಲಿ ಇಂತಹ ಸಾಹಿತ್ಯಗಳು ಹೊರಬರುವ ಅಗತ್ಯವಿದೆ. ಏಕೆಂದರೆ ಈ ಬಗೆಯ ಸಾಹಿತ್ಯವು ಮಕ್ಕಳಿಗೆ ದೊರೆಯುವುದರಿಂದ ಮಕ್ಕಳ ದೃಷ್ಟಿಕೋನ ಬದಲಾಗಿ ಅವರ ಬೆಳವಣಿಗೆಗೆ ಉತ್ತಮಮೌಲ್ಯಗಳನ್ನು ಒದಗಿಸಲು ಸಹಕಾರಿಯಾಗುತ್ತದೆ.

ಸಮಾಜದ ಪ್ರತಿಯೊಬ್ಬ ಸಾಹಿತ್ಯ ಚಿಂತಕರು, ಸಂಶೋಧಕರು ಇಂತಹ ಸಾಹಿತ್ಯವನ್ನು ಶೋಧಿಸಿ ಉನ್ನತಮಟ್ಟದ ಅಧ್ಯಯನ ನಡೆಸಬೇಕಾದ ಅಗತ್ಯವಿದೆ. ಮಕ್ಕಳನ್ನೇ ಕೇಂದ್ರವಾಗಿಟ್ಟುಕೊಂಡು ರಚಿಸುವ ಮಕ್ಕಳ ಸಾಹಿತ್ಯವು ಮಕ್ಕಳ ಬೆಳವಣಿಗೆಗೆ, ಅವರ ಅಭಿವೃದ್ಧಿಗೆ ಅನುಕೂಲವನ್ನುಂಟು ಮಾಡಬೇಕು.

ಹೀಗೆ, ಒಟ್ಟಾರೆಯಾಗಿ ಮಕ್ಕಳ ಸಾಹಿತ್ಯದಿಂದ ಮಕ್ಕಳಿಗಾಗುವ ಉಪಯೋಗವನ್ನು ಅದರ ಅಗತ್ಯತೆಯನ್ನು ಮಕ್ಕಳಿಗೆ ಮನವರಿಕೆ ಮಾಡಬೇಕು. ಮಕ್ಕಳ ಸಾಹಿತ್ಯದ ಬಗ್ಗೆ ಹೆಚ್ಚು ಹೆಚ್ಚು ಸಂಶೋಧನೆಗಳನ್ನು ಕೈಗೊಳ್ಳಬೇಕು. ಮಕ್ಕಳ ಸಾಹಿತ್ಯವನ್ನೇ ಮಕ್ಕಳ ಪಠ್ಯವಾಗಿ ಸೇರಿಸಿ ಅದನ್ನು ಪ್ರಕಟಿಸುವ ಮೂಲಕ ಈ ಸಾಹಿತ್ಯದ ಮಹತ್ವವನ್ನು ತಿಳಿಯುವಂತೆ ಮಾಡಬೇಕು. ಉನ್ನತ ಮಟ್ಟದ ವ್ಯಾಸಂಗದಲ್ಲಿ ಇಂತಹ ಸಾಹಿತ್ಯವನ್ನು ಅಧ್ಯಯನ ಮಾಡುವುದರ ಮೂಲಕ ಮಕ್ಕಳ ಸಾಹಿತ್ಯವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂಬ ಹಲವು ಅಭಿಪ್ರಾಯದೊಂದಿಗೆ ಕುವೆಂಪು ಅವರು ಬೆಳೆಸಿರುವ ಈ ಸಾಹಿತ್ಯವನ್ನು ಇಂದಿನ ರಚನಾಕಾರರು, ಸಂಶೋಧಕರು ಆಸಕ್ತಿವಹಿಸಿ ಮುನ್ನಡೆಸಬೇಕೆಂಬುದೇ ಈ ನಿಬಂಧದ ಆಶಯವಾಗಿದೆ.

# ಅಧ್ಯಯನಾಂಗ

# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ವಿದ್ಯಾರಣ್ಯ – 583276

**2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ**

# ಡಾ. ಮಲ್ಲಿಕಾ ಘಂಟಿ ಅವರ ಬದುಕು ಹಾಗೂ ಸಾಹಿತ್ಯ

**ನಿಬಂಧಕಾರರು**

**ಪ್ರಭುಸ್ವಾಮಿ.ಬಿ**

ನೋಂದಣಿ ಸಂಖ್ಯೆ – KVTM/K 140901030090

**ಕನ್ನಡ ಎಂ.ಫಿಲ್ ವಿದ್ಯಾರ್ಥಿ**

**ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್**

**ಜಯಲಕ್ಷ್ಮೀಪುರಂ, ಮೈಸೂರು**

**ಮಾರ್ಗದರ್ಶಕರು**

**ಡಾ. ಗಣೇಶ**

ಕನ್ನಡ ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ

ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ

**ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್**

**ಜಯಲಕ್ಷ್ಮೀಪುರಂ, ಮೈಸೂರು**

**2014–15**

# ವಿಷಯಸೂಚಿ

## ಡಾ. ಮಲ್ಲಿಕಾ ಘಂಟಿ ಅವರ ಬದುಕು ಹಾಗೂ ಸಾಹಿತ್ಯ


| ಅಧ್ಯಾಯಗಳು | | ಪಠ್ಯ ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ – ೧ | : | ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ | ೧–೯ |
| ಅಧ್ಯಾಯ – ೨ | : | ಮಲ್ಲಿಕಾ ಘಂಟಿ ಅವರ ಬದುಕಿನ ಹಿನ್ನೋಟ : ಪರಿಚಯ | ೧೦–೨೨ |
| ಅಧ್ಯಾಯ – ೩ | : | ಬಂಡಾಯ ಚಿಂತನೆಯ ಪ್ರಾತಿನಿಧಿಕ ರೂಪವಾದ ಕಾವ್ಯ–ನಾಟಕಗಳ ಅಧ್ಯಯನ | ೨೩–೫೪ |
| ಅಧ್ಯಾಯ – ೪ | : | ಜೀವನ ಚರಿತ್ರೆಗಳ ಅಧ್ಯಯನ | ೫೫–೭೦ |
| ಅಧ್ಯಾಯ – ೫ | : | ವಿಮರ್ಶೆ/ಸಂಪಾದನ ಬರಹಗಳು ಹಾಗೂ ಸಾಮಾಜಿಕ ಸಂಶೋಧನೆ ಕುರಿತ ಅಧ್ಯಯನ | ೭೧–೮೮ |
| ಅಧ್ಯಾಯ – ೬ | : | ಸಮಾರೋಪ | ೮೯–೯೩ |
| ಅನುಬಂಧಗಳು | : | ೧. ಆಕರ ಗ್ರಂಥಗಳು<br>೨. ಪರಾಮರ್ಶನ ಗ್ರಂಥಗಳು<br>೩. ಲೇಖನಗಳು/ಜಾಲತಾಣಗಳು<br>೪. ಸಂಶೋಧನ ಪ್ರಬಂಧಗಳು<br>೫. ಪತ್ರಿಕೆಗಳು/ಸಂಶೋಧನೆಗೆ ನೆರವಾದವರು<br>೬. ಮಲ್ಲಿಕಾ ಘಂಟಿಯವರ ಬದುಕಿನ ಹೆಜ್ಜೆಗಳು<br>೭. ಛಾಯಾಚಿತ್ರಗಳು<br>೮. ಲೇಖಕರ ಸಂದರ್ಶನ | ೯೪–೧೧೬ |


* * * * *

ಅಧ್ಯಾಯ ಒಂದು

# ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ

**ಕ**ನ್ನಡ ಸಾಹಿತ್ಯವು ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ಒಂದು ಅಪೂರ್ವ ಸ್ಥಾನವನ್ನು ಅಲಂಕರಿಸಿದೆ. ಇದು ವಿವಿಧ ಭಾಷಾ ಸಾಹಿತ್ಯಕ್ಕೆ ಮಾದರಿಯಾಗಿದೆ. ಪ್ರಾಚೀನ ಕಾಲದಿಂದ ಈ ಹೊತ್ತಿನವರೆಗೆ ತನ್ನದೇ ಆದ ವಿಶಿಷ್ಟ ಆಯಾಮಗಳಲ್ಲಿ ಈ ಸಾಹಿತ್ಯ ತೆರೆದುಕೊಂಡು ವಿಕಾಸ ಹೊಂದಿದೆ. ಜೀವಪರವಾದ ಮೌಲ್ಯಗಳನ್ನು ವೈಜ್ಞಾನಿಕ ಹಾಗೂ ವೈಚಾರಿಕ ಪ್ರಜ್ಞೆಯ ನೆಲೆಯಲ್ಲಿ ತಿಳಿಸುತ್ತಾ ಬಂದಿದೆ. ಕನ್ನಡ ಸಾಹಿತ್ಯಕ್ಕೆ ಪಂಪ, ಬಸವ, ಹರಿಹರ, ಕುಮಾರವ್ಯಾಸ, ಕನಕದಾಸ ಇವರುಗಳ ಕೊಡುಗೆ ಅಪಾರ ಮತ್ತು ವಿಶೇಷವಾದುದು. ಇವರು ಕನ್ನಡ ಸಾಹಿತ್ಯಕ್ಕೆ ವಿಶೇಷ ಮೆರುಗನ್ನು ತಂದುಕೊಟ್ಟವರಲ್ಲಿ ಪ್ರಮುಖರು.

ಕನ್ನಡ ಸಾಹಿತ್ಯದ ಇತಿಹಾಸವನ್ನು ಅಧ್ಯಯನ ಮಾಡುವಾಗ ಮಹಿಳೆ ಮಾತನಾಡಿದ್ದು ಕಡಿಮೆ ಹಾಗೂ ಸ್ವತಃ ಮಹಿಳೆಯೇ ಸಾಹಿತ್ಯ ರಚನೆ ಮಾಡಿದ್ದು ಬಹಳ ವಿರಳ. ಇದಕ್ಕೆ ೧೨ನೇ ಶತಮಾನದ ವಚನಕಾರ್ತಿಯರು ಹಾಗೂ ಆಧುನಿಕ ಕನ್ನಡ ಸಾಹಿತ್ಯ ಹೊರತಾದ ನಿದರ್ಶನವಾಗಿದೆ. ಆದರೆ ೧೨ನೇ ಶತಮಾನದ ಶರಣರ ಆಂದೋಲನದ ನಂತರ ಮಹಿಳೆ ನೇಪಥ್ಯಕ್ಕೆ ಸರಿದು ಮತ್ತೆ ಆಕೆ ಕಾಣಿಸಿಕೊಳ್ಳಲು ಆರು ಶತಮಾನಗಳೇ ಬೇಕಾಯಿತು. “ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವಿರಿ”[೧] ಎಂಬ ಹೊನ್ನಮ್ಮನ ಒಂದು ಕ್ಷೀಣ ಸ್ವರವನ್ನು ಬಿಟ್ಟರೆ ೨೦ನೇ ಶತಮಾನದವರೆಗಿನ ಅವಧಿಯಲ್ಲಿ ಮಹಿಳೆಯ ಗಟ್ಟಿ ಧ್ವನಿ ಕೇಳಿಸಲೇ ಇಲ್ಲ.

ವಸಾಹತುಶಾಹಿ ಶಿಕ್ಷಣದ ಪ್ರಭಾವದಿಂದ ಭಾರತದಲ್ಲಿ ಮಹಿಳೆಯ ದೃಷ್ಟಿಕೋನ ಗಟ್ಟಿಗೊಳ್ಳತೊಡಗಿತು. ಸ್ತ್ರೀ ವಿಮೋಚನಾ ಚಳವಳಿಯಿಂದಾಗಿ ಮಹಿಳೆಗೆ ಶಿಕ್ಷಣ ಸೌಲಭ್ಯ ದೊರಕಿ ಸ್ವತಂತ್ರವಾಗಿ ಆಲೋಚನೆ ರೂಢಿಸಿಕೊಳ್ಳಲು ಸಾಧ್ಯವಾಯಿತು. ಕಳೆದ ಎರಡು–ಮೂರು ದಶಕಗಳಿಂದ ಮಹಿಳಾ ಸಾಹಿತ್ಯ ಸ್ತ್ರೀವಾದಿ ಚಿಂತನೆಗಳಿಗೆ ಸ್ಪಂದಿಸುತ್ತಾ ಸಶಕ್ತವಾಗಿ ಮೂಡಿಬರುತ್ತಿದ್ದು, ಪ್ರಜ್ಞಾವಂತ ಮಹಿಳೆಯ ಎತ್ತರದ ಧ್ವನಿ ಕೇಳಿಬರುತ್ತಿದೆ. ಇಂದು ಸ್ತ್ರೀ ತನ್ನ ಅಸ್ಮಿತೆಯನ್ನು ಭದ್ರಪಡಿಸಿಕೊಳ್ಳುತ್ತಿದ್ದಾಳೆ. ಹೆಣ್ಣು ಅಬಲೆಯಲ್ಲ ಸಂಪೂರ್ಣ ಸಬಲೆ ಎಂಬ

ಗ್ರಹಿಕೆಯನ್ನು ಸಾಹಿತ್ಯದಲ್ಲಿ ಮೂಡಿಸುತ್ತಿದ್ದಾಳೆ. ಇಂದಿನ ದಿನಗಳಲ್ಲಿ ಸ್ತ್ರೀವಾದಿ ಚಿಂತನೆಯೇ ತನ್ನ ಅನನ್ಯ ಅಸ್ಮಿತೆಗಾಗಿ ಹೋರಾಟ ಮಾಡುತ್ತಿದೆ.

೨೦ನೇ ಶತಮಾನದ ಆರಂಭದ ದಶಕದಲ್ಲಿ ನಂಜನಗೂಡಿನ ತಿರುಮಲಾಂಬ, ಆರ್.ಕಲ್ಯಾಣಮ್ಮ, ತಿರುಮಲೈ ರಾಜಮ್ಮ, ಎಂ.ಕೆ.ಇಂದಿರಾ, ತ್ರಿವೇಣಿ, ಜಯದೇವಿತಾಯಿ ಲಿಗಾಡೆ ಮೊದಲಾದವರು ತಮ್ಮ ಅನನ್ಯತೆಯನ್ನು ಅನಾವರಣಗೊಳಿಸಿದರು. ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯು ಎಪ್ಪತ್ತು–ಎಂಬತ್ತರ ದಶಕದಲ್ಲಿ ಕಾಣಿಸಿ ಕೊಳ್ಳಲಾರಂಭಿಸಿತು. ಅಲ್ಲಿಂದ ಅದು ಜೀವಮುಖಿಯಾಗಿ, ಸಮಾಜಮುಖಿಯಾಗಿ, ಮಾನವೀಯ ನೆಲೆಯಲ್ಲಿ, ವೈಚಾರಿಕ ಪ್ರಜ್ಞೆಯನ್ನೊಳಗೊಂಡು ಇಂದು ಹಲವು ಬರಹಗಾರ್ತಿಯರ ಮೂಲಕ ಪ್ರಚಲಿತವಾಗಿದೆ. ಎಂಬತ್ತರ ದಶಕದಿಂದೀಚೆಗೆ ಶೈಲಜಾ ಉಡಚಣ, ಮಾಲತಿ ಪಟ್ಟಣಶೆಟ್ಟಿ, ಎನ್.ವಿ.ಭಾಗ್ಯಲಕ್ಷ್ಮೀ, ಕಮಲ ಹೆಮ್ಮಿಗೆ, ಪ್ರತಿಭಾ ನಂದಕುಮಾರ್, ಚ.ಸರ್ವಮಂಗಳಾ ಮೊದಲಾದ ಸ್ತ್ರೀವಾದಿ ಚಿಂತಕಿಯರು ಬೆಳಕಿಗೆ ಬಂದರು. ಪ್ರಸ್ತುತ ವಿಜಯಾ ದಬ್ಬೆ, ಬಿ.ಎನ್.ಸುಮಿತ್ರಾಬಾಯಿ, ಕಮಲಾ ಹಂಪನಾ, ಮಲ್ಲಿಕಾ ಘಂಟಿ, ಸವಿತಾ ನಾಗಭೂಷಣ, ಗೀತಾ ನಾಗಭೂಷಣ ಮುಂತಾದವರು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಬಹುರೂಪಿಯಾಗಿ ತಮ್ಮ ಸ್ತ್ರೀ ಅಸ್ಮಿತೆಯನ್ನು ಛಾಪಿಸುತ್ತಿದ್ದಾರೆ.

ಕನ್ನಡ ಸಾಹಿತ್ಯದ ವಿವಿಧ ಸಾಹಿತ್ಯಕ ಚಳವಳಿಗಳಲ್ಲಿಯೇ ಬಹಳ ವಿಶೇಷವಾದ ಸ್ಥಾನವನ್ನು ದಲಿತ–ಬಂಡಾಯ ಸಾಹಿತ್ಯ ಪಡೆದುಕೊಂಡಿದೆ. ಈ ದಲಿತ ಬಂಡಾಯ ಸಾಹಿತ್ಯ ಇಂದು ಕಾವ್ಯ, ಕತೆ, ಕಾದಂಬರಿ, ನಾಟಕ ಮುಂತಾದ ವಿವಿಧ ಆಯಾಮಗಳಲ್ಲಿ ಬೆಳೆದುನಿಂತಿದೆ. ಈ ವಿಶಿಷ್ಟವಾದ ಸಾಹಿತ್ಯದಲ್ಲಿ ಸ್ತ್ರೀಯ ಬದುಕಿನಲ್ಲಿ ಆದ ಬದಲಾವಣೆಗಳನ್ನು ಗುರ್ತಿಸುವ ಸನ್ನಿವೇಶದಲ್ಲಿ 'ಬದಲಾವಣೆ' ಎಂದರೇನು? ಎಂಬುದನ್ನು ಸ್ಪಷ್ಟ ಪಡಿಸಿಕೊಳ್ಳಬೇಕಾಗಿದೆ. ಈ ಹೊತ್ತಿನ ವ್ಯವಸ್ಥೆ ಪಲ್ಲಟ ಹಾಗೂ ಸಮಾಜೋ–ಆರ್ಥಿಕ ಸಮಾನತೆಯಿಂದ ಉಭಯಲಿಂಗ ಪ್ರಧಾನ, ಮನುಷ್ಯ–ಮನುಷ್ಯನನ್ನು ಗೌರವಿಸುವ, ಪ್ರೀತಿಸುವ, ಆದರದಿಂದ ಕಾಣುವ ಮೌಲ್ಯಗಳು ಪರ್ಯಾಯ ಸಮಾಜವನ್ನು ನಿರ್ಮಿಸುವುದು, ದಲಿತ–ಬಂಡಾಯ ಸಾಹಿತ್ಯ ಚಳವಳಿಯ ಆಶಯ. ಈ ಸಂದರ್ಭದಲ್ಲಿ ಬಂದಿರುವ ಸಾಹಿತ್ಯದಲ್ಲಿ ಅಸಹಾಯಕರ ಪರವಾದ, ಪ್ರತಿಭಟನೆ ಹಾಗೂ ಸಮಾಜ ಬದಲಾವಣೆಯ ಆಶಯಗಳ ಹಿನ್ನಲೆಯಲ್ಲಿ ಸ್ತ್ರೀ ಬದುಕನ್ನು ಕುರಿತ ಆಲೋಚನೆಗಳು ನಡೆದಿವೆ.

ಹೆಣ್ಣನ್ನು ಮನುಷ್ಯಳೆಂದು ಈ ಸಮಾಜ ಪರಿಗಣಿಸದೆ ಇದ್ದಿದ್ದರಿಂದ ಹೋರಾಟದ ಹಾದಿಯ ಮೂಲಕ ಅವಳು ತನ್ನ ಹೆಜ್ಜೆ ಗುರುತುಗಳನ್ನು ದಾಖಲಿಸುತ್ತಿದ್ದಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಶೋಷಣೆ ಅತ್ಯಂತ ಪ್ರಾಚೀನವಾದುದು. ಆದರೆ ಇತ್ತೀಚೆಗೆ ಕೆಲವೊಮ್ಮೆ ತನಗಾದ ಅನ್ಯಾಯವನ್ನು ಆಕೆ ಹೇಳಿಕೊಂಡಿದ್ದಾಳೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿನ ಕ್ರೌರ್ಯಕ್ಕೆ ಬಲಿಯಾದವರು ಅಸಂಖ್ಯರು. ಅಂಥವರು ಆರಂಭದಲ್ಲಿ ನೇರವಾಗಿ ಪ್ರತಿಭಟನೆ ಮಾಡದೆ, ಸಂಘರ್ಷಕ್ಕೂ ಇಳಿಯದೆ ಹೋಗಿದ್ದರಿಂದ ಅವರ ಅಂತರಾತ್ಮದ ನೋವು, ಆಕ್ರೋಶ, ಅಸಹಾಯಕತೆ, ವ್ಯರ್ಥವಾಗಿ ಹೋದವು. ಹೆಣ್ಣು ಇಂದು ವೈಚಾರಿಕ ನೆಲೆಯಲ್ಲಿ ಚಿಂತಿಸುತ್ತಿದ್ದಾಳೆ. ಇಂತಹ ಮಹಿಳೆಯರು ಹೋರಾಟಗಾರರಾಗಿ, ಸ್ತ್ರೀವಾದಿಗಳಾಗಿ ನಮ್ಮ ನಡುವೆ ಕಾಣಿಸಿಕೊಳ್ಳುತ್ತಿದ್ದಾರೆ.

ಇಂತಹ ವೈಚಾರಿಕ ಚಿಂತನೆಯ ಮೂಲಕ ಎಪ್ಪತ್ತರ ದಶಕದಲ್ಲಿ ಹೋರಾಟದ ಉತ್ಪನ್ನವಾಗಿ ಹೊರಹೊಮ್ಮಿದವರು ಮಲ್ಲಿಕಾ ಘಂಟಿಯವರು. ಈ ದಶಕದ ಚಳುವಳಿಗಳು ಸಮಾಜಮುಖಿಯಾದಂತಹವು. ಈ ಚಳವಳಿಯ ಕಾವಿನ ಹಿನ್ನೆಲೆಯಿಂದ ಬಂದ ಮಲ್ಲಿಕಾ ಘಂಟಿಯವರಿಗೆ ಆ ಹೊತ್ತಿನ ಚಳವಳಿ, ಅದರಲ್ಲಿದ್ದ ನ್ಯಾಯಪರ ಹೋರಾಟ ಒಂದು ವಿಭಿನ್ನ ವ್ಯಕ್ತಿತ್ವವನ್ನು ನೀಡಿದವು. ಅಲ್ಲದೆ ಸಾಧಕ ಮಹಿಳೆಯ ಸ್ಥಾನಮಾನವನ್ನು ತಂದುಕೊಟ್ಟವು. ಈ ಹೋರಾಟಗಳಿಂದ ಬಹುದೊಡ್ಡ ವ್ಯಕ್ತಿತ್ವವಾಗಿ ರೂಪುಗೊಂಡ ಮಲ್ಲಿಕಾ ಘಂಟಿಯವರಿಗೆ ಈ ಹೋರಾಟ, ಚಳವಳಿಗಳೇ ಇವರ ಸಾಹಿತ್ಯ ಕೃಷಿಗೆ ಪ್ರೇರಣೆಯನ್ನು ಸ್ಫೂರ್ತಿಯನ್ನು ನೀಡಿದವು.

ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಮಲ್ಲಿಕಾ ಘಂಟಿಯವರ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೃಷಿ ಅನನ್ಯವಾದುದು. "ಮಲ್ಲಿಕಾ ಘಂಟಿಯವರು ಈ ಸಮಾಜದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಹಿಂದುಳಿದ ಜನಸಮೂಹದಿಂದ ಬೆಳೆದು ಬಂದ ಗಟ್ಟಿಗಿತ್ತಿ. ಸ್ತ್ರೀ ಪರ ಕಾಳಜಿಯನ್ನುಳ್ಳ ಇವರು ಕಾವ್ಯ, ನಾಟಕ, ಜೀವನಚರಿತ್ರೆ, ವಿಮರ್ಶೆ, ಸಂಪಾದನೆ ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ್ದಾರೆ. ಮಲ್ಲಿಕಾರವರು ವಾಸ್ತವವಾದಿ ಚಿಂತನೆಯನ್ನಿಟ್ಟುಕೊಂಡು ಪರ್ಯಾಯ ಸಮಾಜ ನಿರ್ಮಾಣದ ಕನಸನ್ನು ಇಟ್ಟುಕೊಂಡಿರುವಂಥವರು. ಇವರ ವ್ಯಕ್ತಿತ್ವ ಹಾಗೂ ಸಾಹಿತ್ಯದ ವಿಭಿನ್ನ ಆಯಾಮಗಳನ್ನು ದೃಷ್ಟಿಕೋನಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಈ ನಿಬಂಧದ ಉದ್ದೇಶವಾಗಿದೆ.

ಮಲ್ಲಿಕಾಘಂಟಿಯವರು ಈವರೆಗೆ ಪ್ರಕಟಿಸಿರುವ 'ತುಳಿಯದಿರಿ ನನ್ನ' (೧೯೮೬) 'ರೊಟ್ಟಿ ಮತ್ತು ಹುಡುಗಿ' (೧೯೯೯), 'ಈ ಹೆಣ್ಣುಗಳೇ ಹೀಗೆ' (೧೯೮೯), 'ಬೆಲ್ಲದಚ್ಚು ಮತ್ತು ಇರುವೆ ದಂಡು' (೨೦೦೫), ಚಾಜ (ನಾಟಕ ) (೧೯೯೦), 'ಅಹಲ್ಯಾಬಾಯಿ ಹೋಳ್ಕರ್' (೧೯೯೪), 'ಧರಣೀಯ ಮೇಲೊಂದು' (೨೦೦೫), 'ತನು ಕರಗದವರಲ್ಲಿ' (೨೦೦೪), 'ಕನ್ನಡಸಾಹಿತ್ಯ ಮತ್ತು ಮಹಿಳೆ' (೨೦೦೬), 'ಕನ್ನಡದಲ್ಲಿ ಕತೆಗಾರ್ತಿಯರು' (೨೦೦೦) ಈ ಎಲ್ಲಾ ಕೃತಿಗಳು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಲೇಖಕರ ಸ್ತ್ರೀ ಬದುಕಿನ ಅಸ್ಮಿತೆ ಕುರಿತ ಮಹಿಳೆಯ ಮಾನಸಿಕ ಒಳತೋಟಿ, ಸ್ತ್ರೀ ಸಂವೇದನೆಯನ್ನು ಕುರಿತು ಮಲ್ಲಿಕಾ ಘಂಟಿಯವರ ಕಾವ್ಯ, ನಾಟಕ, ವಿಮರ್ಶಾ ಸಂಕಲನ, ಸಂಪಾದಿತ ಕೃತಿಗಳು ಹಾಗೂ ಆ ಕೃತಿಗಳಲ್ಲಿನ ವೈಶಿಷ್ಟ್ಯವನ್ನು ಕುರಿತು ವ್ಯಾಸಂಗ ಮಾಡುವುದು ಇಲ್ಲಿನ ಅಧ್ಯಯನ ಉದ್ದೇಶವಾಗಿದೆ.

"ಡಾ. ಮಲ್ಲಿಕಾ ಘಂಟಿಯವರ ಬದುಕು ಹಾಗೂ ಸಾಹಿತ್ಯ" ಪ್ರಸ್ತುತ ನಿಬಂಧದ ಶೀರ್ಷಿಕೆಯಾಗಿದೆ. ಈ ವಿಷಯವನ್ನು ಬಹು ಆಯಾಮಗಳಲ್ಲಿ ವಿಶ್ಲೇಷಿಸುವ ದೃಷ್ಟಿಯಿಂದ ಒಟ್ಟು ಆರು ಪ್ರಮುಖವಾದ ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ಸಂಶೋಧನೆ ನಡೆಸಲಾಗಿದೆ. ಅವುಗಳೆಂದರೆ:

- ಅಧ್ಯಾಯ–ಒಂದು
  **ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ**
- ಅಧ್ಯಾಯ–ಎರಡು
  **ಮಲ್ಲಿಕಾ ಘಂಟಿ ಅವರ ಬದುಕಿನ ಹಿನ್ನೋಟ : ಪರಿಚಯ**
- ಅಧ್ಯಾಯ–ಮೂರು
  **ಬಂಡಾಯ ಚಿಂತನೆಯ ಪ್ರಾತಿನಿಧಿಕ ರೂಪವಾದ ಕಾವ್ಯ–ನಾಟಕಗಳ ಅಧ್ಯಯನ**
- ಅಧ್ಯಾಯ–ನಾಲ್ಕು
  **ಜೀವನ ಚರಿತ್ರೆಗಳ ಅಧ್ಯಯನ**
- ಅಧ್ಯಾಯ–ಐದು
  **ವಿಮರ್ಶೆ/ಸಂಪಾದನ ಬರಹಗಳು ಹಾಗೂ**
  **ಸಾಮಾಜಿಕ ಸಂಶೋಧನೆ ಕುರಿತ ಅಧ್ಯಯನ**
- ಅಧ್ಯಾಯ–ಆರು

  **ಸಮಾರೋಪ**

**ಅನುಬಂಧಗಳು**

ಈ ರೀತಿಯಾಗಿ ಒಟ್ಟು ಆರು ಅಧ್ಯಾಯಗಳಲ್ಲಿ ಪ್ರಸ್ತುತ ಅಧ್ಯಾಯವನ್ನು ಕೈಗೊಳ್ಳಲಾಗಿದೆ.

ಈ ನಿಬಂಧದ ಕೊನೆಯಲ್ಲಿರುವ ಅನುಬಂಧವು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿರುವ ಪ್ರಧಾನ ಮತ್ತು ಪೂರಕ ಆಕರಗಳ ಸೂಚಿಯನ್ನು ಒಳಗೊಂಡಿದೆ. ಜೊತೆಗೆ ಪ್ರಬಂಧದ ರಚನೆಯ ಸಂದರ್ಭದಲ್ಲಿ ಪರಾಮರ್ಶಿಸಿದ ಪ್ರಮುಖ ಗ್ರಂಥಗಳು, ಲೇಖನಗಳು, ಸಂಶೋಧನಾ ಪ್ರಬಂಧಗಳು, ಪತ್ರಿಕೆಗಳು ಹಾಗೂ ಛಾಯಾಚಿತ್ರಗಳನ್ನು ಅನುಕ್ರಮದಲ್ಲಿ ಜೋಡಿಸಿದೆ. ಅಲ್ಲದೆ ಮಲ್ಲಿಕಾ ಘಂಟಿಯವರ ಬದುಕಿನ ಹೆಜ್ಜೆ ಗುರುತುಗಳು ಮತ್ತು ಲೇಖಕರ ಸಂದರ್ಶನ, ವಿವಿಧ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ನೀಡಿದೆ.

**ಅಧ್ಯಾಯ–೧**

**ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ**

ಪ್ರಸ್ತುತ ನಿಬಂಧದ ಮೊದಲನೆಯ ಅಧ್ಯಾಯವು ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶವನ್ನು ಕುರಿತದ್ದಾಗಿದೆ. ಇದರಲ್ಲಿ ಕನ್ನಡ ಸಾಹಿತ್ಯ, ಮಹಿಳಾ ಸಾಹಿತ್ಯದ ಹಿನ್ನೋಟ ದಲಿತ–ಬಂಡಾಯದ ಸಾಹಿತ್ಯದಲ್ಲಿ ಮಹಿಳೆ ಬೆಳೆದು ಬಂದ ಬಗೆ, ಮಹಿಳಾ ಸಾಹಿತ್ಯ ಇವುಗಳ ಸ್ಥೂಲ ನೋಟವಿದೆ. ಅವುಗಳ ಹಿನ್ನೆಲೆಯಲ್ಲಿ ಮಲ್ಲಿಕಾ ಘಂಟಿಯವರ ಬದುಕು–ಬರಹ ಕುರಿತ ಅಧ್ಯಯನವನ್ನು ಮಾಡಲಾಗುತ್ತದೆ.

**ಅಧ್ಯಾಯ–೨**

**ಮಲ್ಲಿಕಾಘಂಟಿ ಅವರ ಬದುಕಿನ ಹಿನ್ನೋಟ : ಪರಿಚಯ**

ಈ ಅಧ್ಯಾಯವು ಮಲ್ಲಿಕಾ ಘಂಟಿ ಅವರ ಜೀವನ–ಸಾಧನೆಯನ್ನು ಪರಿಚಯಿಸುವ ಉದ್ದೇಶವುಳ್ಳದ್ದಾಗಿದೆ. ಜನನ, ತಂದೆ, ತಾಯಿ, ವಿದ್ಯಾಭ್ಯಾಸ, ಬಾಲ್ಯದ ನೆನಪುಗಳು, ಪ್ರಾಧ್ಯಾಪಕಿಯಾಗಿ ವೃತ್ತಿ ಆರಂಭ, ಅನುಭವ, ಹೋರಾಟಗಾರ್ತಿಯಾಗಿ ಸಾಹಿತ್ಯದ ವಿಭಿನ್ನ ಆಯಾಮಗಳಲ್ಲಿ ಕರ್ತವ್ಯ ನಿರ್ವಹಿಸಿದ ಬಗೆ, ಈಗ ಕರ್ತವ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಕುಲಸಚಿವ ಹುದ್ದೆಯ ಜವಾಬ್ದಾರಿಯುತ ಕಾರ್ಯಗಳು, ಪ್ರಗತಿಶೀಲ ಕುಲಸಚಿವರಾಗಿ ಕಾರ್ಯಕ್ಷೇತ್ರ ವಿವರ, ಮಧ್ಯಮ ವರ್ಗದ ಭ್ರಾಮಕ ಜೀವನದಿಂದ ಹೊರಬಂದು ಬೆಳೆದು ನಿಂತ ಬಗೆ, ಕುಟುಂಬದ ಜೊತೆ ಕಳೆದ ಕ್ಷಣಗಳು ಈ ಎಲ್ಲಾ ಅಂಶಗಳ ಕುರಿತ ಅಧ್ಯಯನ ಪ್ರಸ್ತುತ ಅಧ್ಯಾಯದ್ದಾಗಿದೆ.

## ಅಧ್ಯಾಯ-೩

## ಬಂಡಾಯ ಚಿಂತನೆಯ ಪ್ರಾತಿನಿಧಿಕ ರೂಪವಾದ ಕಾವ್ಯ-ನಾಟಕಗಳ ಅಧ್ಯಯನ

ಮಲ್ಲಿಕಾ ಘಂಟಿಯವರ ಸೃಜನಶೀಲ ಕೃತಿಗಳಲ್ಲಿನ ಬಂಡಾಯದ ಧೋರಣೆ ಯನ್ನು ಗುರ್ತಿಸುವುದು ಈ ಅಧ್ಯಾಯದ ಗುರಿಯಾಗಿದೆ. ಇವರ ಚೊಚ್ಚಲ ಕೃತಿಯಾದ 'ತುಳಿಯದಿರಿ ನನ್ನ' ಕವನ ಸಂಕಲನದಲ್ಲಿ ಸಂಪ್ರದಾಯ ವ್ಯವಸ್ಥೆಯನ್ನು ವಿರೋಧಿಸುವ ನಿಲುವು, 'ರೊಟ್ಟಿ ಮತ್ತು ಹುಡುಗಿ' ಸಂಕಲನದಲ್ಲಿನ ಹಸಿವು ಮತ್ತು ಪ್ರೀತಿಯ ಅನಿವಾರ್ಯತೆಯಲ್ಲಿ ಹೆಣ್ಣಿಗೆ ಪ್ರೀತಿಯೇ ನಿರಂತರ ಹಸಿವಾಗಿ ಕಾಡುವ ಅಂಶಗಳು, 'ಬೆಲ್ಲದಚ್ಚು ಮತ್ತು ಇರುವೆ ದಂಡು' ಕಾವ್ಯಕೃತಿಯಲ್ಲಿನ 'ಹೊಸವರುಷ', 'ಅರಿವು' ಮತ್ತು ನಿವೇದನೆಯಂಥ ಕವಿತೆಗಳ ವಿಸ್ಮಯ-ಕಾವ್ಯದ ಪರಿಧಿಯಲ್ಲಿ ಅದು ಹಿಗ್ಗಿರುವ ಬಗೆ, ರಾಜಕೀಯ, ದೇಶಪ್ರೇಮ, ಸಾಮಾಜಿಕ ನ್ಯಾಯ ಇಂತಹ ವಸ್ತುಗಳನ್ನು ಸಮರ್ಥವಾಗಿ ಅಭಿವ್ಯಕ್ತಪಡಿಸಿದ ರೀತಿಯನ್ನೂ ಅದರಲ್ಲಿ ಕಾಣಿಸುವ ಸಮಾಜಮುಖಿ ಧೋರಣೆಯನ್ನೂ ಗುರ್ತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಜೊತೆಗೆ, ಹೆಣ್ಣು ಶೋಷಣೆಗೆ ಒಳಗಾಗಿ ಆಕೆ ಅನುಭವಿಸಿದ ಹಾಗೂ ಅನುಭವಿಸುತ್ತಿರುವ ಯಾತನೆ, ಅಸಹಾಯಕತೆ, ಆಕ್ರೋಶಗಳನ್ನು ಎದುರಿಸಿದ ಬಗೆಯನ್ನು ಮಲ್ಲಿಕಾ ಘಂಟಿಯವರ ಸೃಜನಶೀಲ ಕೃತಿಗಳಲ್ಲಿ ಗುರುತಿಸಿ ಕೂಲಂಕಷವಾಗಿ ಅಧ್ಯಯನ ಮಾಡುವುದು ಈ ಅಧ್ಯಾಯದ ಉದ್ದೇಶವಾಗಿದೆ.

## ಅಧ್ಯಾಯ-೪

## ಜೀವನಚರಿತ್ರೆಗಳ ಅಧ್ಯಯನ

ನಮ್ಮ ಭಾರತೀಯ ಪುರುಷ ಪ್ರಧಾನ ಸಮಾಜದಲ್ಲಿ ಸಾಧಕ ಸ್ತ್ರೀಯರ ಸಂಖ್ಯೆ ಒಂದು ಪುಟ್ಟ ಮೊತ್ತ. ಕೈ ಬೆರಳೆಣಿಕೆಯಷ್ಟು ನಿಲ್ಲುವ ಪ್ರಾತಃಸ್ಮರಣೀಯ ವೀರಮಹಿಳೆಯರು ಬರೀ ಕೀರ್ತಿವಂತರಲ್ಲ, ಸ್ಫೂರ್ತಿದಾಯಿನಿಯರಾಗಿದ್ದರು. "ಪ್ರಸಿದ್ಧ ಪುರುಷನ ಹಿಂದೆ ಒಬ್ಬ ಮಹಿಳೆಯಿರುತ್ತಾಳೆ" ಎನ್ನುವ ಮಾತು, ಹತ್ತಿಕ್ಕಲ್ಪಟ್ಟ ಸ್ತ್ರೀಯನ್ನು ಸಮಾಧಾನ ಪಡಿಸುವ ಹಿತಾಸಕ್ತಿಯಿಂದ ಕೂಡಿದ್ದು, ಪ್ರಸಿದ್ಧ ಪುರುಷರಿಗೆ ಒತ್ತಾಸೆಯಾಗಿರುವ ಮಹಿಳೆಯರ ಮೇಲೆ ಬೆಳಕು ಚೆಲ್ಲಿದರೆ ಪುಟ್ಟಮೊತ್ತ ದೊಡ್ಡ ಮೊತ್ತವಾದೀತು. ನಮ್ಮ ಇತಿಹಾಸದಲ್ಲಿ ವೀರಪುರುಷರಿಗೆ ಶ್ರೇಷ್ಠ ವ್ಯಕ್ತಿಗಳಿಗೆ ಜನ್ಮ ಕೊಟ್ಟವರು ಕೆಲವು ಮಹಿಳೆಯರಾದರೆ ಸ್ವತಃ ಖಡ್ಗ

ಹಿಡಿದು ಯುದ್ಧಭೂಮಿಯಲ್ಲಿದ್ದು ಬಂದವರು ಹಲವರು. ಇನ್ನೂ ಕೆಲವರು ಕೆಲವು ಪ್ರಸಿದ್ಧ ಮಹಿಳೆಯರು ರಾಜ್ಯವಾಳಿದವರಿದ್ದಾರೆ. ಇನ್ನೂ ಕೆಲವರು ಪ್ರೇರಕ ಶಕ್ತಿಯಾಗಿದ್ದು ಪುರುಷ ಕಿರೀಟಕ್ಕೆ ಯಶದ ಗರಿ ಚುಚ್ಚಿದವರಿದ್ದಾರೆ.

ಈ ಅಧ್ಯಾಯದಲ್ಲಿ 'ಅಹಲ್ಯಾಬಾಯಿ ಹೋಳ್ಕರ್' ಎಂಬ ಅಜ್ಞಾತ ಮಹಿಳೆಯ ಬದುಕನ್ನು ಕುರಿತ ಐತಿಹಾಸಿಕ ವಿಚಾರಗಳನ್ನು, ಅವಳ ಸಾಧನೆಯನ್ನು ಹಾಗೂ ಮರಾಠರ ಜೀವನಕ್ರಮವನ್ನು ಕುರಿತು ಸಮಜೋಧಾರ್ಮಿಕ ಸಂಗತಿಗಳನ್ನು ಚರ್ಚಿಸಲಾಗುತ್ತದೆ. ಸಾಧನೆಯೆಂಬುದು ಕೇವಲ ಅಧ್ಯಾತ್ಮದ ಸಾಧನೆಯೊಂದೇ ಅಲ್ಲ. ಬದುಕಿನ ಎಲ್ಲ ರಂಗಗಳಲ್ಲಿಯೂ ಪ್ರಾಮಾಣಿಕ ಪ್ರಯತ್ನಗಳಿಂದ, ಶ್ರದ್ಧೆಯಿಂದ ದುಡಿಯುವುದರ ಮೂಲಕ ಸಾಧನೆ ಮಾಡಲು ಸಾಧ್ಯವೆಂಬುದನ್ನು ತೋರಿಸಿದ ಇಟಗಿ ಭೀಮಾಂಬಿಕೆಯನ್ನು ಹಾಗೂ ಕಿತ್ತೂರು ರಾಣಿ ಚೆನ್ನಮ್ಮನ ಬಲಗೈ ಬಂಟ, ಸತ್ಯ ನಿಷ್ಠೆ, ಪ್ರಾಮಾಣಿಕತೆಯಿಂದ ಕಿತ್ತೂರು ಸಂಸ್ಥಾನ ಉಳಿಸಲು ಪ್ರಯತ್ನಿಸಿದ ಹಾಗೂ ಕರ್ನಾಟಕದಲ್ಲಿ ಸ್ವಾತಂತ್ರ್ಯದ ಮೊದಲ ಕಹಳೆಯನ್ನು ಊದಿದ ವೀರ 'ಸಂಗೊಳ್ಳಿ ರಾಯಣ್ಣ'ನ ಜೀವನಯಾನವನ್ನು ಕುರಿತು ಅನೇಕ ಐತಿಹಾಸಿಕ ವಿಚಾರಗಳನ್ನು ಕುರಿತು ಇದರಲ್ಲಿ ಅಧ್ಯಯನ ಮಾಡಲಾಗುತ್ತದೆ.

**ಅಧ್ಯಾಯ–೫**

**ವಿಮರ್ಶೆ/ಸಂಪಾದನ ಬರಹಗಳು ಹಾಗೂ**
**ಸಾಮಾಜಿಕ ಸಂಶೋಧನೆಗಳ ಅಧ್ಯಯನ**

ವೈದಿಕರು ಸಮಾಜ ಸುಧಾರಕರಾಗಿ ಮತಗಳನ್ನು ಸ್ಥಾಪಿಸಿರಬಹುದು. ಆದರೆ ಯಾವೊಬ್ಬ ಶೂದ್ರನನ್ನು ಗುರುಪರಂಪರೆಯೊಳಗೆ ಬಿಟ್ಟುಕೊಂಡ ನಿದರ್ಶನಗಳಿಲ್ಲ. ಇದಕ್ಕೆ ಅಪವಾದ ವ್ಯಾಸ–ಕನಕರ ಸಂಬಂಧ. ಇದಕ್ಕೂ ಕಾರಣಗಳು ವಿಭಿನ್ನ ನೆಲೆಗಳಲ್ಲಿವೆ. ಇದನ್ನು ಕುರಿತ ಚರ್ಚೆಯನ್ನು ಬಹುಮುಖೀ ನೋಟಗಳಿಂದ ಗ್ರಹಿಸುವ 'ತನುವ ನೇಗಿಲಮಾಡಿ' ಕೃತಿಯಲ್ಲಿ ಕಂಡುಬರುತ್ತದೆ.

'ತನು ಕರಗದವರಲ್ಲಿ' ವಿಮರ್ಶಾ ಸಂಕಲನವು ಅನೇಕ ಚರ್ಚೆಗಳಿಗೆ ಗ್ರಾಸವನ್ನು ಒದಗಿಸಿದೆ. ಈ ಕೃತಿಗೆ ಮುನ್ನುಡಿ ಬರೆದ ಡಾ.ಕೆ.ವಿ. ನಾರಾಯಣ ಅವರು "ಚಾರಿತ್ರಿಕ ಗತಿಯಲ್ಲಿ ಮತ್ತು ಸಮಕಾಲೀನ ಸಂದರ್ಭದಲ್ಲಿ ಮಹಿಳೆಯನ್ನು ಇರಿಸಿ ನೋಡುವುದು, ಕಂಡುಕೊಳ್ಳುವುದು ಇಲ್ಲಿಯ ಲೇಖನಗಳ ಆಶಯ. ಲಿಂಗಾಧಾರಿತ ತಾರತಮ್ಯಗಳು ಬಯಲುಗೊಳ್ಳುವಲ್ಲಿ ಪ್ರಜ್ಞಾಸ್ತರಗಳು ಕೆಲಸ ಮಾಡಿರುವ ವಿಧಾನವನ್ನು ಇಲ್ಲಿ ತೆರೆದಿಡಲು ಯತ್ನಿಸಲಾಗಿದೆ. ಎರಡು ಚಾರಿತ್ರಿಕ ಸಂದರ್ಭಗಳನ್ನು ಮುಕ್ತವಾಗಿ ಚರ್ಚೆಗೆ

ಗುರಿಪಡಿಸುವುದನ್ನು ಇಲ್ಲಿ ಕಾಣುತ್ತೇವೆ"[೨] ಎಂದು ಕೃತಿಯ ಗಂಭೀರ ದರ್ಶನವನ್ನು ತೆರೆದಿಡುತ್ತಾರೆ.

೧೯೨೦ ರಿಂದ ೧೯೮೫ರಲ್ಲಿ ಪ್ರಕಟವಾದ ಕಥೆಗಳನ್ನು ಅಧ್ಯಯನ ಮಾಡಿ ಮಹಿಳಾ ಕಥಾಸಾಹಿತ್ಯದ ವಿಶ್ಲೇಷಣೆಯನ್ನು, ಕಥಾ ಪ್ರಕಾರದ ಬೆಳವಣಿಗೆಯ ಹಂತಗಳನ್ನು ಕಟ್ಟಿಕೊಡುವ ಬಗೆಯನ್ನು ಮಲ್ಲಿಕಾ ಘಂಟಿಯವರ ಸಂಶೋಧನಾ ಕೃತಿಯಲ್ಲಿ ಗಮನಿಸಬಹುದು. 'ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ ಮಹಾಪ್ರಬಂಧವನ್ನು ವಿಶ್ಲೇಷಿಸಲಾಗುತ್ತದೆ.

ಮಲ್ಲಿಕಾಘಂಟಿಯವರ ಈ ಮೇಲಿನ ಸೃಜನೇತರ ಕೃತಿಗಳನ್ನು ಸಮಗ್ರವಾಗಿ ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು.

**ಅಧ್ಯಾಯ–೬**

**ಸಮಾರೋಪ**

ಮಲ್ಲಿಕಾ ಘಂಟಿಯವರು ಇಂದಿನ ವ್ಯವಸ್ಥೆಯನ್ನು ಬದಲಿಸಲು ಪ್ರಯತ್ನಿಸುವ ಬಗೆ, ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಅನಾಚಾರ, ಶೋಷಣೆಯನ್ನು ಬುಡದಿಂದಲೇ ಕಿತ್ತೆಸೆಯುವಂತೆ ಜನರಿಗೆ ಕರೆಕೊಡುವ "ಜನಕಾವ್ಯ"ವನ್ನು ಸೃಷ್ಟಿಸಿದ್ದಾರೆ. ಪ್ರಸ್ತುತ ಅಧ್ಯಾಯದಲ್ಲಿ ಇವರ ಇಂತಹ ಸಾಹಿತ್ಯದ ಉದ್ದೇಶವನ್ನು ಅವರ ಬದುಕು, ವಿಶಿಷ್ಟ ಅನುಭವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗುತ್ತದೆ. ಜೊತೆಗೆ ಮಾನವ ಬದುಕಿನ ಸಹಜ ಗುಣಗಳಾದ ಸ್ತ್ರೀ–ಪುರುಷರ ಪ್ರೀತಿ–ಪ್ರಣಯ, ತವಕ–ತಲ್ಲಣಗಳು, ಈ ಸಮಾಜದ ರಾಜಕೀಯ ಹುನ್ನಾರಗಳು, ದುಷ್ಟ ಆಚರಣೆಗಳನ್ನು ಚರ್ಚಿಸಲಾಗುತ್ತದೆ. ಈ ಎಲ್ಲ ಅಂಶಗಳನ್ನು ಕುರಿತ ಚರ್ಚೆಯನ್ನು ಮುಂದೆ ಬರುವ ಸಾಹಿತ್ಯಾಭ್ಯಾಸಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಸ್ಥೂಲವಾದ ನೆಲೆಯಲ್ಲಿ ಅಧ್ಯಯನ ನಡೆಸುವುದು ಈ ಅಧ್ಯಾಯದ್ದಾಗಿದೆ.

ಇದು ಪ್ರಸ್ತುತ ನಿಬಂಧದ ಸ್ಥೂಲ ಚೌಕಟ್ಟು ಆಗಿದೆ.

ಪುರುಷ ಅಹಂಕಾರವನ್ನು ಪ್ರಶ್ನಿಸುವ ಮೂಲಕ, ಆತ ಹಾಕಿದ ಸಾಮಾಜಿಕ ಬೇಲಿಯನ್ನು ಹೇಗೆ ದಾಟಬೇಕೆಂಬುದನ್ನು ಹೇಳಲು ಹೊರಟಿರುವ ಲೇಖಕರು ಪ್ರತಿಪಾದಿಸುತ್ತಿರುವ ಮೌಲ್ಯಗಳೇನು? ತಮ್ಮ ಸಾಹಿತ್ಯ ಕೃತಿಗಳ ಮೂಲಕ ಈ ಸಮಾಜಕ್ಕೆ

ಯಾವ ಸಂದೇಶವನ್ನು ಕೊಡಲು ಹೊರಟಿದ್ದಾರೆ? ಈ ಎಲ್ಲಾ ಅಂಶಗಳನ್ನು ಈ ಅಧ್ಯಯನದ ವ್ಯಾಪ್ತಿ ಒಳಗೊಂಡಿದ್ದು, ಸುದೀರ್ಘವಾಗಿ ಚರ್ಚಿಸುವ ಉದ್ದೇಶವನ್ನು ಈ ಪ್ರಬಂಧವು ಹೊಂದಿದೆ.

ಮಲ್ಲಿಕಾ ಘಂಟಿ ಅವರ ಕೃತಿಗಳಲ್ಲಿ ಮಹಿಳಾ ನೆಲೆಗಳನ್ನು, ಬಂಡಾಯಪ್ರಜ್ಞೆಯನ್ನು ಶೋಧಿಸುವುದು ಮಾತ್ರವಲ್ಲದೆ ಅವರ ಸಾಹಿತ್ಯದಲ್ಲಿ ಮೈದಾಳಿರುವ ಸಾಮಾಜಿಕ ಆಯಾಮಗಳನ್ನು,ಜೀವನ ಮೌಲ್ಯಗಳನ್ನು ಸಾರ್ವತ್ರಿಕ ಮೌಲ್ಯಗಳನ್ನು, ಸಾಂಸ್ಕೃತಿಕ ಅನನ್ಯತೆಯನ್ನು ವಿಶ್ಲೇಷಿಸುವ ಹಾಗೂ ಸಂಬಂಧದ ಮೇಲೆ ಕುರಿತು ಬೆಳಕನ್ನು ಚೆಲ್ಲುವ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಲಾಗುತ್ತದೆ.

ಒಟ್ಟಾರೆ ಮಲ್ಲಿಕಾ ಘಂಟಿ ಅವರ ಸಾಹಿತ್ಯ ಪ್ರಪಂಚದ ಕಾಳಜಿಗಳನ್ನು, ವೈಶಿಷ್ಟ್ಯಗಳನ್ನು, ಲೇಖಕರ ಮನದಾಳದ ಹಂಬಲವನ್ನು, ಸಾಂಸ್ಕೃತಿಕ ಆವರಣವನ್ನು ಹೆಣ್ಣಿನ ಬದುಕಿನ ಅಸ್ಮಿತೆಯ ವಿಭಿನ್ನ ನೆಲೆಗಳನ್ನು ವೈಚಾರಿಕವಾಗಿ ಯಾವುದೇ ಪೂರ್ವಗ್ರಹ ಪೀಡಿತ ಭಾವನೆಗಳಿಲ್ಲದೆ ಸುದೀರ್ಘವಾದ ಚರ್ಚೆಗೆ ಒಳಪಡಿಸುವ ಉದ್ದೇಶ ಮತ್ತು ವ್ಯಾಪ್ತಿಯನ್ನು ಈ ಸಂಪ್ರಬಂಧವು ಒಳಗೊಂಡಿರುತ್ತದೆ.

## ಕೊನೆಟಿಪ್ಪಣಿಗಳು

೧. ಉದ್ಧೃತ : ರೂಪ ಹಾಸನ ಅವರ ಕವಿತೆಗಳ ವಿಚಾರವಿಮರ್ಶೆ, ಕೆಂಪಹೊನ್ನಯ್ಯ, ೨೦೧೪, ಪು. ೪

೨. 'ತನು ಕರಗದವರಲ್ಲಿ', ಮುನ್ನುಡಿ, ಪು. ೧

೩. ಅಹಲ್ಯಾಬಾಯಿ ಹೋಳ್ಕರ್, ಮುನ್ನುಡಿ, ಪು. ೧

# ಅಧ್ಯಾಯ ಆರು

## ಸಮಾರೋಪ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹಲವಾರು ಜನ ಮಹಿಳೆಯರು ಬರಹದಲ್ಲಿ ತೊಡಗಿದ್ದಾರೆ. ಸ್ಪಷ್ಟವಾಗಿ ಚಳವಳಿ, ಪಂಥಗಳ ಪರಿಧಿಯಲ್ಲಿ ಹೆಜ್ಜೆ ಹಾಕುವುದಾಗದಿದ್ದರೂ ಇವರು ಅಂದಂದಿನ ಸಂದರ್ಭದಲ್ಲಿ ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸಿದ್ದಾರೆ. ತಿರುಮಲಾಂಬಾ, ಕೊಡಗಿನ ಗೌರಮ್ಮ, ಎಚ್.ವಿ.ಸಾವಿತ್ರಮ್ಮ, ಆರ್.ಕಲ್ಯಾಣಮ್ಮ, ಟಿ.ಸುನಂದಮ್ಮ, ತ್ರಿವೇಣಿ, ಅನುಪಮಾ ನಿರಂಜನ, ಗೀತಾ ನಾಗಭೂಷಣ, ಸವಿತಾ ನಾಗಭೂಷಣ ಇವರ ಬರಹಗಳು ಸ್ತ್ರೀ ಪುರುಷ ಸಂಬಂಧಗಳ ಬಗ್ಗೆ ವ್ಯವಸ್ಥೆಯ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಗುರ್ತಿಸುತ್ತೇವೆ.

ಇದೇ ದಿಕ್ಕಿನಲ್ಲಿ ಚಿಂತಿಸುವ, ಬರೆಯುವ, ಬದುಕುತ್ತಿರುವ ಲೇಖಕಿ ಮಲ್ಲಿಕಾ ಘಂಟಿ. ಇವರು ಲಿಂಗಾಧಾರಿತ ಅಸಮಾನತೆಯ ನೆಲೆಯಲ್ಲಿರುವ ಸಾಮಾಜಿಕ ಸಮಸ್ಯೆಗಳನ್ನು ಆಯ್ಕೆ ಮಾಡಿಕೊಂಡು ಸ್ತ್ರೀ ಪರತೆಯನ್ನು ವೈಚಾರಿಕ ಚಿಂತನೆಯಲ್ಲಿ ಎತ್ತಿಹಿಡಿಯುವ ವಿಶಿಷ್ಟ ಬರಹಗಾರರು. ಇವರು ತಮ್ಮ ಕವನ, ನಾಟಕ, ವಿಮರ್ಶೆ ಮೊದಲಾದ ಕ್ಷೇತ್ರಗಳಲ್ಲಿ ಬಂಡಾಯ ಮನೋಧರ್ಮದಿಂದ ದುಡಿಯುತ್ತಿರುವವರು ತಮ್ಮ ಆಸಕ್ತಿಗೆ ಅನುಗುಣವಾದ ವಸ್ತುವನ್ನು ಆಯ್ಕೆ ಮಾಡಿಕೊಂಡು ಅದನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಶೇಷ ಕಾಳಜಿ ವಹಿಸಿ ತಮ್ಮ ಕೌಶಲವನ್ನು ಮೆರೆದಿದ್ದಾರೆ.

ಸಮಕಾಲೀನ ಹಾಗೂ ಪ್ರಸ್ತುತದ ಹಲವು ನಿಜಗಳಿಗೆ ಮೈಕೊಡುವ ಮಲ್ಲಿಕಾ ಘಂಟಿ ಅವರ ಸಂವೇದನೆಯ ಆರೋಗ್ಯಪೂರ್ಣ ಆಶಯವನ್ನು ಕೆಲವು ಹೊಸ ಪರಿಕಲ್ಪನೆಗಳ ಅಡಿಯಲ್ಲಿ ಕಟ್ಟಿಕೊಡುವ ಪ್ರಯತ್ನ ಈ ನಿಬಂಧದ ಮೂಲಕ ಆಗಿದೆ. ಈ ಹೊತ್ತಿನಲ್ಲಿ ಜಾಗತಿಕವಾಗಿ ತಲೆದೋರಿರುವ ಹೊಸ ಬಗೆಯ ಸಮಸ್ಯೆಗಳಿಗೆ ಮುಖಾಮುಖಿಯಾಗುವ, ಪರಿಹಾರಗಳನ್ನು ಶೋಧಿಸುವ ನೆಲೆಗಳನ್ನು ವಿಶೇಷವಾಗಿ ಪರೀಕ್ಷಿಸಲಾಗಿದೆ. ವೈಜ್ಞಾನಿಕ ಹಾಗೂ ವೈಚಾರಿಕತೆಯ ಬೆಳಕಿನಲ್ಲಿ ಸಮಕಾಲೀನ ಆಗುಹೋಗುಗಳನ್ನು ಜೀವಂತವಾಗಿರಿಸಿರುವ ಇವರ ಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸಿರುವ ಪುಟ್ಟ ಪ್ರಯತ್ನ ಈ ನಿಬಂಧದ ರಚನೆಯ ಮೂಲಕ ಸಾಧ್ಯವಾಗಿದೆ.

ಪ್ರಸ್ತುತ ನಿಬಂಧದ ಶೀರ್ಷಿಕೆ **"ಡಾ. ಮಲ್ಲಿಕಾ ಘಂಟಿ ಅವರ ಬದುಕು ಹಾಗೂ ಸಾಹಿತ್ಯ"** ಎಂಬುದಾಗಿದೆ. ಇದು ಸಮಾರೋಪವನ್ನು ಒಳಗೊಂಡಂತೆ ಮುಖ್ಯವಾಗಿ ಆರು ಅಧ್ಯಾಯಗಳಲ್ಲಿ ವಿಸ್ತರಿಸಿಕೊಂಡಿದೆ. ಕನ್ನಡ ಸಾಹಿತ್ಯದ ಸಾಮಾಜಿಕ ಪ್ರಜ್ಞೆಯ ವಿಕಾಸದ

ಯಾದಿಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು, ಮಲ್ಲಿಕಾ ಘಂಟಿಯವರ ಸಾಹಿತ್ಯದಲ್ಲಿ ಅನಾವರಣಗೊಂಡಿರುವ ಬಂಡಾಯ ಪ್ರಜ್ಞೆಯ ಮುಖ್ಯ ನೆಲೆಗಳನ್ನು ಶೋಧಿಸಲು ಪ್ರಯತ್ನಿಸಿದೆ. ಮುಖ್ಯವಾಗಿ ಅವರ ಸಾಹಿತ್ಯ ಸಂವೇದನೆಯ ವಿವಿಧ ನೆಲೆಗಳನ್ನು ಹೊಸ ಸಾಧ್ಯತೆಗಳೊಂದಿಗೆ ಚರ್ಚಿಸಲಾಗಿದೆ. ಈ ಮೂಲಕ ಮಲ್ಲಿಕಾ ಘಂಟಿಯವರ ಸಾಹಿತ್ಯದ ಚಾರಿತ್ರಿಕ ಮಹತ್ವವನ್ನು ಗುರುತಿಸುವ, ಸಾಹಿತ್ಯ ಚಿಂತನೆಯನ್ನು ಮೌಲ್ಯೀಕರಿಸುವ, ಅದಕ್ಕೆ ಕನ್ನಡ ಪರಂಪರೆಯಲ್ಲಿ ಒಂದು ವಿಶೇಷ ಸ್ಥಾನವನ್ನು ಕಲ್ಪಿಸುವ ದಿಕ್ಕಿನಲ್ಲಿ ಈ ಅಧ್ಯಯನವು ನಡೆದಿದೆ.

ಮಲ್ಲಿಕಾ ಘಂಟಿಯವರ ಸಾಹಿತ್ಯವನ್ನು ಸಂಶೋಧನೆಗೊಳಪಡಿಸಿದ ಪ್ರಸ್ತುತ ನಿಬಂಧದ ವಸ್ತು ವಿನ್ಯಾಸವನ್ನು ಹೀಗೆ ಪರಿಚಯಿಸಬಹುದು:

ಈ ನಿಬಂಧದ ಮೊದಲನೆಯ ಅಧ್ಯಾಯವು 'ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ'ವನ್ನು ನಿರ್ದಿಷ್ಟವಾಗಿ ತಿಳಿಸಿದೆ. ಇದರಲ್ಲಿ ಸಾಹಿತ್ಯ, ಕನ್ನಡ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಸಾಹಿತ್ಯದಲ್ಲಿ ಮಹಿಳೆ, ಸ್ತ್ರೀವಾದಿ ಸಾಹಿತ್ಯ ಇವುಗಳ ಸ್ಥೂಲ ನೋಟವಿದೆ. ಇವುಗಳ ಹಿನ್ನೆಲೆಯಲ್ಲಿ ಇಪ್ಪತ್ತನೆಯ ಶತಮಾನದ ಕೊನೆಯ ದಶಕದ ಸಾಹಿತ್ಯದಲ್ಲಿ ಗಟ್ಟಿ ಧ್ವನಿ ಮಾಡುತ್ತಿರುವ ಮಲ್ಲಿಕಾ ಘಂಟಿ ಅವರ ಬದುಕು-ಬರಹವನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಎರಡನೆಯ ಅಧ್ಯಾಯ **"ಮಲ್ಲಿಕಾ ಘಂಟಿ ಅವರ ಬದುಕಿನ ಹಿನ್ನೋಟ : ಪರಿಚಯ"**ದಲ್ಲಿ ಘಂಟಿಯವರ ಜನನ, ತಂದೆ, ತಾಯಿ, ವಿದ್ಯಾಭ್ಯಾಸ, ಬಾಲ್ಯದ ನೆನಪುಗಳು, ವ್ಯಕ್ತಿಯಾಗಿ ಅವರು ಬೆಳೆದ ಪರಿಸರ, ಸಾಮಾಜಿಕ ಕಾಳಜಿ, ಪ್ರಾಧ್ಯಾಪಕಿಯಾಗಿ ಅನುಭವ, ಜೀವನದಲ್ಲಿ ಮಹಿಳಾ ಪರ ಹೊಂದಿದ ಕಾಳಜಿಗಳು, ಆಲೋಚನೆಗಳು, ಮಹಿಳಾ ಚಳವಳಿ, ಪ್ರತಿಭಟನೆಯಿಂದ ಅವರ ಸ್ತ್ರೀ ವಿಮೋಚನೆಯ ಚಿಂತನೆಗಳು, ಲೇಖಕಿಯಾಗಿ ಬರಹಕ್ಕೆ ತೊಡಗಲು ಕಾರಣ ಸ್ನೇಹಪರ ವ್ಯಕ್ತಿತ್ವದಿಂದ ಅಧ್ಯಾಪಕಿಯಾಗಿ ಗಳಿಸಿದ ಆಪ್ತರು, ಶಿಷ್ಯರು ಇವರ ಪ್ರೀತ್ಯಾದಾರ, ಸಾಹಿತ್ಯದಲ್ಲಿ ಸಾಹಿತ್ಯದ ವಿಭಿನ್ನ ಆಯಾಮಗಳಲ್ಲಿ ಯಶಸ್ವಿಯಾದ ಬಗೆ, ಈಗ ಕರ್ತವ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾನಿಲಯದ ಕುಲಸಚಿವರ ಹುದ್ದೆಯ ಜವಾಬ್ದಾರಿಯುತ ಕಾರ್ಯಗಳು, ಪ್ರಗತಿಶೀಲ ಕುಲಸಚಿವರಾಗಿ ಮಾಡಿದ ಮಹತ್ವದ ಕೆಲಸ - ಇವುಗಳ ಜೊತೆಗೆ ಕುಟುಂಬದ ಜೊತೆ ಕಳೆದ ಕ್ಷಣಗಳು ಈ ಎಲ್ಲಾ ಅಂಶಗಳು ಕುರಿತ ಅಧ್ಯಯನವನ್ನು ಈ ಅಧ್ಯಾಯವು ಸ್ಪರ್ಶಿಸಿದೆ.

ಈ ಪ್ರಬಂಧದ ಹೃದಯಭಾಗವಾದ ಮೂರು ಮತ್ತು ನಾಲ್ಕನೆಯ ಅಧ್ಯಾಯಗಳು ಈ ಪ್ರಬಂಧದಲ್ಲಿಯೇ ಹೆಚ್ಚು ನಿಡಿದಾದ ಭಾಗ. ಇಲ್ಲಿ ಸಾಹಿತ್ಯ ಪರಂಪರೆ, ಬಂಡಾಯ ಸಾಹಿತ್ಯ,

ಎಪ್ಪತ್ತರ ದಶಕ, ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ಲೋಹಿಯಾವಾದ, ಮಹಿಳೆ, ಮಹಿಳಾ ಹೋರಾಟ ಅಭಿವ್ಯಕ್ತಿಯನ್ನು ಚರ್ಚಿಸಿದೆ. ಮೂಲತಃ ಹೋರಾಟಗಾರ್ತಿಯಾದ ಮಲ್ಲಿಕಾ ಘಂಟಿ ಇವರ ಸೃಜನಶೀಲ ಕೃತಿಗಳು, ಪ್ರೇರಣೆ, ಕಾವ್ಯ, ನಾಟಕ ಇವುಗಳ ದೃಷ್ಟಿ, ಧೋರಣೆ ಮತ್ತು ಅದರ ಧ್ಯೇಯೋದ್ದೇಶಗಳನ್ನು ಪ್ರತ್ಯೇಕ ಶೀರ್ಷಿಕೆಯಡಿಯಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಅಲ್ಲದೆ ಮಲ್ಲಿಕಾ ಘಂಟಿಯವರ ಸೃಜನೇತರ ರಚನೆಗಳಾದ ಜೀವನ ಚರಿತ್ರೆ, ಅದರ ಚರಿತ್ರೆ, ಸ್ವರೂಪ, ಲಕ್ಷಣ, ಮಹತ್ವ, ಕನ್ನಡದಲ್ಲಿ ಬಂದಿರುವ ಜೀವನ ಚರಿತ್ರೆಗಳು, ಮಲ್ಲಿಕಾ ಘಂಟಿಯವರ ಜೀವನ ಚರಿತ್ರೆಗಳು, ಇವರ ಒಟ್ಟು ಜೀವನ ಚರಿತ್ರೆಗಳ ಕೇಂದ್ರ ಪ್ರಜ್ಞೆ ಇವುಗಳನ್ನು ಕುರಿತು ಒಟ್ಟಾಗಿ ವರ್ತಮಾನದ ನೆಲೆಯಲ್ಲಿ ಇಟ್ಟು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ಮಲ್ಲಿಕಾ ಘಂಟಿಯವರ ವಿಮರ್ಶಾ ಕೃತಿಗಳು, ಸಂಪಾದಿತ ಕೃತಿಗಳು, ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧಗಳನ್ನು ವಿಮರ್ಶಕಿಯಾಗಿ, ಸಂಪಾದಕಿಯಾಗಿ, ಸಂಶೋಧಕಿಯಾಗಿ ಇತರೆ ಸಾಹಿತ್ಯದ ಒಟ್ಟು ನೋಟವನ್ನು ಒಳಗೊಂಡಂತೆ ಘಂಟಿಯವರ ಪೂರ್ಣ ಸಾಹಿತ್ಯದ ಅಧ್ಯಯನವನ್ನು ಮಾಡಲಾಗಿದೆ.

ಕೊನೆಯ ಅಧ್ಯಾಯ ಒಟ್ಟು ನಿಬಂಧದ ಸಾರ ಸಂಗ್ರಹವಾಗಿದೆ. ಇದು ಮಲ್ಲಿಕಾ ಘಂಟಿಯವರ ಒಟ್ಟು ಸಾಹಿತ್ಯವನ್ನು ಮೌಲ್ಯಮಾಪನ ಮಾಡುವ ಉದ್ದೇಶದಿಂದ ಕೂಡಿದ್ದಾಗಿದೆ. ಇವರ ಸಾಮಾಜಿಕ ಚಿಂತನೆಯ ಬಹುರೂಪಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸಲಾಗಿದೆ.

**ಅಧ್ಯಯನದ ಪ್ರಧಾನ ನೆಲೆಗಳು ಮತ್ತು ಫಲಿತಗಳು**

ಪ್ರಸ್ತುತ ನಿಬಂಧದ ಅಧ್ಯಯನದ ಕೆಲವು ತಾತ್ವಿಕ ನೆಲೆಗಳು ಮತ್ತು ಅಧ್ಯಯನದಿಂದ ಕಂಡುಕೊಂಡ ಫಲಿತಾಂಶಗಳನ್ನು ಈ ಕೆಳಕಾಣಿಸಿದಂತೆ ಸ್ಥೂಲವಾಗಿ ಪಟ್ಟಿ ಮಾಡಬಹುದು.

೧. ಬರೆಯುವುದನ್ನು ಒಂದು ಜವಾಬ್ದಾರಿಯುತ ಕಾಯಕವೆಂದು ಕೊಂಡಿರುವವರು ಮಲ್ಲಿಕಾ ಘಂಟಿ. ಅವರು ಸಾಮಾಜಿಕ ಒತ್ತಡ ತೀವ್ರಗೊಂಡಾಗ ಬರೆದು ತೀವ್ರಗತಿಯಲ್ಲಿ ಬದುಕಿಗೆ ಚಾಚಿಕೊಳ್ಳುವವರು ಹಾಗೂ ಇವರ ಸಾಹಿತ್ಯದಲ್ಲಿ 'ಕಲೆಗಾಗಿ ಕಲೆಯಲ್ಲ, ಬದಲಿಗೆ ಬದುಕಿಗಾಗಿ ಕಲೆ' ಎಂಬುದನ್ನು ಪ್ರತಿಪಾದಿಸುತ್ತಾರೆ. ಇದನ್ನು ಇವರ ಈ ಅಧ್ಯಯನದಲ್ಲಿ ಹಲವು ನಿದರ್ಶನಗಳ ಮೂಲಕ ಕಾಣಬಹುದು.

೨. ಇವರದು 'ಸುಧಾರಣವಾದವನ್ನು ನಂಬದೇ ಬದಲಾವಣಾವಾದವನ್ನು ನಂಬುವಂಥಹ ವ್ಯಕ್ತಿತ್ವ'. ಇವರು ವ್ಯವಸ್ಥಾ ವಿರೋಧಿ ಸಾಹಿತ್ಯ ರಚನೆ ಮಾಡುವವರು. ಇವರ ಸಾಹಿತ್ಯ ಓದುಗರನ್ನು ಗಾಢ ಚಿಂತನೆಗೆ ತೊಡಗಿಸುವಲ್ಲಿ ಸಫಲವಾಗುತ್ತವೆ. ಬದುಕಿನ

ತೀವ್ರತೆ, ಪ್ರೀತಿ, ಮತ್ತು ವಿಷಾದಗಳ ಛಾಯೆಯನ್ನು ಮನದಲ್ಲಿ ಮೂಡಿಸಿ ಬಿಡುತ್ತದೆ. ಕೊನೆಗೆ ವಾಸ್ತವದ ಅಂಗಳಕ್ಕೆ ತಂದು ನಿಲ್ಲಿಸುತ್ತವೆ. ಹಸಿವಿನ ಅನಿವಾರ್ಯತೆಯನ್ನು ಮತ್ತು ಪ್ರೀತಿಯ ಸಾರ್ಥಕತೆಯನ್ನು ಅರಿಯುವಂತೆ ಮಾಡುತ್ತವೆ.

೩. 'ಸಮಾಜವಾದದ ನಿಲುವು' ಪ್ರಸ್ತುತ ಅಧ್ಯಯನದ ಒಂದು ಮುಖ್ಯ ತಾತ್ವಿಕ ನೆಲೆ. ಕೋಮುವಾದದಂತಹ ಸಾಮಾಜಿಕ ವಿಷಯಗಳ ಬಗ್ಗೆ ವಿಶಾಲವಾದ ಎಡಪಂಥೀಯವೆನ್ನಬಹುದಾದ ದೃಷ್ಟಿಕೋನದಿಂದ ಬರೆಯುವ ಇವರ ಸಾಹಿತ್ಯವನ್ನು ಲೇಖಕರ ಚಿಂತನೆಗಳ ಅಧ್ಯಯನಗಳ ಮೂಲಕ ತೆರೆದು ತೋರಿಸಿದೆ.

೪. ಸ್ತ್ರೀ ಸಂವೇದನೆಯನ್ನು ಗುರುತಿಸುವ ನೆಲೆಯಲ್ಲಿ ಈ ಅಧ್ಯಯನ ಸಾಗಿದೆ. "ಹೆಣ್ಣು ಅಬಲೆಯಲ್ಲಿ ಸಂಪೂರ್ಣ ಸಬಲೆ" ಎಂಬ ಗ್ರಹಿಕೆಯ ಹಿನ್ನಲೆಯಲ್ಲಿ ಈ ಅಧ್ಯಯನ ನಡೆದಿದೆ. ಕಳೆದ ಎರಡು ಮೂರು ದಶಕದ ಅತ್ಯಂತ ಶಕ್ತ, ಬಲಿಷ್ಠ ಹಾಗೂ ಬುದ್ಧಿಮತೆಯುಳ್ಳವಳು ಸ್ತ್ರೀ ಎಂಬುದನ್ನು ಪ್ರಸ್ತುತ ಅಧ್ಯಯನವು ಗುರುತಿಸಿದೆ.

೫. ವಿಶೇಷವಾಗಿ ಗುರುತಿಸಿದ್ದೇನೆಂದರೆ 'ಬಂಡಾಯ ಪ್ರಜ್ಞೆ' ಇವರ ಬರಹಗಳು ಬಂಡಾಯ ಧ್ವನಿಯ ಪ್ರಾತಿನಿಧಿಕ ರೂಪಗಳು. ಇವುಗಳಲ್ಲಿ ಮುಖ್ಯವಾಗಿ ಗಮನಸೆಳೆಯುವುದೆಂದರೆ ಈ ಬರಹಗಳ ಶೈಲಿ. ಸಾಹಿತ್ಯ, ವಿಮರ್ಶೆಯ ಪಂಡಿತಶೈಲಿಯನ್ನು ಬಿಟ್ಟು ಮಲ್ಲಿಕಾ ಅವರು ತಮ್ಮದೇ ಆದ ವಿಶಿಷ್ಟ ಜನಪದೀಯ ಶೈಲಿಯನ್ನು ರೂಢಿಸಿಕೊಂಡಿದ್ದುನ್ನು ಇಲ್ಲಿನ ಅಧ್ಯಯನದಲ್ಲಿ ತಿಳಿಯಲಾಗಿದೆ.

೬. ಎಲ್ಲಕ್ಕಿಂತ ಮುಖ್ಯವಾಗಿ, ಜೀವಸಮಾನತೆಯ ನೆಲೆಯಲ್ಲಿ ಅವರು ಸಾಗಿರುವ ದೂರವನ್ನು ಆ ದಿಕ್ಕಿನ ಪಯಣದಲ್ಲಿ ಎದುರಾದ ಸವಾಲು-ಸಂದಿಗ್ಧತೆಗಳನ್ನು, ಅದನ್ನು ಮುಖಾಮುಖಿಯಾಗಿಸುವ ನಿಟ್ಟಿನಲ್ಲಿ ಸೃಷ್ಟಿಯಾದ ಪ್ರತಿರೋಧ ಚಿಂತನೆಯನ್ನು ಪ್ರಸ್ತುತ ಅಧ್ಯಯನದಲ್ಲಿ ವಸ್ತುನಿಷ್ಠವಾಗಿ ಶೋಧಿಸಲು ಪ್ರಯತ್ನಿಸಿದೆ.

ಇದಲ್ಲದೆ ಈ ನಿಬಂಧವು ನಿಸರ್ಗತತ್ವ, ಜೀವನಶ್ರದ್ಧೆ, ಜಾಗತಿಕ ಪ್ರಜ್ಞೆ ಮುಂತಾದ ನೆಲೆಗಳಿಂದ ಮಲ್ಲಿಕಾ ಘಂಟಿಯವರ ಸಾಹಿತ್ಯವನ್ನು ಅಧ್ಯಯನ ನಡೆಸಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಮಲ್ಲಿಕಾ ಘಂಟಿ ಅವರ ಸಾಹಿತ್ಯ ಚಿರಂತನವಾದದ್ದು, ಇವರ ಸಾಹಿತ್ಯ ಸ್ತ್ರೀ ಬದುಕಿನ ಆಳ-ಅಗಲಗಳನ್ನು ಕಟ್ಟಿಕೊಡುತ್ತದೆ. ಮಹಿಳೆಯ ಅಂತರಂಗದ ಅರಿವನ್ನಷ್ಟೇ ಕೇವಲ ಅನಾವರಣಗೊಳಿಸದೇ ಇಡೀ ಸ್ತ್ರೀವಾದಿ ಪ್ರಜ್ಞೆ, ಬಂಡಾಯ ಪ್ರಜ್ಞೆ – ಇವುಗಳನ್ನು ಕುರಿತು ಚಿಂತಿಸಿದೆ.

ಇವರ ಸಾಹಿತ್ಯ 'ಪ್ರತಿರೋಧದ ಚೈತನ್ಯ ಗಂಗೆ'. ಇವರು ತಮ್ಮ ಕಾವ್ಯ-ನಾಟಕಗಳಲ್ಲಿ ಬಳಸಿರುವ ಪ್ರತಿಮೆ-ರೂಪಕಗಳನ್ನು ಕುರಿತಂತೆ ವಸ್ತು ವಿನ್ಯಾಸದ ಬಗ್ಗೆ ಸಂಶೋಧನೆ ಕೈಗೊಳ್ಳಲು ಸಾಕಷ್ಟು ಅವಕಾಶಗಳಿವೆ. ಲಿಂಗಾಧಾರಿತ ಅಸಮಾನತೆಯ ನೆಲೆಯಲ್ಲಿರುವ ಸಾಮಾಜಿಕ ಸಮಸ್ಯೆಗಳನ್ನು ಆಯ್ಕೆ ಮಾಡಿಕೊಂಡು ಸ್ತ್ರೀಪರತೆಯನ್ನು ವೈಚಾರಿಕ ನೆಲೆಯಲ್ಲಿ ಎತ್ತಿಹಿಡಿಯುವ ಮಲ್ಲಿಕಾ ಘಂಟಿ ವಿಶ್ವವಿದ್ಯಾನಿಲಯದ ಕುಲಸಚಿವದ ಉನ್ನತ ಹುದ್ದೆಗೆ ಏರಿದ್ದು, ಹಂತಹಂತವಾಗಿ ಅವರ ಪರಿಶ್ರಮ, ಸತ್ಯಸಂಧತೆ, ಪ್ರಾಮಾಣಿಕತೆ ಅವರನ್ನು ತನ್ನ ವಂಶದಲ್ಲಿ ಅಪೂರ್ವವೆಂಬಂತೆ ಈ ಎತ್ತರಕ್ಕೆ ತಂದು ನಿಲ್ಲಿಸಿದೆ. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಅಧ್ಯಯನದ ಕಡೆಗೆ ಆಸಕ್ತಿ ತಳೆದು, ನೆರೆಹೊರೆ ಯವರಿಗಿಂತ ಭಿನ್ನವಾದ ದಾರಿ ತುಳಿದದ್ದೇ ಒಂದು ಕ್ರಾಂತಿ. ಇದೇ ಕ್ರಾಂತಿಕಾರಕ ಶ್ರದ್ಧೆ ಅವರನ್ನು ಹೊಸ ಮನುಷ್ಯಳನ್ನಾಗಿ ರೂಪಾಂತರಿಸಿದೆ.

ಮಲ್ಲಿಕಾ ಘಂಟಿಯವರು ವಿಚಾರ ಮಂಡನೆಗೆ ತಕ್ಕ ವಿಧಾನವನ್ನು ಭಾಷೆಯನ್ನು ರೂಢಿಸಿಕೊಂಡಿದ್ದಾರೆ. ಸಂದೇಹಗಳಿಲ್ಲದ ದಾರಿಯಲ್ಲಿ ಸಾಗುವ ಬಗೆ ಇವರಿಗೆ ಕರಗತವಾಗಿದೆ. ಎಲ್ಲಿಯೂ ಸೈದ್ಧಾಂತಿಕ ಬದ್ಧತೆಯನ್ನು ಬಿಟ್ಟುಕೊಡದ ಇವರು ಪ್ರಗತಿಪರ ಆಲೋಚನೆಗಳ ಮೂಲಕ ಗಂಭೀರ ವಿಷಯಗಳನ್ನು ಮಂಡಿಸಿದ್ದಾರೆ. ಸಾಮಾಜಿಕ ಅನ್ಯಾಯ, ಸ್ತ್ರೀ ಶೋಷಣೆ ಕಂಡುಬಂದಲ್ಲಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಾರೆ ಪ್ರತಿಭಟಿಸುತ್ತಾರೆ.

ಒಟ್ಟಾರೆಯಾಗಿ, ಮಲ್ಲಿಕಾ ಘಂಟಿಯವರ ಬರಹ, ಚಿಂತನೆಗಳ ಅಧ್ಯಯನ ಬಹುಪ್ರಯತ್ನಗಳನ್ನು ಬಯಸುವಂತದ್ದು, ಹೆಚ್ಚಿನ ದುಡಿಮೆ ಬೇಡುವಂತದ್ದು. ಈ ದಿಕ್ಕಿನಲ್ಲಿ ಪ್ರಸ್ತುತ ಅಧ್ಯಯನ ಒಂದು ಆರಂಭಿಕ ಪ್ರಯತ್ನ ಎಂದು ಮಾತ್ರ ಹೇಳಬಹುದು.

# ಅಧ್ಯಯನಾಂಗ

# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ವಿದ್ಯಾರಣ್ಯ – ೫೮೩೨೭೬**

**೨೦೧೪–೧೫ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ**

# ಡಾ. ಎಂ.ಎಸ್.ವೇದಾರವರ ಕಾದಂಬರಿಗಳಲ್ಲಿ ಸ್ತ್ರೀಪಾತ್ರ ಚಿತ್ರಣ


ನಿಬಂಧಕಾರರು

**ಮಧು.ಎಂ**

ನೋಂದಣಿ ಸಂಖ್ಯೆ – KVTM/K 140901030091

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

**ಡಾ. ಗಣೇಶ**

ಕನ್ನಡ ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ,

ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ


**ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್**

**ಜಯಲಕ್ಷ್ಮೀಪುರಂ, ಮೈಸೂರು**

**೨೦೧೪–೧೫**

# ಪರಿವಿಡಿ

## ಡಾ. ಎಂ.ಎಸ್.ವೇದಾರವರ ಕಾದಂಬರಿಗಳಲ್ಲಿ ಸ್ತ್ರೀಪಾತ್ರ ಚಿತ್ರಣ


| ಅಧ್ಯಾಯಗಳು | | ಪಠ್ಯ ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ – ೧ | : | ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | ೧–೪ |
| ಅಧ್ಯಾಯ – ೨ | : | ಲೇಖಕಿಯ ಇತಿ–ವೃತ್ತ, ವೃತ್ತಿ–ಪ್ರವೃತ್ತಿ | ೫–೭ |
| ಅಧ್ಯಾಯ – ೩ | : | ಕಾದಂಬರಿಗಳ ಉಗಮ ಮತ್ತು ಬೆಳವಣಿಗೆ | ೮–೧೧ |
| ಅಧ್ಯಾಯ – ೪ | : | ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ | ೧೨–೧೭ |
| ಅಧ್ಯಾಯ – ೫ | : | ಕಾದಂಬರಿಗಳಲ್ಲಿ ಸ್ತ್ರೀವಾದ ನೆಲೆಯ ವಿಶ್ಲೇಷಣೆ | ೧೮–೮೩ |
| | | ಉಪಸಂಹಾರ | ೮೪–೯೦ |
| | | ಗ್ರಂಥಸೂಚಿ | ೯೧ |


* * * * *

# ಅಧ್ಯಾಯ – ೧

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಮಾನ್ಯವಾಗಿ ಯಾವುದೇ ಭಾಷೆಯ ಉದಯದೊಡನೆ ಒಂದು ಬಗೆಯ ಸಾಹಿತ್ಯದ ಉದಯವೂ ಆಗುತ್ತದೆ. ಹಾಗಾಗಿ ಕನ್ನಡ ಸಾಹಿತ್ಯವು ಪ್ರಾಚೀನ ಸಾಹಿತ್ಯಗಳಲ್ಲೊಂದಾಗಿದೆ. ಅಪಾರವಾದ ಸಾಹಿತ್ಯ ರಚನೆಯಿಂದಾಗಿ ಸಮೃದ್ಧಿ ಹೊಂದಿರುವ ಕನ್ನಡ ಸಾಹಿತ್ಯವು ವಿಶ್ವಸಾಹಿತ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ನಮ್ಮ ಕನ್ನಡ ಸಾಹಿತ್ಯ ಕೃತಿಗಳು ಚಂಪೂ, ರಗಳೆ, ಷಟ್ಪದಿ, ತ್ರಿಪದಿ ಮೊದಲಾದ ಪ್ರಾಚೀನ ಸಾಹಿತ್ಯ ರೂಪಗಳಿಂದಲ್ಲದೇ ಸಣ್ಣಕಥೆ, ಭಾವಗೀತೆ, ನಾಟಕ, ಕಾದಂಬರಿ ಮಹಾಕಾವ್ಯ ಮುಂತಾದ ಹೊಸಗನ್ನಡ ಸಾಹಿತ್ಯ ಪ್ರಕಾರಗಳು ಬೆಳೆದುಬಂದಿವೆ. ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಸ್ವಚ್ಛಂದವಾದ ನಿರ್ಮಾಣದಿಂದಾದ ಸಾಹಿತ್ಯ ಪ್ರಕಾರವಾಗಿದೆ.

ಸಾಹಿತ್ಯವೂ ಅಭಿವ್ಯಕ್ತಿಯ ಒಂದು ಮಾಧ್ಯಮ. ಪುರುಷರು ಹೇಗೆ ತಮ್ಮ ಭಾವನೆಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸತೊಡಗಿದರೋ ಅಂದಿನಿಂದಲ್ಲೇ ಮಹಿಳೆಯರು ಅಭಿವ್ಯಕ್ತಿಸತೊಡಗಿದರೆಂದರೆ ಆಶ್ಚರ್ಯವಿಲ್ಲ. ಇದಕ್ಕೆ ನಮ್ಮ ಜಾನಪದ ಸಾಹಿತ್ಯವೇ ಸಾಕ್ಷಿ. "ಹೆಣ್ಣು ಆಗುವುದಕ್ಕಿಂತ ಮಣ್ಣು ಆಗುವುದೇ ಲೇಸು" ಮಣ್ಣಿನ ಮೇಲೆ ಮರವಾಗಿ ಇದ್ದರೆ ತಣ್ಣನೆಯ ನೆರಳಾಗಿ ಇದ್ದೇನು. ಗಂಡು ಹೆಣ್ಣು ಎಂಬುದು ಕೇವಲ ದೇಹ ವ್ಯತ್ಯಾಸ ಅಷ್ಟೇ. ಗಂಡಸಿನಂತೆಯೇ ಆಲೋಚಿಸುವ, ಸ್ಪಂದಿಸುವ, ಪ್ರತಿಭಟಿಸುವ ಶಕ್ತಿ ಹೆಣ್ಣಿಗಿದೆ. ಇದನ್ನೇ ಕನ್ನಡದ ಆದ್ಯ ವಚನಕಾರನಾದ ದೇವರ ದಾಸಿಮಯ್ಯ ಸೊಗಸಾಗಿ ಹೀಗೆ ಹೇಳಿದ್ದಾನೆ. "ಮೊಲೆ ಮೂಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು ಇವೆರಡರ ನಡುವೆ ಉಳಿವಾತ್ಮ ಗಂಡು ಅಲ್ಲ, ಹೆಣ್ಣು ಅಲ್ಲ ಕಾಣ ರಾಮನಾಥ".

೧೨ನೇ ಶತಮಾನದಲ್ಲಿ ನಡೆದ ವಚನಕ್ರಾಂತಿಯಲ್ಲಿ ಹಿಂದೆಂದೂ ದೇಶದ ಯಾವುದೇ ಭಾಗದಲ್ಲೂ ಪಾಲ್ಗೊಳ್ಳದಷ್ಟು ಮಹಿಳೆಯರು ಅನುಭವ ಮಂಟಪದಲ್ಲಿ ದಿಟ್ಟವಾದ ಚರ್ಚೆಗೆ ಇಳಿದುದುಂಟು. "ನಭೂತೋನ ಭವಿಷ್ಯತಿ" ಎನಿಸಿದ ಅಕ್ಕ ಮಹಾದೇವಿ, ಮುಕ್ತಾಯಕ್ಕ. ಆಯ್ದಕ್ಕಿ ಲಕ್ಕಮ್ಮ, ಸೂಳೆಸಂಕವ್ವ ಮುಂತಾದವರು ವಚನಗಳನ್ನು ರಚಿಸಿದುಂಟು. ಅಲ್ಲದೆ ಕಂತಿ, ಹೆಳವನಕಟ್ಟೆ ಗಿರಿಯಮ್ಮ ಸಂಚಿ ಹೊನ್ನಮ್ಮ, ಶೃಂಗಾರಮ್ಮ ಮುಂತಾದವರು ತಮ್ಮ ಸಾಹಿತ್ಯದಿಂದ ಪ್ರಖ್ಯಾತರಾಗಿದ್ದಾರೆ. ಹೀಗೆ ಪರಂಪರಾನುಗತವಾಗಿ ಮಹಿಳೆಯರು ರಚಿಸಿಕೊಂಡು ಬಂದ ಸಾಹಿತ್ಯ ಪರಂಪರೆಯನ್ನು ಆಧುನಿಕ ಯುಗದಲ್ಲೂ ಮಹಿಳೆಯರು ಮುಂದುವರಿಸಿಕೊಂಡು ಬಂದರು.

ಆಧುನಿಕ ಕನ್ನಡ ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ ಪ್ರಮುಖವಾದ ನಾಲ್ಕು ಘಟ್ಟಗಳನ್ನು ಕಾಣಬಹುದಾಗಿದೆ. ಮೊದಲನೆಯ ಘಟ್ಟದ ಲೇಖಕಿ ತಿರುಮಲಾಂಬಾ. ಶ್ಯಾಮಲಾ ಬೆಳಗಾಂವಕರ ಮೊದಲಾದವರು ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಬಗ್ಗೆಯೇ ಹೆಚ್ಚು ಒತ್ತುಕೊಟ್ಟವರು ಆಗಿನ ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಗೆ ಸ್ವಂತ ಅಸ್ತಿತ್ವದ ಬಗ್ಗೆ ಯೋಚಿಸಬೇಕೆನ್ನುವ ಕಲ್ಪನೆಯೇ ಇರಲಿಲ್ಲ. ಮಹಿಳೆ ಹೆಂಡತಿಯಾಗಿ, ವಿಧವೆಯಾಗಿ ಅಥವಾ ವೇಶ್ಯೆಯಾಗಿ ಹೀಗೆ ಪುರುಷನ ಸಂಬಂಧದಲ್ಲಿಯೇ ಗುರುತಿಸಲ್ಪಡುತ್ತಿದ್ದು ಈ ಮೊದಲ ಪೀಳಿಗೆಯ ಮಹಿಳಾ ಸಾಹಿತ್ಯದಲ್ಲಿ ಮಹಿಳಾ ಪಾತ್ರಗಳ ಆಯಾಮಗಳು ಅತ್ಯಂತ ಸೀಮಿತವಾಗಿದ್ದವು. ಆಗಿನ ಕಾಲದಲ್ಲೇ ಈ ಲೇಖಕಿಯರು ಸಮಾಜದಲ್ಲಿ ತಾವು ಕಂಡ ಅನಿಷ್ಟಗಳ ಬಗ್ಗೆ ಕತೆ–ಕಾದಂಬರಿ, ಲೇಖನ ಇತ್ಯಾದಿಗಳನ್ನು ಬರೆದದ್ದೇ ಒಂದು ರೀತಿಯ ಪ್ರತಿಭಟನೆಯ ಸಂಕೇತವಾಗಿತ್ತು.

ಎರಡನೆಯ ಪೀಳಿಗೆಯ ಲೇಖಕಿಯರು ಹೆಚ್ಚು ಗಟ್ಟಿಯಾಗಿ ವ್ಯವಸ್ಥೆಯನ್ನು ಪ್ರತಿಭಟಿಸಿದ್ದು ಕಂಡುಬರುತ್ತದೆ. ತ್ರಿವೇಣಿ, ಅನುಪಮಾ ನಿರಂಜನ, ಗೀತಾ ಕುಲಕರ್ಣಿ, ಶಾಂತಾದೇವಿ ಕಣವಿ, ಎಂ.ಕೆ.ಇಂದಿರಾ ಇವರ ಸಾಹಿತ್ಯದಲ್ಲಿ ಮಹಿಳೆಯ ಅಸ್ತಿತ್ವದ ಬಗ್ಗೆ ಜಾಗೃತಿ ಉಂಟಾಗಿದ್ದು ಸ್ಪಷ್ಟವಾಗಿದೆ. ಇವರ ಕೃತಿಗಳಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆಯನ್ನೂ ಕಾಣಬಹುದು. ಇವರ ಸ್ತ್ರೀಪಾತ್ರಗಳು ಪುರುಷನ ಕೈಗೊಂಬೆಯಾಗಿರದೆ ಸ್ವಂತ ವಿಚಾರಶಕ್ತಿಯುಳ್ಳವರು ಮತ್ತು ಸಮರ್ಥರು ಆಗಿದ್ದು ಒಂದು ಮಹತ್ವದ ಬೆಳವಣಿಗೆಯಾಗಿದೆ.

ಮೂರನೇ ಘಟ್ಟದ ಲೇಖಕಿಯಾದ ರಾಜಲಕ್ಷ್ಮಿ.ಎನ್.ರಾವ್ ಮತ್ತು ವೀಣಾಶಾಂತೇಶ್ವರ ಅವರು ಬದುಕಿನ ಸಂಕೀರ್ಣತೆಯನ್ನು ಸಾಹಿತ್ಯದಲ್ಲಿ ಮೂಡಿಸುವ ಪ್ರಯತ್ನ ಮಾಡಿದರು. ನವ್ಯಸಾಹಿತ್ಯದ ಮುಖ್ಯ ಗುಣಲಕ್ಷಣಗಳಾದ ಅಂತರ್ಮುಖತೆ, ಆತ್ಮಪ್ರಜ್ಞೆ, ಸಂಘರ್ಷದ ಮನೋಭಾವ ಇವನ್ನು ಈ ಘಟ್ಟದ ಸಾಹಿತ್ಯದಲ್ಲಿ ಕಾಣಬಹುದು. ಇವರ ಸಾಹಿತ್ಯದ ಉದ್ದೇಶ ಕೇವಲ ಸಾಮಾಜಿಕ ಅನಿಷ್ಟಗಳನ್ನು ಟೀಕಿಸುವುದಷ್ಟೇ ಆಗಿರಲಿಲ್ಲ. ಸತ್ಯದ ಶೋಧನೆ ಇಲ್ಲಿ ಮುಖ್ಯವಾಗಿತ್ತು.

೪ನೇ ಘಟ್ಟದಲ್ಲಿ ಬರೆಯತೊಡಗಿದ ಲೇಖಕಿಯರು ಸ್ತ್ರೀವಾದ, ಸ್ತ್ರೀಮುಕ್ತಿ ಚಳುವಳಿಗಳಿಂದ ಪ್ರಭಾವಿತರಾಗಿದ್ದರಿಂದ ಅವರ ಸಾಹಿತ್ಯದಲ್ಲಿ ಹೆಚ್ಚಿನ ಸ್ವಂತಿಕೆಯ ಅರಿವು ಹಾಗೂ ಮುಕ್ತ ಅಭಿವ್ಯಕ್ತಿಯನ್ನು ಕಾಣಬಹುದು. ಈ ಹೊತ್ತಿಗೆ ಇವರಿಗೆ ಸಂಪ್ರದಾಯವನ್ನು ಧಿಕ್ಕರಿಸುವ ಎದುರಿಸುವ ಎದೆಗಾರಿಕೆ ಒಂದಿತ್ತು. ವೈದೇಹಿ ಪ್ರತಿಭಾನಂದ ಕುಮಾರ, ಸಾ.ರಾ.ಅಬೂಬಕರ್, ಮಾಲತಿ ಪಟ್ಟಣಶೆಟ್ಟಿ, ನೇಮಿಚಂದ್ರ ಹೇಮಾ ಚ.ಸರ್ವಮಂಗಳಾ

ಇತ್ಯಾದಿ ಲೇಖಕಿಯರು ತಮ್ಮ ಸ್ವಂತ ಅಸ್ತಿತ್ವದ ಬಗ್ಗೆ ಪೂರ್ಣ ಅರಿವು ಉಳ್ಳವರಾಗಿದ್ದು ಅವರ ಸಾಹಿತ್ಯವು ಹಿಂದಿನ ಮಹಿಳಾ ಸಾಹಿತ್ಯಕ್ಕಿಂತ ಸ್ಪಷ್ಟವಾಗಿ ಭಿನ್ನವಾಗಿದೆ.

ಇನ್ನೂ ತೀರಾ ಇತ್ತೀಚಿನ ಲೇಖಕಿಯರಾದ ಮಿತ್ರಾ ವೆಂಕಟ್ರಾಜ್, ಎಚ್.ನಾಗವೇಣಿ, ಎಚ್.ಎಸ್.ಶ್ರೀಮತಿ, ರೇಖಾ ಕಾಖಂಡಕಿ, ಜಾಹ್ನವಿ.ಎಂ.ಎಸ್ ವೇದಾ, ವಿನಯಾವಕ್ಕುಂದ ಇತ್ಯಾದಿ ಮಹಿಳೆಯರ ಸಾಹಿತ್ಯವು ನಮ್ಮ ಸಂಸ್ಕೃತಿಯ ವಿಭಿನ್ನ ಮುಖಗಳನ್ನು ಸಮರ್ಥವಾಗಿ ಚಿತ್ರಿಸುತ್ತದೆ. ತನ್ಮೂಲಕ ಆಧುನಿಕ ಜೀವನದ ಸಂಕೀರ್ಣತೆಯ ವಿವಿಧ ಸ್ತರಗಳ ಸೂಕ್ಷ್ಮ ಒಳನೋಟಗಳನ್ನು ನೀಡುತ್ತದೆ.

ಆಧುನಿಕ ಕನ್ನಡ ಮಹಿಳಾ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಹಾಗೂ ಸ್ತ್ರೀವಾದ ಈ ಎಲ್ಲ ಪಂಥಗಳಲ್ಲಿ ಬೆಳೆದುಬಂದಿದೆ. ಸತಿಸಹಗಮನ, ಬಾಲ್ಯವಿವಾಹ, ವಿಧಾವವಿವಾಹ, ಸ್ತ್ರೀ ಶಿಕ್ಷಣ ಮುಂತಾದ ವಿದ್ಯಾಮಾನಗಳು ಸಾಹಿತ್ಯ ಅಧ್ಯಯನದಲ್ಲಿ ಹೊಸ ದೃಷ್ಟಿಕೋನಗಳನ್ನು ಹುಟ್ಟು ಹಾಕಿದವು. ಆ ಕಾಲಘಟ್ಟದಲ್ಲಿ "ಪ್ರಗತಿಶೀಲ" ಪಂಥವೆಂದು ಗುರುತಿಸಿಕೊಂಡ ಸಾಹಿತ್ಯ ಸೃಜನಶೀಲತೆಯು ಇಂತಹ ಅನೇಕ ಮಹಿಳಾ ವಸ್ತುವಿಷಯಗಳನ್ನು ಕುರಿತು ಕಥನ ಪರಂಪರೆಯನ್ನು ಹುಟ್ಟುಹಾಕಿತು. ನವ್ಯಸಾಹಿತ್ಯ ಪರಂಪರೆಯಲ್ಲಿ ಹೊಸದಾದ ಅಸ್ತಿತ್ವವಾದಿ ಚಿಂತನೆಯ ಮೂಲಕ ಕಥಿತವಾದ ಮಹಿಳಾಲೋಕವು ಹೊಸ ಬಗೆಯ ಅನುಭವಗಳನ್ನು ಹುಟ್ಟುಹಾಕಿತು. ಈ ಎಲ್ಲ ಬದಲಾವಣೆಗಳ ಪಕ್ವತೆಯನ್ನು ಎಪ್ಪತ್ತರ ದಶಕದಲ್ಲಿ ಕಾಣುವಂತಾಯಿತೆಂದು ತೋರುತ್ತದೆ. ಮೈಸೂರು ಬರಹಗಾರರ ಒಕ್ಕೂಟದ ಸ್ಥಾಪನೆ, ದಲಿತ–ಬಂಡಾಯ ಮಹಿಳಾ ಚಳುವಳಿಗಳ ಪ್ರತಿಧ್ವನಿಗಳು ಸಾಹಿತ್ಯ ಅಧ್ಯಯನ ಕ್ರಮಗಳಲ್ಲಿ ಹೊಸ ಬಗೆಯ ದೃಷ್ಟಿಕೋನಗಳನ್ನು ಹುಟ್ಟುಹಾಕಿದವು. ಈ ಹೊಸ ಬಗೆಯ ದೃಷ್ಟಿಕೋನಗಳ ಪರಿಣಾಮವೇ ಸ್ತ್ರೀವಾದ ಚಿಂತನೆ.

ವೇದಾ ಅವರು ಸ್ತ್ರೀವಾದ ನೆಲೆಯಲ್ಲಿ ಚಿಂತಿಸುವ ಲೇಖಕಿಯರಲ್ಲಿ ಒಬ್ಬರು. ಇವರು ಬರೆದಿರುವ ಅನೇಕ ಸಣ್ಣಕಥೆಗಳು, ಕಾದಂಬರಿಗಳು, ಕವನಸಂಕಲನಗಳು, ನಾಟಕಗಳು ಸ್ತ್ರೀವಾದಿ ನೆಲೆಯಲ್ಲಿಯೇ ಬಂದಂತವು. ಇವರು ಒಟ್ಟು ನಾಲ್ಕು ಕಾದಂಬರಿಗಳನ್ನು ರಚಿಸಿದ್ದು ಒಂದೊಂದು ಕಾದಂಬರಿಯೂ ಒಂದೊಂದು ರೀತಿಯ ಸ್ತ್ರೀ ಸಮಸ್ಯೆಯನ್ನು ಹೊರಹಾಕುತ್ತದೆ. ಇವರ ಕಾದಂಬರಿಗಳು ಗ್ರಾಮೀಣ, ಪೌರಾಣಿಕ, ಐತಿಹಾಸಿಕ ಕಾದಂಬರಿಗಳಾಗಿದ್ದು ಅವುಗಳಲ್ಲಿ ಬರುವಂತಹ ಸ್ತ್ರೀಪಾತ್ರವನ್ನು ಅಧ್ಯಯನಕ್ಕೆ ಒಳಪಡಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಸ್ತ್ರೀಪಾತ್ರಗಳನ್ನು ಸಮಕಾಲೀನ ಸಂದರ್ಭದೊಂದಿಗೆ ಹೋಲಿಸಿ ಸಮಸ್ಯೆಗಳನ್ನು ಎದುರಿಸುವ ಸೂಕ್ಷ್ಮ ಒಳನೋಟಗಳನ್ನು ಸ್ತ್ರೀವಾದಿ ನೆಲೆಯಿಂದ ವಿಶ್ಲೇಷಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಈ ಮೇಲಿನ ಉದ್ದೇಶಗಳಿಂದ ನಿಬಂಧದಲ್ಲಿ ಕೆಲವು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯವೂ ನಿಬಂಧದ ಉದ್ದೇಶ ಸ್ವರೂಪ ತಿಳಿಸಲು ಉದ್ದೇಶಿಸಲಾಗಿದೆ.

ಲೇಖಕರ ಕೃತಿಗಳನ್ನು ಅಧ್ಯಯನ ಮಾಡುವಾಗ ಅವರ ವೈಯಕ್ತಿಕ ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿರುವುದು ಅವಶ್ಯಕವಾದ್ದರಿಂದ ಎರಡನೆಯ ಅಧ್ಯಾಯ ಲೇಖಕಿಯ ಪರಿಚಯವನ್ನು ಮಾಡಿಕೊಡಲು ತೀರ್ಮಾನಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಹೊಸಗನ್ನಡ ಸಾಹಿತ್ಯದಲ್ಲಿ ಕಾದಂಬರಿಗಳ ಉಗಮ ಮತ್ತು ಬೆಳವಣಿಗೆಯನ್ನು ಚರ್ಚಿಸಲು ತೀರ್ಮಾನಿಸಲಾಗಿದೆ.

ಕಾದಂಬರಿಗಳನ್ನು ಸ್ತ್ರೀವಾದಿ ನೆಲೆಯಿಂದ ಚರ್ಚಿಸಲು ಉದ್ದೇಶಿಸಿರುವುದರಿಂದ ಸ್ತ್ರೀವಾದ ಬಗೆಗೆ ಕೆಲವು ವಿಷಯ ತಿಳಿಯಲು ಅನುಕೂಲವಾಗಲೆಂದು ನಾಲ್ಕನೆಯ ಅಧ್ಯಾಯವನ್ನು ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ ಚಿಂತನೆ ಎಂದು ಮಾಡಿಕೊಳ್ಳಲು ಅದನ್ನು ವಿಶ್ಲೇಷಿಸಲು ಉದ್ದೇಶಿಸಲಾಗಿದೆ.

ಐದನೆಯ ಅಧ್ಯಾಯವನ್ನು ಎಂ.ಎಸ್.ವೇದಾರವರ ಕಾದಂಬರಿಗಳಲ್ಲಿ ಸ್ತ್ರೀಪಾತ್ರ ಚಿತ್ರಣವನ್ನು ಕಥಾವಸ್ತು, ಸನ್ನಿವೇಶ ನಿರ್ವಹಣೆ, ಪಾತ್ರ ಪೋಷಣೆ, ಅಭಿವ್ಯಕ್ತಿ/ಶೈಲಿ ಮುಂತಾದ ವಿಭಾಗಗಳಾಗಿ ಕಾದಂಬರಿಯನ್ನು ಅಧ್ಯಯನಕ್ಕೆ ಒಳಪಡಿಸಲು ತೀರ್ಮಾನಿಸಲಾಗಿದೆ.

ಒಟ್ಟಾರೆಯಾಗಿ ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ವೇದಾರವರ ಕಾದಂಬರಿಗಳಲ್ಲಿ ಅಧ್ಯಯನದಲ್ಲಿ ತಿಳಿಸಲು ಉದ್ದೇಶಿಸಲಾಗಿದೆ.

## ಕೊನೆಟಿಪ್ಪಣಿಗಳು

೧. ಕನ್ನಡ ಸಾಹಿತ್ಯಕೋಶ, ರಾಜಪ್ಪ ದಳವಾಯಿ, ಪು. ೮೭.

೨. ಕನ್ನಡ ಕಾದಂಬರಿ ಸಾಹಿತ್ಯ ಸಮೀಕ್ಷೆ – ವಿವಿಧ ಲೇಖಕರು, ಕನ್ನಡ ಸಾಹಿತ್ಯ ಸಂಘ, ಮೈಸೂರು, ೧೯೮೭, ಪು. ೩೧.

೩. ಇಲ್ಲಿಂದ ಮುಂದೆಲ್ಲಿಗೆ?, ಡಾ. ವೀಣಾಶಾಂತೇಶ್ವರ, ಪ್ರಸಾರಾಂಗ, ಹಂಪಿ, ಪು. ೧–೨.

೪. ಮಹಿಳಾ ಅಧ್ಯಯನ, ಡಾ. ಶಿವಾನಂದ ಎಸ್.ವಿರಕ್ತಮಠ, ಪ್ರಸಾರಾಂಗ, ಹಂಪಿ, ಪು. ೬೮–೬೯.

# ಉಪಸಂಹಾರ

ಕನ್ನಡ ಸಾಹಿತ್ಯದ ಸೃಜನಶೀಲ ಬರಹಗಾರ್ತಿಯರಲ್ಲೊಬ್ಬರು ಡಾ. ಎಂ.ಎಸ್.ವೇದಾ ಅವರು. ಅವರ ಸಾಹಿತ್ಯ ಬತ್ತಳಿಕೆಯಿಂದ ನಾಲ್ಕು ಕಾದಂಬರಿಗಳು ಮೂಡಿಬಂದಿದೆ. ಈ ಕಾದಂಬರಿಗಳು ತನ್ನ ಒಡಲಲ್ಲಿ ವರ್ತಮಾನದ ಬದುಕಿನ ಹಲವು ಮುಖಗಳನ್ನು ಅನಾವರಣಗೊಳಿಸುತ್ತಾ ಹೋಗುತ್ತವೆ. ಆ ಮೂಲಕ ಸರ್ವಕಾಲಿಕ ಸತ್ಯವೊಂದನ್ನು ಸಾರಿರುವ ಅಪರೂಪದ ಶಕ್ತಿಯಾಗಿ ಹೊರಹೊಮ್ಮಿದೆ. ಇವರ ಕಾದಂಬರಿಗಳು ಸ್ತ್ರೀವಾದಿ ನೆಲೆಯಲ್ಲಿ ರೂಪುಗೊಂಡಿದ್ದು, ಹೆಣ್ಣಿನ ಒಳಜಗತ್ತಿನ ತಳಮಳಗಳನ್ನು ಚಿತ್ರಿಸುವುದರ ಜೊತೆಗೆ ಹೆಣ್ಣು ಯಾವ ರೀತಿ ಗಟ್ಟಿತನವನ್ನು ರೂಪಿಸಿಕೊಂಡು ಜೀವನ ಸಾಗಿಸಬೇಕೆಂಬುದನ್ನು ತೋರಿಸುತ್ತದೆ.

ಜಮೀನು ಕಾದಂಬರಿಯಲ್ಲಿ ದೇವಮ್ಮ ಒಬ್ಬ ಪಕ್ಕಾ ಹಳ್ಳಿಯ ರೈತನ ಮಗಳಾಗಿ ಒಂದು ಜಮೀನನ್ನು ಹೇಗೆ ನಡೆಸಬಹುದು ಎಂಬುದನ್ನು ಬಹಳ ಚೆನ್ನಾಗಿ ಕಾದಂಬರಿಯಲ್ಲಿ ತೋರಿಸಿದ್ದಾರೆ. ಊರಿನವರ ದ್ವೇಷವನ್ನು ಕಟ್ಟಿಕೊಂಡು ಪಕ್ಕದ ಜಮೀನಿನವರ ಹಗೆತನವನ್ನು....... ಆಳುಗಳ ವಂಚನೆಯನ್ನು ಸಹಿಸಿಕೊಂಡು ಜಮೀನನ್ನು ಉಳಿಸಿಕೊಳ್ಳಬೇಕೆಂದು ಹೋರಾಡುವ ಪರಿಯನ್ನು ನೋಡುತ್ತಿದ್ದಾರೆ. ಇಂದಿನ ದಿನಗಳಲ್ಲಿಯೂ ಕೂಡ ಹಳ್ಳಿಯಲ್ಲಿ ಇದೇ ರೀತಿಯ ಗಟ್ಟಿತನದಿಂದ ಜಮೀನು ಮಾಡುತ್ತಿರುವ ಹಳ್ಳಿಯ ಹೆಣ್ಣು ಮಕ್ಕಳು ಕಣ್ಣಮುಂದೆ ಬರುತ್ತಾರೆ. ಅವರ ನೋವು–ನಲಿವು, ಕಷ್ಟ–ನಷ್ಟ ಏನೇ ಇದ್ದರೂ ಎಲ್ಲವನ್ನು ಧೈರ್ಯವಾಗಿ ಎದುರಿಸುವ ಸ್ತ್ರೀಯರ ಪ್ರತಿಬಿಂಬವಾಗಿ ದೇವಮ್ಮನವರು ಜಮೀನು ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾರೆ.

ಇವರ ಎರಡನೆಯ ಕಾದಂಬರಿಯಾದ ಜಯ ಕಾದಂಬರಿಯೂ ಪೌರಾಣಿಕ ಕಾದಂಬರಿಯಾಗಿದ್ದು, ಮಹಾಭಾರತ ಪುರಾಣಗಳ ರತ್ನಗರ್ಭದಲ್ಲಿ ಹುಟ್ಟಿದ ಕಾದಂಬರಿಗಳಲ್ಲಿ ಜಯ ಕಾದಂಬರಿಯೂ ಒಂದು. ಜಯ ಕಾದಂಬರಿಯೂ ಸ್ತ್ರೀವಾದಿ ನೆಲೆಯಲ್ಲಿ ರಚನೆಯಾಗಿದ್ದು, ಮಹಾಭಾರತದಲ್ಲಿ ತಿರಸ್ಕಾರಕ್ಕೆ ಒಳಗಾಗಿದ್ದ ಸ್ತ್ರೀಯರನ್ನು ಅವರ ಪಾತ್ರಗಳನ್ನು ಕುಲ ಧರ್ಮಕ್ಕನುಗುಣವಾಗಿ ಬದಲಾವಣೆಗೊಳಪಡಿಸಿದ್ದಾರೆ. ಲೋಕದ ದೃಷ್ಟಿಯಲ್ಲಿ ಪತಿವ್ರತೆ ಎನಿಸಿಕೊಂಡ ಗಾಂಧಾರಿ ತನ್ನ ಅಂಧಪತಿಯನ್ನು ನೋಡಲು ಸಾಧ್ಯವಿಲ್ಲವೆಂದು ತನಗೆ ಕುರುಡನಾದ ಗಂಡ ಸಿಕ್ಕಿದಕ್ಕೆ ನೊಂದು ಬಟ್ಟೆಯಿಂದ ಕಣ್ಣನ್ನು ಮುಚ್ಚಿಕೊಳ್ಳುತ್ತಾಳೆ ಎಂಬುದು ಆಧುನಿಕ ದೃಷ್ಟಿಯಲ್ಲಿ ಗಾಂಧಾರಿಯನ್ನೂ ಲೇಖಕಿ ನೋಡಿದ ರೀತಿಯಾಗಿದೆ. ಸಮಾಜವು ಗಾಂಧಾರಿಯಂತಹ ಪತಿಭಕ್ತಿಯುಳ್ಳ ಹೆಂಡತಿಯನ್ನು

ಹೊಗಳಿದರೇ ಹೊರತು ಅವರ ಅಂತರಾತ್ಮವನ್ನು ನೋಡಲು ಹೋಗಲಿಲ್ಲ. ಲೇಖಕಿ ಆ ಕೆಲಸವನ್ನು ಜಯ ಕಾದಂಬರಿಯಲ್ಲಿ ತೋರಿಸಿದ್ದಾರೆ.

ಕುಂತಿಯು ರಾಜಮಾತೆಯಾಗಿದ್ದು, ಎಲ್ಲರ ಸರಿ–ತಪ್ಪುಗಳನ್ನು ತಿಳಿಸುವವಳು ಆಗಿದ್ದರೂ ಸಮಾಜಕ್ಕೆ ಹೆದರಿ ತಾನು ಮಾಡಿದ ತಪ್ಪನ್ನು ಮುಚ್ಚಿಹಾಕಲು ಕಣ್ಣ ಮುಂದೆ ಮಗನಿದ್ದರೂ ಅವರು ದುರಾಚಾರಗಳನ್ನು ಮಾಡುತ್ತಿದ್ದರು ಕೇಳುವಂತಹ ಧೈರ್ಯ ಮಾಡಲಿಲ್ಲ. ಆದರೂ ಕರ್ಣನ ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ತನ್ನ ಒಡಲ ದುಃಖವನ್ನು ತಡೆಯಲಾರದೆ ತನ್ನ ಮಕ್ಕಳು ಪಾಂಡವರ ಮುಂದೆ ಹೇಳಿ ಧರ್ಮರಾಯನ ನಿಂದನೆಗೆ ಒಳಗಾಗುತ್ತಾಳೆ.

ಮಹಾಭಾರತದಲ್ಲಿ ಇಲ್ಲದೆ ಇರುವಂತಹ ಪಾತ್ರಗಳನ್ನು ಸೃಷ್ಟಿಸಿರುವುದು ಲೇಖಕಿಯ ಸ್ವಂತ ಸೃಷ್ಟಿಯ ಕೌಶಲವನ್ನು ಪ್ರತಿಬಿಂಬಿಸುತ್ತದೆ. ಅಭಿಲಾಷಾ, ರೋಹಿಣಿ, ಕಾಳಶಂಭು, ಚಂದ್ರಸೇನ, ಶಿಬಿರದ ವೈದ್ಯ ಮುಂತಾದ ಪಾತ್ರಗಳು ಸೃಷ್ಟಿಯಾಗಿದ್ದು, ಕಾದಂಬರಿಗೆ ಪೂರಕವಾಗಿ ಸಹಾಯ ಮಾಡುತ್ತದೆ. ಅಭಿಲಾಷಾದೇವಿ ಕಾದಂಬರಿಯ ಪ್ರಾರಂಭದಲ್ಲಿಯೇ ಯುದ್ಧದ ಭೀಕರತೆ ನೆನೆದು ಯುದ್ಧ ಬೇಡ ಎಂದು ತನ್ನ ಗಂಡನಿಗೆ ಹೇಳುತ್ತಾಳೆ. ಆದರೆ ಅದನ್ನು ಕೇಳದೆ ಯುದ್ಧಕ್ಕೆ ಬಂದು ಪ್ರಾಣಬಿಡುತ್ತಾನೆ. ರೋಹಿಣಿ ಯುದ್ಧದಲ್ಲಿ ತನ್ನ ಗಂಡ ಕಳೆದುಕೊಂಡ ಕಾಲನ್ನು ಸರಿಪಡಿಸಿ ಉಳಿಸಿಕೊಳ್ಳಲು ಶತಾಯಗತಾಯ ಹೋರಾಟ ಮಾಡಿದರೂ ವ್ಯರ್ಥವಾಗಿ ಮಾರ್ಗ ಮಧ್ಯದಲ್ಲಿ ಗಂಡ ಸಾಯುವುದು. ಕಾಳಶಂಭು ತನ್ನ ಮಗಳು, ಹೆಂಡತಿಯನ್ನು ನೋಡಲು ಆತುರ ಪಡುತ್ತಿದ್ದುದು ಇವೆಲ್ಲವೂ ಅವರ ಪರಿಸ್ಥಿತಿಗಳಾಗಿದ್ದು, ಯುದ್ಧ ವಿರೋಧಿ ನಿಲುವನ್ನು ಲೇಖಕಿ ಮೇಲಿನ ಪಾತ್ರಗಳ ಮೂಲಕ ಹೇಳಹೊರಟಿದ್ದಾರೆ.

ಪ್ರತಿ ಸ್ತ್ರೀಯರಲೊಬ್ಬ ಪುರುಷ ಪ್ರತಿ ಪುರುಷನೊಳಗೊಬ್ಬ ಸ್ತ್ರೀ ಜೀವಂತವಾಗಿರುತ್ತಾರೆನ್ನುವ ಹೊಸ ತತ್ವವೊಂದನ್ನು ದ್ರೌಪದಿ, ಭಾನುಮತಿ, ಗಾಂಧಾರಿ, ಕುಂತಿ, ಕರ್ಣ, ಉತ್ತರ ಮುಂತಾದ ಪಾತ್ರಗಳ ಮೂಲಕ ಅನಾವರಣಗೊಳಿಸಿದ್ದಾರೆ.

ವೇದಾ ಅವರ ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯೂ ಇವರ ಸಾಹಿತ್ಯ ರಚನೆಯಲ್ಲಿ ಮೂಡಿ ಬಂದು ರತ್ನದಂತೆ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಮಾಧವಿ ಮತ್ತು ಆಕೆಯ ಸುತ್ತ ನಡೆಯುವ ಕತೆಯನ್ನು ವರ್ತಮಾನದ ಒಡಲಲ್ಲಿಟ್ಟು ಅನೇಕ ಒಳವಿವರಗಳನ್ನು ನಿಡಿದ್ದಾರೆ. ಆಧುನಿಕ ಸ್ತ್ರೀವಾದಿ ಪ್ರಜ್ಞೆಯ ಅಂಶಗಳಾದ ಸೋದರಿತ್ವ, ಮಾತೃತ್ವದ ಮಹತ್ವವನ್ನು ಹೇಳಿದ್ದಾರೆ. ಪುರುಷ ಪ್ರಧಾನವಾದ ಕುಟುಂಬವಿದ್ದರೂ ಗಂಡುಮಕ್ಕಳಿಗೆ ವಿಶೇಷವಾದ ಪ್ರಾಮುಖ್ಯತೆ ಇದ್ದರೂ ಇಲ್ಲಿ ಪುರು ಕೂಡಾ ತಂದೆಯ ದೌರ್ಜನ್ಯಕ್ಕೆ ಒಳಗಾಗಿ

ಅಕಾಲ ವೃದ್ಧಾಪ್ಯವನ್ನು ಅನುಭವಿಸುತ್ತಿದ್ದನು. ಪುರುಷ ರಾಜಕಾರಣವು ಸ್ತ್ರೀ ಪುರುಷರೆಂಬ ಭೇದವಿಲ್ಲದೇ ತಮ್ಮ ದೌರ್ಜನ್ಯವೆಸಗುತ್ತಿರುವುದನ್ನು ಮಾಧವಿ ಮತ್ತು ಪುರುವಿನ ಮೂಲಕ ಚಿತ್ರಿಸಿದ್ದಾರೆ.

ಯಯಾತಿ ಯಾರೂ ನೀಡದಂತಹ ದಾನವನ್ನು ನೀಡಿ ಖ್ಯಾತಿ ಪಡೆಯಬೇಕೆಂದು ಬಯಸಿ ಕುಖ್ಯಾತಿಗೆ ಗುರಿಯಾಗುತ್ತಾನೆ. ಯಯಾತಿ, ಗಾಲವ, ವಿಶ್ವಾಮಿತ್ರ, ಹರ್ಯಶ್ವ, ದಿವೋದಾಸ, ಉಶೀರ, ಶರಭಯ್ಯ ಈ ಪಾತ್ರಗಳು ಸ್ವಾರ್ಥಿಗಳಾಗಿ ಸಮಯ ಸಾಧಕರಾಗಿ ಸ್ವೇಚ್ಛೆಯಿಂದ ಹೆಣ್ಣನ್ನು ಬಳಸಿಕೊಂಡವರಾಗಿ ಕಂಡುಬರುತ್ತಾರೆ. ಪಿತೃವಾಕ್ಯ ಪರಿಪಾಲಕಿಯಾಗಿ ಕಂಡುಬರುವ ಮಾಧವಿ ಬಾಡಿಗೆ ತಾಯಿಯಾಗಿ ಕಂಡುಬರುವ ಮೂಲಕ ಬಾಡಿಗೆ ತಾಯಿಗೂ ಮತ್ತು ಬೆಲೆವೆಣ್ಣಿಗೂ ನಡುವೆ ಇರುವ ಸ್ಪಷ್ಟ ಚಿತ್ರಣವನ್ನು ನೀಡಿದ್ದಾರೆ. ಮಾಧವಿ ಪ್ರಭುತ್ವದ ಅಧಿಕಾರಕ್ಕೆ ಒಳಪಟ್ಟು ನಾಲ್ಕೂ ಜನರ ಬಾಯಿಗೆ ಆಹಾರವಾಗಿದ್ದವಳೆಂದು ಗೊತ್ತಾದರೂ ಆದಿಮನಿಗೆ ಆಕೆಯ ಮೇಲಿದ್ದ ಪ್ರೀತಿ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಬದಲಾಗಿ ಇನ್ನಷ್ಟು ಪ್ರೀತಿ ಹೆಚ್ಚಾಗಿತ್ತು. ಇತರ ಗಂಡಸರ ನಡವಳಿಕೆಯಿಂದ ಹೇವರಿಗೆ ಮೂಡಿದ್ದರೂ ಆ ಗುಂಪಿಗೆ ತನ್ನ ಹುಡುಗನನ್ನು ಸೇರಿಸದೆ ಪ್ರೀತಿಯ ಹುಡುಗನಾಗಿಯೇ ನೋಡಿದ್ದಳು. ಇವೆಲ್ಲಾ ಗಂಡು-ಹೆಣ್ಣಿನ ಸಂಬಂಧಗಳ ವಿವಿಧ ರೂಪದ ದರ್ಶನವಾಗುತ್ತದೆ. ಮಾಧವಿ ಆಧುನಿಕ ಮನಸ್ಸುಗಳ ಪ್ರತಿಬಿಂಬವಾಗಿ ಆಧುನಿಕ ಚಿಂತನೆಗಳಲ್ಲಿ ಉಸಿರಾಡುತ್ತಿದ್ದಾಳೆ.

ವೇದಾ ಅವರ ನಾಲ್ಕನೆಯ ಕಾದಂಬರಿಯಾದ ರಾಜ ಒಡೆಯರ್ ಕಾದಂಬರಿಯಲ್ಲಿ ಸ್ತ್ರೀವಾದಿ ಹಿನ್ನಲೆಯಲ್ಲಿ ಗುರುತಿಸುವಂತಹ ಸ್ತ್ರೀಪಾತ್ರಗಳು ಬಾರದೆ ಹೋದರೂ ಅರಮನೆಯ ಒಳಗೆ ಸ್ತ್ರೀ ಚಟುವಟಿಕೆಗಳು ನಡೆಯುತ್ತಿದ್ದವು. ಅದರ ಪರಿಣಾಮ ಅರಮನೆಯಿಂದ ಆಚೆಗೂ ಹರಿಯುತ್ತಿತ್ತು. ವೀರಾಜಮ್ಮಣ್ಣಿಯೂ ರಾಜ ಒಡೆಯರಿಗೆ ನೀಡುತ್ತಿದ್ದ ಸಲಹೆಗಳು ರಾಜನಿಗೂ ಇಷ್ಟವಾಗಿ ಜನತೆ ಸಂತೋಷಕ್ಕೂ ಕಾರಣವಾಗಿತ್ತು. ಕೆಲವೊಮ್ಮೆ ತಪ್ಪುಗಳಿಗೂ ಕಾರಣವಾಗುತ್ತಿತ್ತು. ಅರಮನೆಯ ಒಳಗೆ ಕುದಿಯುತ್ತಿದ್ದ ಅಲಮೇಲಮ್ಮ ರಾಜನ ಎದುರು, ರಾಜಸಭೆಯ ಎದುರು ಹಾರ ಹಾಕಲಾರದೆ ಬೆಂದಿದ್ದಳು. ಆದರೆ ಕೊನೆಯಲ್ಲಿ ತನ್ನ ಕೋಪವನ್ನು ಕಾವೇರಿ ನದಿಯಲ್ಲಿ ನಿಂತು ಹಾರಹಾಕಿದ್ದಳು. ಈ ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಾಗಿ ಸ್ತ್ರೀ ಬರುವುದು ಕಡಿಮೆಯಾದರೂ ಕೂಡ ಅವರ ನಿಲುವು, ನಿರ್ಧಾರಗಳು ಸ್ತ್ರೀವಾದಿಯ ನೆಲೆಯಲ್ಲಿಯೇ ಮೂಡಿರುವುದು ವಿಶೇಷ.

ವೇದಾ ಅವರ ನಾಲ್ಕು ಕಾದಂಬರಿಗಳನ್ನು ಅಭ್ಯಸಿಸಿದಾಗ ಅವರು ಸ್ತ್ರೀವಾದಿ ನೆಲೆಯಲ್ಲಿ ಚಿತ್ರಿಸಿರುವುದು ದಟ್ಟವಾಗಿ ಕಾಣುತ್ತದೆ. ಅದರಿಂದಲೇ ಎಲ್ಲಾ ಕಾದಂಬರಿಗಳಲ್ಲಿ ಬರುವಂತಹ ಸ್ತ್ರೀಪಾತ್ರಗಳು ವಿಭಿನ್ನ ಸನ್ನಿವೇಶದಲ್ಲಿ ಮೂಡಿ ಬರುವಂತಹವು ಆಗಿವೆ.

ಆದರೂ ಎಲ್ಲಾ ಪಾತ್ರಗಳು ಸ್ತ್ರೀ ಶೋಷಣೆಯ ವಿವಿಧ ಮಗ್ಗಲುಗಳನ್ನು ಬಿಂಬಿಸುತ್ತವೆ. ಸ್ತ್ರೀಪಾತ್ರಗಳು ಎಂತಹ ಕಷ್ಟಗಳು ಬಂದರೂ ಅದಕ್ಕೆ ಬೆನ್ನು ಮಾಡಿ ನಿಲ್ಲದೆ ಕಷ್ಟ, ಸಹಿಷ್ಣುತೆಗಳು, ಅಡ್ಡಿ ಆತಂಕಗಳು ಎದುರಾದಾಗ ಹೆದರದೇ ಧೈರ್ಯದಿಂದ ಎದುರಿಸುವಂಥವುಗಳಾಗಿ ಮೂಡಿ ಬಂದಿವೆ.

ಇವರ ಕಾದಂಬರಿಗಳು ಭಿನ್ನ ಭಿನ್ನ ಪರಿಸರದಿಂದ ರಚಿತವಾಗಿರುವುದರಿಂದ ತಿರುವನ್ನು ನೀಡುವಂತಹ ಸಂದರ್ಭಗಳು ಸನ್ನಿವೇಶಗಳನ್ನು ಲೇಖಕಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಆದರೆ ಕಾದಂಬರಿಯನ್ನು ಇತರ ನೆಲೆಗಳಿಂದ ಸ್ತ್ರೀವಾದ, ಸಾಮಾಜಿಕತೆ ಇತ್ಯಾದಿ ದೃಷ್ಟಿಯಿಂದಲೂ ಬಹಳ ಜಾಗರೂಕವಾಗಿ ಸನ್ನಿವೇಶ ನಿರ್ಮಿಸಿದ್ದಾರೆ. ಜಮೀನು ಕಾದಂಬರಿಯಲ್ಲಿ ಕಾಲುವೆಯನ್ನು ತಂದು ಅಪಾಯ ತಂದುಕೊಳ್ಳುವ, ಜಯ ಕಾದಂಬರಿಯಲ್ಲಿ ಕರ್ಣನ ಸಂಸ್ಕಾರದ ಸಂದರ್ಭದಲ್ಲಿ ಕುಂತಿ ತನ್ನ ಮಕ್ಕಳೆದುರು ನಿಜವನ್ನು ಹೇಳುವ ಸನ್ನಿವೇಶ, ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯಲ್ಲಿ ಹೆಣ್ಣನ್ನು ದಾನ ಮಾಡುವ ಸನ್ನಿವೇಶ, ರಾಜಒಡೆಯರ್ ಕಾದಂಬರಿಯಲ್ಲಿ ಶ್ರೀರಂಗಪಟ್ಟಣದ ದಾನ, ಅಲಮೇಲಮ್ಮನ ಶಾಪ ಮುಂತಾದ ಸನ್ನಿವೇಶಗಳು ಲೇಖಕಿ ತನ್ನ ಸ್ವಂತಿಕೆಯಿಂದ ನಿರ್ಮಿಸಿದ ಸನ್ನಿವೇಶವಾಗಿದ್ದು ಅವರ ಪ್ರತಿಭೆಯನ್ನು ಹೊರಹಾಕುತ್ತವೆ. ಇಂತಹ ಹಲವಾರು ಸನ್ನಿವೇಶಗಳು ಇಂದಿಗೂ ನಮ್ಮ ಸಮಾಜದಲ್ಲಿ ನಡೆಯುತ್ತಿರುವಂತಹವುಗಳಾಗಿವೆ. ಇವುಗಳನ್ನು ತಮ್ಮ ಕಾದಂಬರಿಗೆ ಮುಕ್ತ ರೀತಿಯಲ್ಲಿ ಲೇಖಕಿ ಬಳಸಿದ್ದಾರೆ.

ಇನ್ನು ಪಾತ್ರಶೋಷಣೆಯ ವಿಷಯ ಬಂದಾಗ ಒಟ್ಟು ಕಾದಂಬರಿಯ ಪಾತ್ರಗಳನ್ನು ಅಧ್ಯಯನ ದೃಷ್ಟಿಯಿಂದ ಪ್ರಧಾನ ಪಾತ್ರಗಳು ಮತ್ತು ಪೂರಕಪಾತ್ರಗಳು ಎಂದು ವಿಭಾಗಿಸಿಕೊಂಡಿದ್ದೇನೆ. ಪ್ರಧಾನ ಪಾತ್ರಗಳಾಗಿ ದೇವಮ್ಮ, ಜಮೀನು ಕಾದಂಬರಿಯಲ್ಲಿ ಕಾಣಿಸಿಕೊಂಡು ತನ್ನ ಗಟ್ಟಿ ನಿರ್ಧಾರದಿಂದ ತನ್ನ ಗಂಡನಿಗೆ ಸಹಾಯಕಳಾಗಿ ನಿಲ್ಲುತ್ತಾಳೆ. ಜಯ ಕಾದಂಬರಿಯಲ್ಲಿ ದ್ರೌಪದಿ, ಕುಂತಿ, ಗಾಂಧಾರಿ, ಭಾನುಮತಿ ಮುಂತಾದ ಪಾತ್ರಗಳ ಮೂಲಕ ನಿಜವಾದ ಸ್ತ್ರೀ ಆಶೋತ್ತರಗಳನ್ನು ಹೊರಹಾಕಿದ್ದಾರೆ. ದ್ರೌಪದಿ ಕಾದಂಬರಿಯ ಉದ್ದಕ್ಕೂ ಯುದ್ಧ ಬೇಕೋ? ಬೇಡವೋ? ಎಂಬ ದ್ವಂದ್ವದಲ್ಲೇ ಮುಳುಗಿದರೆ, ಗಾಂಧಾರಿ ತನಗೆ ಕುರುಡು ಗಂಡನನ್ನು ಮದುವೆ ಮಾಡಿಸಿದ್ದಕ್ಕಾಗಿ ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುವುದು, ಭಾನುಮತಿ ತನ್ನ ಗಂಡ ನನ್ನ ಸರಿಯಾದ ದಾರಿಗೆ ತರಲು ಪ್ರಯತ್ನಿಸಿ ಸೋತು ಹೋಗಿದ್ದು, ಲೇಖಕಿಯ ಪಾತ್ರ ಶೋಷಣೆ ಸಾಮರ್ಥ್ಯವನ್ನು ತಿಳಿಸುತ್ತದೆ. ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯಲ್ಲಿ ಮಾಧವಿಯ ಹುಟ್ಟಿನ ಬಗೆಗೆ ತಿಳಿಸಲು ಲಕ್ಷ್ಮಿಯ ಪಾತ್ರ ಸೃಷ್ಟಿ ಅಮೋಘವಾಗಿದೆ. ಅಲ್ಲದೆ ಹೆಣ್ಣಿನ ಕಷ್ಟ ಹೆಣ್ಣಿಗೆ ಅರ್ಥವಾಗುತ್ತದೆ ಎಂಬಂತೆ ದೇವಯಾನಿ,

ಶರ್ಮಿಷ್ಠೆ ತಮ್ಮ ದ್ವೇಷ ಮರೆತು ಮಾಧವಿಯನ್ನು ರಕ್ಷಿಸಲು ಹೆಣಗುವುದು. ರಾಜಒಡೆಯರ್ ಕಾದಂಬರಿಯಲ್ಲಿ ಯಾವುದೇ ರೀತಿಯ ಹೊಸ ಬದಲಾವಣೆಯನ್ನು ಕಾಣದೆಹೋದರೂ ರಾಜ ಒಡೆಯರ್ ತನ್ನ ಹೆಂಡತಿಯ ಸಲಹೆ ಪಡೆಯುವುದನ್ನು ಸ್ತ್ರೀವಾದಿ ನೆಲೆಯಲ್ಲಿ ಚಿತ್ರಿಸಿದ್ದಾರೆ.

ಪೂರಕ ಪಾತ್ರಗಳಾಗಿ ಮೂಡಿಬಂದಿರುವ ಪಾತ್ರಗಳೆಂದರೆ ಜಮೀನು ಕಾದಂಬರಿಯಲ್ಲಿ ಗಂಗವ್ವ, ಅಂದಾನಪ್ಪ ಮನಸ್ಸಿನಲ್ಲಿ ಉಳಿಯುವ ಪಾತ್ರಗಳಾಗಿವೆ. ಜಯ ಕಾದಂಬರಿಯಲ್ಲಿ ಲೇಖಕಿ ಮಹಾಭಾರತದಲ್ಲಿ ಇಲ್ಲದ ಹೊಸ ಪಾತ್ರಗಳಾದ ಅಭಿಲಾಷಾದೇವಿ, ರೋಹಿಣಿ, ಕಾಳಶಂಭು ಪಾತ್ರಗಳನ್ನು ಸ್ವಂತಿಕೆಯಿಂದ ಚಿತ್ರಿಸಿ ಆ ಪಾತ್ರಗಳ ಮೂಲಕ ಯುದ್ಧ ವಿರೋಧಿ ನೀತಿಯನ್ನು ಸಾರುತ್ತಿದ್ದಾರೆ. ಮೂರನೆ ಕಾದಂಬರಿಯಾದ ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯಲ್ಲಿ ಬರುವ ಆದಿಮ, ದಿವೋದಾಸ, ಗಾಲವ, ದಾಸಿಸೇವಂತಿ ಇತರ ಪಾತ್ರಗಳ ಮೂಲಕ ಎಲ್ಲಾ ಗಂಡಸರು ಕೆಟ್ಟವರಲ್ಲ ಅವರಲ್ಲೂ ಒಳ್ಳೆಯ ಗುಣಗಳು ಇರುತ್ತವೆ. ಹಾಗೆಯೇ ಎಲ್ಲಾ ಹೆಂಗಸರು ಒಳ್ಳೆಯರಲ್ಲ ಮಾತೃಹೃದಯಿಗಳಲ್ಲ ಅವರಲ್ಲೂ ಕೆಡಕನ್ನು ಉಂಟುಮಾಡುವ ಚೇಳಿನ ಗುಣವಿರುತ್ತದೆ ಎಂಬುದನ್ನು ತೀವ್ರವಾಗಿ ತಮ್ಮ ಕಾದಂಬರಿಯಲ್ಲಿ ಮೂಡಿಸಿದ್ದಾರೆ. ರಾಜ ಒಡೆಯರ್ ಕಾದಂಬರಿಯಲ್ಲೂ ಅಜ್ಜಯ್ಯ, ಸರ್ವ ಹಿರಿಯರ ಸಭೆ ಒಬ್ಬ ರಾಜನಿಗೆ ಮಾರ್ಗದರ್ಶನ ನೀಡಿ ಅವರಿಗೆ ಆತ್ಮವಿಶ್ವಾಸ ತುಂಬುವ ಕೆಲಸ ಮಾಡುತ್ತದೆ. ಆದರೂ ಒಂದು ಹೆಣ್ಣು ಮಗಳ ಶಾಪಕ್ಕೆ ಮೈಸೂರು ಅರಸರು ತುತ್ತಾಗುವಂತಾಗುತ್ತದೆ. ಹೀಗೆ ಲೇಖಕಿ ಆಯಾ ಕಾದಂಬರಿಗಳಿಗೆ ತನ್ನ ಆಲೋಚನೆ ಅಭಿರುಚಿಗಳಿಗೆ ತಕ್ಕಂತೆ ಸ್ತ್ರೀವಾದಿ ನೆಲೆಯಲ್ಲಿ ಚಿತ್ರಿಸಿ ಆ ಮೂಲಕ ಆಧುನಿಕ ಸಮಾಜ ಮಹಿಳೆಯರಿಗೂ ಸಂಬಂಧಿಸಿದಂತಹ ಬದುಕಿನ ಅನುಭವಗಳನ್ನು ನ್ಯಾಯಯುಕ್ತವಾಗಿ ನೀಡಿದ್ದಾರೆ.

ಯಾವುದೇ ಭಾಷೆಯಾದರೂ ಅದಕ್ಕೆ ಅದರದೇ ಆದ ಕಲಾತ್ಮಕ ಗುಣವಿದೆ. ಈ ಗುಣವನ್ನು ತಮ್ಮ ಕಾದಂಬರಿಗಳನ್ನು ಸಮರ್ಥವಾಗಿ ಲೇಖಕಿ ಬಳಸಿಕೊಂಡಿದ್ದಾರೆ ಜಮೀನು ಕಾದಂಬರಿ ಗ್ರಾಮೀಣ ಭಾಷೆಯಿಂದ ಕೂಡಿದರೆ, ಉಳಿದಂತೆ ಮೂರು ಕಾದಂಬರಿಗಳು ಐತಿಹಾಸಿಕ, ಪೌರಾಣಿಕ ಕಾದಂಬರಿಯಾಗಿದ್ದು, ಆಡು ಮಾತಿನಲ್ಲಿ ಗ್ರಾಮೀಣ ಭಾಷೆಯಲ್ಲಿ ಹೇಳಲು ಸಾಧ್ಯವಾಗುವುದಿಲ್ಲ. ಆದ ಕಾರಣ ಶಿಷ್ಟ ಮಾತುಗಳಿಂದ ಕೂಡಿದ ಭಾಷೆ ಬಳಸಲಾಗಿದೆ. ಕಾದಂಬರಿಯ ಉದ್ದಕ್ಕೂ ಅಲ್ಲಲ್ಲಿ ಗಾದೆಗಳು, ನುಡಿಗಟ್ಟುಗಳ ಬಳಕೆಯನ್ನು ಕಾಣಬಹುದಾಗಿದೆ ಒಟ್ಟಾರೆ ಇವರ ನಿರೂಪಣಾ ಶೈಲಿ ಮನಮುಟ್ಟುವಂತಹ ಸಂಭಾಷಣೆಗಳು ಓದುಗರನ್ನು ಆಕರ್ಷಿಸುತ್ತದೆ.

ಒಟ್ಟು ಕಾದಂಬರಿಯನ್ನು ಅಧ್ಯಯನದ ದೃಷ್ಟಿಯಿಂದ ಐದು ಅಧ್ಯಾಯಗಳಾಗಿ ವಿಭಾಗಿಸಲಾಯಿತು. ಅಂತೆಯೇ ಮೊದಲನೆಯ ಅಧ್ಯಾಯದಲ್ಲಿ ನಿಬಂಧದ ಉದ್ದೇಶ, ಸ್ವರೂಪವನ್ನು ಬಲುಸ್ಪಷ್ಟವಾಗಿ ತಿಳಿಸಲಾಗಿದೆ.

ಯಾವುದೇ ಕಾದಂಬರಿಯನ್ನು ತಿಳಿಯುವ ಮುನ್ನ ಅದನ್ನು ಬರೆದ ಲೇಖಕರ ಬಗೆಗೆ ತಿಳಿಯುವುದು ಅಗತ್ಯವಾಗಿರುವುದರಿಂದ ಎರಡನೆಯ ಅಧ್ಯಾಯದಲ್ಲಿ ಲೇಖಕಿಯ ವ್ಯೆಯಕ್ತಿ, ಪರಿಚಯ, ಅವರ ಕೃತಿಗಳು ಅವರಿಗೆ ಸಂದ ಪ್ರಶಸ್ತಿಗಳನ್ನು ಪರಿಚಯಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯ ಹುಟ್ಟು ಬೆಳವಣಿಗೆ ಅದರ ಮಹತ್ವವನ್ನು ತಿಳಿಸುವುದರ ಜೊತೆಗೆ ಕಾದಂಬರಿ ಕ್ಷೇತ್ರದಲ್ಲಿ ಸ್ತ್ರೀಯರ ಸಾನೆಯನ್ನು ಈ ಅಧ್ಯಾಯದಲ್ಲಿ ವಿಮರ್ಶಿಸಲಾಗಿದೆ.

ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ ಎಂಬ ನಾಲ್ಕನೇ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದ ಜೊತೆಗೆ ಸ್ತ್ರೀವಾದ ಹುಟ್ಟಿ ಬೆಳೆದು ಬಂದ ರೀತಿಯನ್ನು ಸ್ತ್ರೀವಾದದ ಬಗೆಗೆ ಸ್ತ್ರೀಯರು ತೋರಿಸುತ್ತಿರುವ ಆಸಕ್ತಿಯನ್ನು ವಿಶ್ಲೇಷಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಒಟ್ಟು ಕಾದಂಬರಿಗಳನ್ನು ನಾಲ್ಕು ವಿಭಾಗಗಳಾಗಿ ಮಾಡಿಕೊಂಡು ಎಲ್ಲಾ ಕಾದಂಬರಿಯ ವಸ್ತು ಮತ್ತು ಸ್ವರೂಪವನ್ನು ಒಂದು ಘಟ್ಟದಲ್ಲಿ ತಿಳಿಸಿದರೆ ಮತ್ತೊಂದು ಘಟ್ಟದಲ್ಲಿ ಸನ್ನಿವೇಶ ನಿರ್ವಹಣೆಯನ್ನು ಇನ್ನೊಂದು ಘಟ್ಟದಲ್ಲಿ ಪಾತ್ರಶೋಷಣೆಯನ್ನು ಕೊನೆಯದಾಗಿ ಅಭಿವ್ಯಕ್ತಿ/ಶೈಲಿಯನ್ನು ಒಂದೋಂದು ವಿಭಾಗ ಮಾಡಿಕೊಂಡು ಸಂಪೂರ್ಣ ಕಾದಂಬರಿಯನ್ನು ಅರ್ಥೈಸಲಾಗಿದೆ.

ಆಮೀನು ಮಾಡುವುದು ಎಂದ ತಕ್ಷಣ ನಮ್ಮ ಕಣ್ಣ ಮುಂದೆ ಬರುವುದು ಪುರುಷ ಮಾತ್ರ. ಆದರೆ ಜಮೀನು ಕಾದಂಬರಿಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ದೇವಮ್ಮನ ಪಾತ್ರದ ಮೂಲಕ ಜಮೀನು ಮಾಡಿಸುವುದು ಅಮೋಘವಾದದ್ದು ಅದರ ಜೊತೆಗೆ ಸಮಾಜಕ್ಕೆ ಒಂದು ಬಗೆಯ ಹೊಸಪರಿ ಕಲ್ಪನೆ ಕೂಡ ಆಗಿದೆ. ಹೆಣ್ಣಿನ ಗಟ್ಟಿ ವ್ಯಕ್ತಿತ್ವದ ಪ್ರತಿಬಿಂಬಗಳಾಗಿ ಹೊಸ ದೃಷ್ಟಿಕೋನದಿಂದ ನಿರ್ಮಾಣವಾದ ಸ್ತ್ರೀಪಾತ್ರಗಳಾದ ದ್ರೌಪದಿ, ಗಾಂಧಾರ ಭಾನುಮತಿ, ಮಾಧವಿ ಪಥ್ರಗಳು ಎಂತಹ ಕಷ್ಟಬಂದರೂ ಎದೆಗುಂದದೆ ಸ್ತ್ರೀಯರಿಗೆ ದಾರಿದೀಪವಾಗಿ ಮುನ್ನಡೆಸುವ ಮಾದರಿ ಪಾತ್ರಗಳಾಗಿ ವೇದಾ ಅವರು ಚಿತ್ರಿಸಿದ್ದಾರೆ. ಆಧುನಿಕ ಪರಿಕಲ್ಪನೆಯಲ್ಲಿ ಹುಟ್ಟಿರುವಂತಹ ಬಾಡಿಗೆ ತಾಯಿ ಎಂಬ ಕಲ್ಪನೆ ಪುರಾಣ ಕಾಲದಲ್ಲೇ ಇತ್ತು ಎಂಬುದನ್ನು ಮಾಧವಿಯ ಪಾತ್ರದ ಮೂಲಕ ತೋರಿಸಿದ್ದಾರೆ. ಆದರೆ ಬಾಡಿಗೆ ತಾಯಿ ಪರಿಕಲ್ಪನೆಯಲ್ಲಿ ಎಷ್ಟು ಕ್ರೌರ್ಯ ಮತ್ತು ಸ್ವಾರ್ಥ ಇತ್ತು ಎಂಬುದನ್ನು ಲೇಖಕಿ ಸೊಗಸಾಗಿ ಚಿತ್ರಿಸಿದ್ದಾರೆ. ಅಲ್ಲದೆ ಪುರುಷ ರಾಜಕಾರಣವು ಸ್ತ್ರೀಪುರುಷರೆಂಬ ಬೇಧವಿಲ್ಲದೆ ದೌರ್ಜನ್ಯ

ಎಸಗುತ್ತಿರುವುದನ್ನು ಪುರುವಿನ ಮೂಲಕ ತಿಳಿಸಿದ್ದಾರೆ. ಹೆಣ್ಣಿನ ವ್ಯಕ್ತಿತ್ವಕ್ಕೆ ಧಕ್ಕೆ ಬಂದಾಗ ಅವಳು ನಡೆದುಕೊಳ್ಳಬಹುದಾದ ರೀತಿಗೆ ಸಮಕಾಲೀನ ಸಂದರ್ಭದಲ್ಲಿ ಅನೇಕ ಬಹುರೂಪಿಯಾದ ಉತ್ತರವನ್ನು ತಮ್ಮ ಕಾದಂಬರಿಯಲ್ಲಿ ಬೇರೆ ಬೇರೆಯಾದ ಮಾದರಿ ಪಾತ್ರಗಳ ಮೂಲಕ ತೋರಿಸಿದ್ದಾರೆ. ಇವು ಬಹಳ ವಿಶೇಷವಾದ ಅಂಶಗಳಾಗಿ ಇವರ ಕಾದಂಬರಿಯಲ್ಲಿ ಕಂಡು ಬರುವುದರ ಜೊತೆಗೆ ಹೆಣ್ಣಿನ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ದಿಟ್ಟತನವನ್ನು ತೋರಿಸಿದ್ದಾರೆ. ಒಟ್ಟಾರೆ ಇವರ ಕಾದಂಬರಿಗಳು ಇವತ್ತಿನ ಕಾಲಧರ್ಮಕ್ಕೆ ಅನುಗುಣವಾಗಿ ಪರಿವರ್ತಿಸಿ ಅದನ್ನು ಸಮಕಾಲೀನಗೊಳಿಸಿ ಬರೆದ ಅವರ ಶ್ರಮ ಶ್ಲಾಘನೀಯವಾದದ್ದು.

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276


2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

# "ಪ್ರೊ. ಮಲೆಯೂರು ಗುರುಸ್ವಾಮಿ ಅವರ ಕಾದಂಬರಿಗಳ ಅಧ್ಯಯನ"


ನಿಬಂಧಕಾರರು

**ಮಹದೇವಸ್ವಾಮಿ ಎ.ಎಂ.**

ನೋಂದಣಿ ಸಂಖ್ಯೆ – KVTM/K 140901030092
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

**ಡಾ. ಹೆಚ್.ಪಿ.ಗೀತಾ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕುವೆಂಪುನಗರ, ಮೈಸೂರು

**ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್**
**ಜಯಲಕ್ಷ್ಮೀಪುರಂ, ಮೈಸೂರು**


**2014–15**

## ಪರಿವಿಡಿ

# ಪ್ರೊ. ಮಲೆಯೂರು ಗುರುಸ್ವಾಮಿ ಅವರ ಕಾದಂಬರಿಗಳ ಅಧ್ಯಯನ


| ಅಧ್ಯಾಯಗಳು | | ಪಠ್ಯ ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ – ೧ | : | ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | ೧–೧೦ |
| ಅಧ್ಯಾಯ – ೨ | : | ಎಲೆಯೂರು ಗುರುಸ್ವಾಮಿ ಅವರ ಬದುಕು–ಬರಹ | ೧೧–೨೦ |
| ಅಧ್ಯಾಯ – ೩ | : | ಗ್ರಾಮೀಣ ಬದುಕಿನ ಚಿತ್ರಣ | ೨೧–೩೨ |
| ಅಧ್ಯಾಯ – ೪ | : | ಐತಿಹಾಸಿಕ ಅಂಶಗಳು | ೩೩–೫೦ |
| ಅಧ್ಯಾಯ – ೫ | : | ಆಧ್ಯಾತ್ಮಿಕತೆ ಮತ್ತು ವೈಚಾರಿಕತೆ | ೫೧–೭೫ |
| | | ಉಪಸಂಹಾರ | ೭೬–೭೮ |
| | | ಗ್ರಂಥಋಣ | ೭೯–೮೦ |


* * * * *

# ಅಧ್ಯಾಯ ಒಂದು

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಚರಿತ್ರೆಯ ಕರ್ನಾಟಕದ ಸಂಸ್ಕೃತಿಯ ವೈವಿಧ್ಯತೆಗಳಲ್ಲಿ ಒಂದು. ಹಾಗಾಗಿ ಸಾಹಿತ್ಯೇತರ ಮೌಲ್ಯ ಪ್ರತಿಪಾದನೆಗಳಿಗಿಂತ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ನಾಡಿನ ಕಲೆ, ಮತ, ಧರ್ಮ, ಜನರ ಆಚಾರ-ವಿಚಾರಗಳು, ನಂಬಿಕೆಗಳು, ಸಮಾಜದ ಸಂಬಂಧಗಳ ಬೆಸುಗೆಯಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಮತಧರ್ಮಗಳು, ರಾಜಾಶ್ರಯಗಳ ನೆರವಿನಿಂದ ರಚಿತವಾಗಿದೆ. ಆಯಾಕಾಲದ ಸಾಮಾಜಿಕ, ಸಾಂಸ್ಕೃತಿಕ ಇತಿಹಾಸವನ್ನು ಅರಿತುಕೊಳ್ಳಲು ಸಾಹಿತ್ಯ ಚರಿತ್ರೆಯೂ ಮುಖ್ಯ ಆಕರವಾಗಿದೆ. ಮಲೆಯೂರು ಗುರುಸ್ವಾಮಿಯವರ ಸಾಹಿತ್ಯವು ಇತಿಹಾಸದ ಎಳೆಗಳು, ಗ್ರಾಮೀಣ ಪರಿಸರದ ಚಿತ್ರಣ ಹಾಗೂ ಗ್ರಾಮೀಣ ಬದುಕಿನ ಎಲ್ಲ ಆಗು-ಹೋಗುಗಳ ಹಾಗೂ ಭಾರತದ ಗ್ರಾಮಗಳ ಬದುಕು ಹೇಗಿದೆ ಎಂಬುದನ್ನು ವಿಶ್ಲೇಷಿಸುವುದು ಈ ನಿಬಂಧದ ಮೂಲ ಉದ್ದೇಶವಾಗಿದೆ. ಇದನ್ನು ಪ್ರಸ್ತುತಪಡಿಸಲು ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಅವುಗಳೆಂದರೆ

- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
- ಪ್ರೊ. ಮಲೆಯೂರು ಗುರುಸ್ವಾಮಿ ಅವರ ಬದುಕು-ಬರಹ
- ಗ್ರಾಮೀಣ ಬದುಕಿನ ಚಿತ್ರಣ
- ಐತಿಹಾಸಿಕ ಅಂಶಗಳು
- ಆಧ್ಯಾತ್ಮಿಕತೆ ಮತ್ತು ವೈಚಾರಿಕತೆ
- ಉಪಸಂಹಾರ

ಮಲೆಯೂರು ಗುರುಸ್ವಾಮಿ ಅವರ ಒಟ್ಟು ಸಾಹಿತ್ಯವನ್ನು ಅವಲೋಕಿಸಿದಾಗ ಆಧುನಿಕ ಭಾರತದ ಗ್ರಾಮೀಣ ಜನತೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಆವರಣವನ್ನು ಸಾಹಿತ್ಯವಲಯಕ್ಕೆ ಅಳವಡಿಸುವಲ್ಲಿ ಲೇಖಕರ ಪ್ರತಿಭೆ ಮಹತ್ತರವಾದದ್ದು. ಹಾಗಾಗಿ ನಾನು ಇವರ ಮೂರು ಕಾದಂಬರಿಗಳನ್ನು ವಿಶ್ಲೇಷಿಸುವುದು ಮೂಲ ಉದ್ದೇಶವಾಗಿದೆ.

'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಎಂಬ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಅಲ್ಲಿನ ಗ್ರಾಮೀನ ಬದುಕಿನ ಚಿತ್ರಣ, ಇತಿಹಾಸ ಎಳೆಗಳು ಇಲ್ಲಿ

ಕಾದಂಬರಿ ರೂಪ ಪಡೆದಿದೆ. ಗ್ರಾಮ್ಯ ಪರಿಸರದ ಚಿತ್ರಗಳಿವೆ, ಸ್ವಾತಂತ್ರ್ಯೋತ್ತರ ಭಾರತದ ಗ್ರಾಮಗಳ ಬದುಕು ಹೇಗಿದೆ, ಎಂಬುದನ್ನು ಕಾದಂಬರಿಕಾರರು ವಿಶ್ಲೇಷಿಸಿದ್ದಾರೆ. ಇಲ್ಲಿನ ಪಾತ್ರಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಲೇಖಕರು ಕಂಡರಿಸಿದ್ದಾರೆ.

'ಅಪ್ರತಿಮವೀರ' ಕಾದಂಬರಿಯನ್ನು ಪ್ರಧಾನವಾಗಿಟ್ಟುಕೊಂಡು ರಾಜಮಹಾರಾಜರಿಗೆ ಸಂಬಂಧಿಸಿದ ವಿಷಯಗಳನ್ನು ಈ ಕಾದಂಬರಿ ಕಲೆ ಹಾಕಿದೆ. ಮೈಸೂರು ಸಂಸ್ಥಾನದ ರಾಜನೊಬ್ಬನ ಕಥೆಯೇ ಇದರ ಕಥಾವಸ್ತುವಾದರೂ ಅದರೊಟ್ಟಿಗೆ ರಾಜ ಪ್ರಭುತ್ವ, ಪ್ರಜಾಪ್ರಭುತ್ವಗಳೆರಡರ ತೌಲನಿಕ ಅಧ್ಯಯನ ಇಲ್ಲಿದೆ. ರಾಜರ ಕಥೆಯೆಂದರೆ ಸಾಮಾನ್ಯವಾಗಿ ಕಲ್ಪನೆ, ಆದರೆ ಕಲ್ಪನೆಗಿಂತ ಹೆಚ್ಚಾಗಿ ವಾಸ್ತವ ಮತ್ತು ಇತಿಹಾಸಗಳೆರಡಕ್ಕೂ ಸಮೀಪವಾಗಿ ಈ ಕೃತಿಯನ್ನು ರಚಿಸಿದ್ದಾರೆ. ವೈಚಾರಿಕತೆಯನ್ನು ಹೊಂದಿರುವ ಈ ಕೃತಿ ಮೈಸೂರು ರಾಜರ ಚರಿತ್ರೆಯನ್ನು ಕಟ್ಟಬೇಕೆಂದರೆ ಇರಬೇಕಾದ ಎಲ್ಲ ಐತಿಹಾಸಿಕ ಗುಣಗಳನ್ನು ಮೈಗೂಡಿಸಿಕೊಂಡಿವೆ. ಐತಿಹಾಸಿಕ ಅಂಶಗಳು ಈ ಕಾದಂಬರಿಯಲ್ಲಿ ಹೇಗೆ ಚಿತ್ರಿತವಾಗಿದೆ ಎಂಬುದರ ಅಧ್ಯಯನ ಈ ಅಧ್ಯಯನ ವಸ್ತುವಾಗಿದೆ.

'ಮಹಾಯಾತ್ರಿಕ' ಕಾದಂಬರಿಯನ್ನು ಪ್ರಧಾನವಾಗಿಟ್ಟುಕೊಂಡು ಇಲ್ಲಿನ ಅಧ್ಯಾತ್ಮ ಮತ್ತು ವೈಚಾರಿಕತೆಯನ್ನು ಗುರುತಿಸುವುದು. ಹಳೇ ಮೈಸೂರು ಭಾಗದಲ್ಲಿ ಆಧ್ಯಾತ್ಮಿಕ ಸಿದ್ಧಪುರುಷನಾಗಿ ಜನಮಾನಸದಲ್ಲಿ ಉಳಿದಿರುವ ವ್ಯಕ್ತಿಯೇ ಮಲೆಯ ಮಹದೇಶ್ವರರು, ಜನಪದರಲ್ಲಿ ಮಹದೇಶ್ವರರನ್ನು ಕುರಿತು ಅಗಾಧ ಸಾಹಿತ್ಯ ನಿರ್ಮಾಣವಾಗಿರುವುದು ಆ ವ್ಯಕ್ತಿಯ ಮಹಿಮೆಗೆ ಮತ್ತೊಂದು ಸಾಕ್ಷ್ಯರೂಪ. ಇಂಥ ವ್ಯಕ್ತಿಯ ಶಕ್ತಿಯನ್ನು ಕುರಿತು ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ 'ಮಹಾಯಾತ್ರಿಕ' ಕಾದಂಬರಿ ರೂಪಗೊಂಡಿದೆ. ಮಹದೇಶ್ವರರ ಒಟ್ಟು ಬದುಕಿಗೆ ಈ ಕೃತಿ ಕನ್ನಡ ಹಿಡಿದಿದೆ. ಈ ಕಾದಂಬರಿ ಮಹದೇಶ್ವರರ ಅಧ್ಯಾತ್ಮಶಕ್ತಿ, ಪ್ರಕೃತಿಪ್ರೇಮ, ಶಿಷ್ಯರ ಪಡೆ, ಒಟ್ಟು ಸಂದೇಶಗಳನ್ನು ಹೀಗೆ ಈ ಕೃತಿಯುದ್ದಕ್ಕೂ ಕಾದಂಬರಿಕಾರರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಪಠ್ಯ ವಿಷಯ ಮಾತ್ರವೇ ಅಲ್ಲದೇ, ಜಗತ್ತಿನ ಸಮಸ್ತ ಆಗು-ಹೋಗುಗಳೂ ಇವರ ಬಾಯಿಗೆ ಆಹಾರವಾಗುತ್ತಿದ್ದುವು. ಬಿಳಿಗಿರಿರಂಗನ ಬೆಟ್ಟದ ಸೋಲಿಗರಿಂದ ಹಿಡಿದು ವಾಷಿಂಗ್ಟನ್, ವೈಟ್‌ಹೌಸಿನ ತನಕ, ಚಾಮರಾಜನಗರದ ಬಿ.ಎಸ್.ವಿ. ಬಸ್ ಚರಿತ್ರೆಯಿಂದ ಹಿಡಿದು ಸದ್ದಾಂ ಹುಸೇನ್ ತನಕ ಪಾಠದ ನಡುವೆ ಇವರು ಹೇಳದ ವಿಷಯಗಳೇ ಇಲ್ಲ.

ವಚನ ಸಾಹಿತ್ಯದ ಮಟ್ಟಿಗಂತೂ ಮಲೆಯೂರು ಗುರುಸ್ವಾಮಿ ಅಧಿಕೃತ ವಕ್ತಾರರಂತೆ ಮಾತನಾಡಬಲ್ಲರು, ಭಾಷಣಕ್ಕೆ ನಿಂತರೆ ನೂರಾರು ಸಂಖ್ಯೆಯಲ್ಲಿ ವಚನಗಳು, ಅವರ ತುದಿನಾಲಿಗೆಯಲ್ಲಿ ನಲಿದಾಡುತ್ತವೆ. ಪದಗಳನ್ನು ಒತ್ತೀ ಒತ್ತಿ ಹೇಳುವ ಅವರ ಶೈಲಿಯ ಸೊಗಸೇ ಸೊಗಸು, ವಚನ ಸಾಹಿತ್ಯದ ಅರಿವಿರುವ ಒಬ್ಬ ಪ್ರಜ್ಞಾವಂತ ವೀರಶೈವ ಮಠಾಧಿಪತಿಗಳಷ್ಟೇ ಸಮರ್ಥವಾಗಿ ವಚನ ಸಾಹಿತ್ಯವನ್ನು ಮ.ಗು. ಅವರು ಅರೆದು ಕುಡಿದಿದ್ದಾರೆ.

ಪ್ರೊ. ಮಲೆಯೂರು ಗುರುಸ್ವಾಮಿ ಅವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಆದರೆ ಶ್ರೀ ಮಲೆಯ ಮಹದೇಶ್ವರ ಜೀವನ ಸಾಧನೆಗೆ ಸಂಬಂಧಿಸಿದ **'ಮಹಾಯಾತ್ರಿಕ'** ಕಾದಂಬರಿ ಜೀವನ ಪಯಣದ ಯಶಸ್ಸಿನ ಮೈಲಿಗಲ್ಲು, ಸದಾ ನಗು–ನಗುತಾ ಸಾಹಿತ್ಯಾಭಿರುಚಿಯ ಜೊತೆಗೆ ಸಾರಸ್ವತ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳುತ್ತಾ ಕನ್ನಡಕ್ಕಾಗಿ ದುಡಿಯುತ್ತಿದ್ದಾರೆ. ಇವರ ಬರವಣಿಗೆಯ ಗದ್ಯಶೈಲಿ ವಿಶಿಷ್ಟ ಮೆರಗಿನಿಂದ ಕೂಡಿದ್ದು, ಇವರ ಧರಿಸುವ ಉಡುಪುನಂತೆಯೇ ಆಕರ್ಷಣೀಯನಾದ ಮಾತು ಅರ್ಥಗಾಂಭೀರ್ಯದ ಬರವಣಿಗೆ, ಶಬ್ದ ಹಾಗೂ ಅರ್ಥಗಳ ಹೃದಯಂಗಮ ಸಮನ್ವಯವನ್ನು ಹೊಂದಿರುವ ಮನೋಹರವಾದ ವಾಗರ್ಥ ವಿಸ್ಮಯ ಇದರದಾಗಿದೆ.

ಪ್ರೊ. ಮ.ಗು. ಅವರ ವ್ಯಕ್ತಿತ್ವದ ಮತ್ತೊಂದು ಮುಖ್ಯವಾದ ಅಂಶವೆಂದರೆ ಅಪ್ರಿಯವಾದ ಸತ್ಯ, ಮೂಢನಂಬಿಕೆ. ಅಂಧಶ್ರದ್ಧೆ, ಡಂಬಾಚಾರಗಳನ್ನು ನಿರ್ಭಿಡೆಯಿಂದ ಹೇಳುವ ಎದೆಗಾರಿಕೆ, ಧಾರ್ಮಿಕ ವಲಯದ ಚಿಂತನೆಗಳನ್ನು ನಡೆಸುವಾಗ ಇಂತಹ ಮಾತುಗಳು ಮುಖ್ಯವಾಗುತ್ತವೆ.

ಮಲೆಯೂರು ಗುರುಸ್ವಾಮಿ ಅವರದು ವಿಶಿಷ್ಟ ಜೀವನಶೈಲಿ. ನೇರ ಸರಳ ಮತ್ತು ವಿಮರ್ಶಾತ್ಮಕ ಎಂದು ಅದನ್ನು ಹೇಳಬಹುದು. ಮೌನ ಮತ್ತು ಅರ್ಥವಾಗದ ಭಾಗಗಳು ಅದರಲ್ಲಿ ಇದ್ದಿರಬಹುದು. ಊಟೋಪಚಾರದಿಂದ ಬರವಣಿಗೆಯವರೆಗೆ ಇದರ ವ್ಯಾಪ್ತಿ; ಬದುಕನ್ನು ಬದಲಾಯಿಸಿ ಬಿಡುವ ಫಲವೇನು ಅವರದಲ್ಲ: ಸಾಧ್ಯವಾದರೆ ತಾವೇ ಬದಲಾಗಲು ಹೆಜ್ಜೆ ಇಡುವ ಪ್ರವೃತ್ತಿ ಅವರು ಯಾವುದಕ್ಕೂ ನೇರ ಅಂಟಿಕೊಂಡವರಲ್ಲ; ಹಾಗೆಂದು ಯಾವುದನ್ನೂ ಬಿಟ್ಟವರೂ ಅಲ್ಲ. ಜೀವನ ಹೇಗೆ ಇರಲಿ ಅದನ್ನು ಸಹೃತ್‌ಗೊಳಿಸುವತ್ತ ಅವರ ಒಲವು. ಅದನ್ನು ನಿರ್ದಿಷ್ಟ ರೀತಿಗೆ ಬಗ್ಗಿಸಲು ಹೋರಾಡುವ

ಜಾಯಮಾನ ಅವರದಲ್ಲ, ಎಷ್ಟು ಸಿಕ್ಕಿದರೆ ಅಷ್ಟು. ಬೆಟ್ಟಕ್ಕೆ ಹೆಣಗುವವರಲ್ಲ. ಅಷ್ಟರ ಮಿತಿಯಲ್ಲಿಯೇ ಸಂತೋಷವನ್ನು ಹುಟ್ಟಿಹಾಕಿ ಕೊಳ್ಳುವುದರಲ್ಲಿ ಅವರು ಧೀರರು.

ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿರುವ ಮಲೆಯೂರು ಗುರುಸ್ವಾಮಿ ಅವರು ಒಂದು ರೀತಿ ಸಶಕ್ತ ನಕ್ಷತ್ರದಂತೆ ಅವರ ವ್ಯಕ್ತಿತ್ವ. ಇವರು ಹುಟ್ಟಿದ ಅಥವಾ ಜನ್ಮ ಪಡೆದ ಸ್ಥಳ ಪುಟ್ಟಗ್ರಾಮ. ಮಲೆಯೂರು ಸಾಹಿತ್ಯ ಪ್ರಪಂಚಕ್ಕೆ ತನ್ನದೇ ಆದ ಘನತೆಯನ್ನು ಹೊಂದಿರುವ ಐತಿಹಾಸಿಕ ಸ್ಥಳವಾಗಿದೆ. ಕನ್ನಡದ ಆದಿಯಿಂದಲ್ಲ ಧರ್ಮ, ಕಲೆ, ಸಾಹಿತ್ಯ, ಸಿದ್ಧಾಂತ, ಜ್ಯೋತಿಷ್ಯ, ಆಯುರ್ವೇದ, ಮೊದಲಾದ ಸಮಗ್ರ ಗ್ರಂಥರಚನೆಗಳಿಗೆ ಆಗರವಾಗಿ ಸಾವಿರಾರು ವರ್ಷಗಳಿಗೂ ಹಿಂದೆ ಪ್ರಸಿದ್ಧಿ ಪಡೆದ ವಿದ್ಯಾಕ್ಷೇತ್ರ, ಈ ಸ್ಥಳದ ಪ್ರಮುಖ ಚಿಂತಕರಾಗಿ ಮಲೆಯೂರು ಗುರುಸ್ವಾಮಿ ಅವರು ಪ್ರಸ್ತುತ ಈ ಶತಮಾನದ ಅಪೂರ್ವ ವ್ಯಕ್ತಿ. ಸಾಹಿತ್ಯ ಸಂಸ್ಕೃತಿಗಳ ಸಮನ್ವಯತೆಯನ್ನು ಮೈಗೂಡಿಸಿಕೊಂಡು ನಾಡಿನಾದ್ಯಂತ ಪ್ರಚಾರ ಪ್ರಸಾರ ಪ್ರಚುರಪಡಿಸಿದ ಇವರು ಗಡಿನಾಡಿನ ಕರ್ನಾಟಕದ ಅತ್ಯಂತ ಹಿಂದುಳಿದ ಚಾಮರಾಜನಗರ ಜಿಲ್ಲೆಯ ಕನ್ನಡ ಗಡಿಯ ಗೌರವ ರಕ್ಷೆಯಾಗಿಯೂ ಕಾರ್ಯನಿರ್ವಹಿಸಿರುತ್ತಾರೆ. ಕರ್ನಾಟಕ, ಕೇರಳ, ತಮಿಳುನಾಡು ಈ ಮೂರು ರಾಜ್ಯಗಳ ಗಡಿಪ್ರಾಂತ್ಯದಲ್ಲಿನ ಚಾಮರಾಜನಗರದ ಸ್ಥಾನ ಅತೀ ಹೆಚ್ಚಿನ ಜವಾಬ್ದಾರಿ ಮತ್ತು ಗೌರವ ಪೂರ್ಣವಾದ ಸ್ಥಾನವನ್ನು ಗಳಿಸಿಕೊಡುವುದಾಗಿದೆ. ಈ ಸ್ಥನದಿಂದ ಆಯ್ಕೆಯಾದ ಇವರು ಸಾಹಿತ್ಯಕ್ಕಷ್ಟೇ ಅಲ್ಲ, ಸಾಮಾಜಿಕ, ಸಂಸ್ಥೆಗಳಿಗೂ, ರಾಜಕೀಯ ಕ್ಷೇತ್ರಗಳಿಗೂ ಸಾಂಸ್ಕೃತಿಕ ಕೇಂದ್ರಗಳಿಗೂ ಅನೇಕ ರೀತಿಯಿಂದ ಸಹಯೋಗ ನೀಡುತ್ತಾ ಇಲ್ಲಿಯ ಸರ್ವತೋಮುಖ ಅಭಿವೃದ್ಧಿಗೆ ತಮ್ಮ ಅನುಪಮ ಸೇವೆಯನ್ನು ನೀಡಿರುತ್ತಾರೆ ಎಂಬುದನ್ನು ನಾವು ನೋಡಬಹುದಾಗಿದೆ.

ಸಮಾಜದಲ್ಲಿನ ಯಾವುದೇ ಒಬ್ಬ ವ್ಯಕ್ತಿ ನಾನು ಎಷ್ಟು ವರ್ಷ ಬದುಕಿದೆ ಎನ್ನುವುದಕ್ಕಿಂತ, ಆತ ತನ್ನ ಬದುಕಿನ ಜೀವನದ ಅವಧಿಯಲ್ಲಿ ಏನೆಲ್ಲಾ ಒಳಿತು ಮಾಡಿದೆ ಎಂಬುದು ಮುಖ್ಯವಾಗಿರುತ್ತದೆ. ತಮಗಾಗಿ ಹುಟ್ಟಿದರು ತಮ್ಮನ್ನೇ ತ್ಯಾಗ ಮಾಡಿಕೊಂಡು ಬದುಕಿ ದಂತಕಥೆಯಾದವರಿದ್ದಾರೆ; ಸ್ವಾರ್ಥಪರರಾಗದೆ ಸಾಂಸ್ಕೃತಿಕ ಪರಂಪರೆಯನ್ನು ವಿಸ್ತರಿಸಿದ್ದಾರೆ. ಇನ್ನೂ ಕೆಲವರು ತಮ್ಮನ್ನೂ ಸಂತೈಸಿಕೊಂಡು ನೆಲದ ಮೇಲೆ ಮಾನವೀಯತೆ ಚಿತ್ರಿಸಿದ್ದಾರೆ. ನಿಜವಾದ ಅರ್ಥದಲ್ಲಿ ಮಾನವರಾಗಿ ಬದುಕಿದ್ದಾರೆ. ಉಳಿದ ಬಹುಪಾಲು

ಜನ ಒಂದಿಷ್ಟು ಸಂಪತ್ತನ್ನು ಸಂಗ್ರಹಿಸಿರುತ್ತಾರೆ. ತಮ್ಮ ಅಸ್ತಿತ್ವವೆ ಅಂತಹವರಿಗೆ ತಿಳಿದಿರುವುದಿಲ್ಲ. ಈ ಮೇಲೆ ತಿಳಿಸಿದ ಮೊದಲು ಅಥವಾ ಕೊನೆಯ ಪಂಕ್ತಿಯಲ್ಲಿ ನಿಲ್ಲದೆ, ತಮ್ಮ ಅರ್ಥಪೂರ್ಣ ಬದುಕಿನ ಔಪಚಾರಿಕ ಹಾಗೂ ಅನೌಪಚಾರಿಕ ಸಂದರ್ಭದಲ್ಲಿ ಮಾನವೀಯತೆಗೆ ಅಂಟಿಕೊಂಡವರು ಗೊಡ್ಡು ಸಂಪ್ರದಾಯವನ್ನು ಬುದ್ಧಿ ಪ್ರಧಾನವಾಗಿ ತಿರಸ್ಕರಿಸಿ ಮಲೆಯೂರು ಗುರುಸ್ವಾಮಿ ಅವರು ವೈಚಾರಿಕ ಹೆಜ್ಜೆಗಳನ್ನಿರಿಸಿದವರು. ಚಾಮರಾಜನಗರ ಜೈನಪರಂಪರೆಯ ಕೇಂದ್ರ ಕನಕಗಿರಿಯ ಸೆರಗಂಚಿನ ಮಲೆಯೂರಿನವರಾದ ಗುರುಸ್ವಾಮಿ ಅವರು ಜೈನರ ಅಹಿಂಸಾ ತತ್ವಗಳನ್ನು ಮೈಗೂಡಿಸಿಕೊಂಡ, ಭಕ್ತಿಭಂಡಾರಿ ಬಸವಣ್ಣನವರ ವಚನಗಳ ಕಸವನ್ನುಂಡು ಕಂಗೊಳಿಸಿದ ಅಮೃತಲತೆ, ಈ ಅಧ್ಯಾಯದಲ್ಲಿ ಜೈನಧರ್ಮದ ತತ್ವಸಿದ್ದಾಂತಗಳು ಹೇಗೆ ಮೂಡಿ ಬಂದಿದೆ ಎಂಬುದನ್ನು ತಿಳಿಯಬಹುದಾಗಿದೆ. 'ಮಲೆಯೂರು ಗುರುಸ್ವಾಮಿ ಅವರು ಈ ಮಹತ್ಸಾಧಕರನ್ನು ಕುರಿತು ಗಾಢವಾಗಿ ಅಧ್ಯಯನ ಮಾಡಿದವರು, ಜೊತೆಜೊತೆಯಲ್ಲಿ ಜೈನಧರ್ಮದ ತತ್ವಸಿದ್ಧಾಂತಗಳು ಅವರನ್ನು ಪ್ರಭಾವಿಸಿದ್ದವು. ತಾನು ಮೇಲ್ವರ್ಗದ ಕುಟುಂಬದಲ್ಲಿ ಜನ್ಮವೆತ್ತಿದರೂ, ನಾಡಿನ ದುರ್ಬಲರ ಪರವಾಗಿಯೇ ಸದಾ ತುಡಿಯುವ ಮನಸ್ಥಿತಿ ಹೊಂದಿರುವ ಮಲೆಯೂರು ಗುಡಿ-ಗೋಪುರಗಳಿಂದ ದೂರ ನಿಂತು ಗೊಡ್ಡು ಸಂಪ್ರದಾಯಗಳನ್ನು ತೂರಿಬಿಟ್ಟವರು. ಸಮತೆಯ ತತ್ವವನು ವಿಚಾರಕ್ಕೆ ಸೀಮಿತಗೊಳಿಸಿದ ಆಚರಣೆಗೆ ತಂದುಕೊಂಡವರು.

ಚಾಮರಾಜನಗರ ಜಿಲ್ಲೆ ಕರ್ನಾಟಕದಲ್ಲೇ ಅತ್ಯಂತ ಹಿಂದುಳಿದ ಜಿಲ್ಲೆಯಾದರೂ ಸಾಹಿತ್ಯದ ಸೊಗಡು ಸಾಕಷ್ಟು ಜನಜನಿತವಾಗಿರುವುದನ್ನು ನೋಡಬಹುದಾಗಿದೆ. ಈ ಭಾಗದಲ್ಲಿ ದಟ್ಟವಾಗಿ ಜನಪದವನ್ನು ಹಾಸಿಕೊಂಡಿರುವ ದೇಶಿಪರಂಪರೆಯ ಸೊಗಡಿನ ಜಿಲ್ಲೆ, ವಾರಗಟ್ಟಲೆ, ತಿಂಗಳುಗಟ್ಟಲೆ, ಹಾಡಿದರೂ ಮುಗಿಯದ ಜನಪದ ಕಲಾವಿದರು ಮಂಟೇಸ್ವಾಮಿ, ಮಾದೇಶ್ವರರು ತಿರುಗಾಡಿದ ಈ ನೆಲದಲ್ಲಿ ನೆಲೆಸಿದ್ದಾರೆ.

ಇಂತಹ ಜನಪದ ಹೂದೋಟದಲ್ಲಿ ಜನ್ಮ ಪಡೆದ ಶ್ರೀ ಮಲೆಯೂರು ಗುರುಸ್ವಾಮಿ ಅವರು ಚಾಮರಾಜನಗರದ ಜಿಲ್ಲೆಯ ಇತಿಹಾಸದ ಎಳೆ ಎಳೆಯನ್ನು ಬಿಡಿಸಬಲ್ಲ ನಮ್ಮೊಳಗಣ ಶ್ರೇಷ್ಠ ಸಂಶೋಧಕರು, ತಮ್ಮ ಅಧ್ಯಾಪಕ ವೃತ್ತಿ ಮತ್ತು ಸಾಹಿತ್ಯ ಎರಡರಲ್ಲೂ ಸೈ ಎನಿಸಿಕೊಂಡೇ ಮುನ್ನೆಡದವರು, ಇವರ ಕೃತಿಗಳು ಮೌಲಿಕ ಕೃತಿಗಳು ಅದರಲ್ಲೂ

ಕಾದಂಬರಿಗಳು ಉತ್ತಮ ಕೃತಿಗಳಾಗಿ ಜನಪದದ ಶೈಲಿಯಲ್ಲಿ ಮುಡಿಬಂದಿರುವುದು ಇವುಗಳ ವಿಶೇಷವಾಗಿದೆ. ಇವರ ಮೂರು ಕಾದಂಬರಿಗಳಲ್ಲೂ ಲೇಖಕರ ಹೃದಯ ವೈಶಾಲತೆ, ಮಾನವೀಯತೆ ಮತ್ತು ಸಮಷ್ಠಿ ಪ್ರಜ್ಞೆಯನ್ನು ಗುರುತಿಸಬಹುದಾಗಿದೆ. ಮಲೆಯೂರು ಜೈನರ ಪುಣ್ಯಕ್ಷೇತ್ರಗಳಲ್ಲಿ ಒಂದೆನಿಸಿ ಭಾರತ ದೇಶದ ಚರಿತ್ರೆಯಲ್ಲಿ ಅಜರಾಮರವಾಗಿದೆ. ಕನಕಗಿರಿಯ ದಕ್ಷಿಣ ಪಾರ್ಶ್ವದಲ್ಲಿ ಹಿಂದೆ ಛಲದಂಕಪುರ ಎನ್ನುವ ಊರು ಇತ್ತಂತೆ, ಈ ಹೆಸರೇ ಮಗು ಅವರ ಮೊದಲ ಕಾದಂಬರಿ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ'ಯಲ್ಲಿ ಬಂದಿದೆ. ಈ ಬಾರಿಗೆ ಒಂದು ಸಹಸ್ರ ವರ್ಷ ತುಂಬಿದ ಕಾರಣಕ್ಕಾಗಿ ಊರಿಗೆ ಏಳಿಗೆ ಕಡಿಮೆ ಎನ್ನುವ ಹಿನ್ನೆಲೆಯಲ್ಲಿ ಈಗಿರುವ ಸ್ಥಳದಲ್ಲಿ ಊರು ನಿರ್ಮಾಣವಾಗಿ. ಮಲೆಯು(ಬೆಟ್ಟ) ಪಕ್ಕದ ಊರು 'ಮಲೆಯೂರು' ಎಂದಾಯಿತು. ಕನಕಗಿರಿ ಜೈನರ ದಿಗಂಬರ ಪಂಥದ ಅನುಯಾಯಿಗಳ ಧರ್ಮಕ್ಷೇತ್ರ. ಕೊಳ್ಳೇಗಾಲದ ಸಮೀಪದ ಬಸ್ತಿಪುರದಿಂದ ತೀರ್ಥಂಕರರು ಹೊರಟು ಬಂದು ಇಲ್ಲಿ ನೆಲೆನಿಂತರು ಎಂಬುದಾಗಿ ಕನಕಗಿರಿ ಕ್ಷೇತ್ರದ ಮಾಹಿತಿಗಳು ತಿಳಿಸುತ್ತದೆ. 'ಭುವನಕೀರ್ತಿ ಭಟ್ಟಾರಕ ಸ್ವಾಮಿಗಳು ಈಗ ಅಲ್ಲಿ ನೆಲೆಯೂರಿ ಪುಣ್ಯಕ್ಷೇತ್ರದ ಬೆಳವಣಿಗೆಗೆ ಕಾರಣರಾಗಿ ದೇಶದ ಹಲವು ಪ್ರತಿಷ್ಠಿತ ಕ್ಷೇತ್ರಗಳಲ್ಲಿ ಮಲೆಯೂರಿನ ಕನಕಗಿರಿ ಕ್ಷೇತ್ರವೂ ಒಂದೆಂಬಂತೆ ಮಾಡುವಲ್ಲಿ ಶ್ರಮಿಸಿದ್ದಾರೆ. ಈಗೆ ಈ ಅಧ್ಯಾಯದಲ್ಲಿ ಗ್ರಾಮದ ಹಿನ್ನೆಲೆ ಅಲ್ಲಿನ ಸ್ಥಳದ ಮಹಿಮೆ, ಅಲ್ಲಿನ ಸಾಹಿತ್ಯ ಹಾಗೂ ಸಮಾಜಕ್ಕೆ ಈ ಭಾಗದ ಕೊಡುಗೆ ಏನು ಎಂಬುದನ್ನು ತಿಳಿಸುವುದಾಗಿದೆ. ಇಂದಿನ ದಿನಗಳಲ್ಲಿ ಮಲೆಯೂರು ಗ್ರಾಮ ರಾಜಕೀಯ ದೊಂಬರಾಟ ಅವ್ಯಾಹತವಾಗಿ ನಡೆಯುತ್ತಿದೆ. ಊರಿನ ಉದ್ಧಾರಕ್ಕಿಂತ ರಾಜಕೀಯ ಲೆಕ್ಕಾಚಾರಗಳೇ ಮುಖ್ಯವಾಗುತ್ತಿವೆ ಎಂಬುದನ್ನು ಲೇಖಕರಾದ ಮಗು ಅವರೇ ತಮ್ಮ ಅಭಿನಂದನ ಗ್ರಂಥದಲ್ಲಿ (ಮಹಾಮನ) ಹೇಳಿದ್ದಾರೆ. "ಆರುನೂರು ಅಡಿ ಭೂಮಿಯನ್ನು ಕೊರೆದರೂ ನೀರು ಸಿಕ್ಕದಿದ್ದರೂ, ತೆಂಗಿನ ಮರದಿಂದ ತೆಗೆಯುವ ನೀರಾಕ್ಕೇನೂ ಕೊರತೆ ಇಲ್ಲ. ಊರಿನ ಚಾವಡಿಯಲ್ಲಿಯೇ ತೀರ್ಮಾನವಾಗುತ್ತಿದ್ದ ಸಣ್ಣಪುಟ್ಟ ನ್ಯಾಯಗಳು ಈಗ ಪೊಲೀಸ್ ಸ್ಟೇಷನ್ ಹತ್ತುತ್ತವೆ. ಅಲ್ಲಿ ಎರಡು ಕಡೆಯುವರೂ ಹಣ ಮತ್ತು ಮಾನ ಎರಡನ್ನು ಕಳೆದುಕೊಂಡು ಪೆಚ್ಚು ಮೋರೆ ಹಾಕಿಕೊಂಡು ಹಿಂದಕ್ಕೆ ಬರುತ್ತಾರೆ. ರಾಜಕೀಯದ ಸೋಂಕು ಎಲ್ಲರಿಗೂ ತಗುಲಿದೆ" ಎಂದು ಹೇಳಿರುವುದನ್ನು ನಾವು ನೋಡಬಹುದಾಗಿದೆ.[೧]

೧. ಮಹಾಮನೆ, ಅಭಿನಂದನಾ ಗ್ರಂಥ, ಸಂಪಾದಕರು. ಸೋಮಶೇಖರ್ ಬಿಸಲ್ವಾಡಿ, ಪು. ೧೯

ಮಗು ಅವರು ಮೈಸೂರು ಚಾಮರಾಜನಗರ ಅವಳಿ ಜಿಲ್ಲೆಗಳ ಬಗೆಗೆ ವಿಶೇಷ ಮಮತೆಯನ್ನು ಬಂದಿರುವ ವ್ಯಕ್ತಿ ಎನ್ನಬಹುದಾಗಿದೆ. ಏಕೆಂದರೆ ಇವರ ಕಾದಂಬರಿಗಳು ಹಾಗೂ ಇನ್ನಿತರ ಕೃತಿಗಳನ್ನು ಅವಲೋಕಿಸಿದಾಗಿ ಸಾಮಾನ್ಯವಾಗಿ ಇವರ ಎಲ್ಲ ಕೃತಿಗಳ ವಿಷಯ ವಿಚಾರವು ಈ ಭಾಗದ ವಿಷಯಪೂರಕವಾಗಿರುವುದನ್ನು ನೋಡಬಹುದಾಗಿದೆ. ಈ ಅಧ್ಯಾಯದಲ್ಲಿ ಹೆಚ್ಚಾಗಿ ಲೇಖಕರ ಬಗ್ಗೆ ಹೆಚ್ಚಿನ ವಿಷಯ-ವಿಚಾರಗಳನ್ನು ಹೇಳುತ್ತಾ ಹೋಗುತ್ತೇನೆ. ಮ.ಗು ಅವರು ಮೂರು ಕಾದಂಬರಿಗಳನ್ನು ಬರೆದಿದ್ದಾರೆ. ಈ ಮೂರು ಕಾದಂಬರಿಗಳನ್ನು ಅವಲೋಕಿಸಿದಾಗಿ ಈ ಲೇಖಕರು ಓರ್ವ ದಾರ್ಶನಿಕ ದೃಷ್ಟಿಯ ಕಾದಂಬರಿಕರರಾಗಿಯೂ ಪ್ರಸಿದ್ಧರು ಎಂಬುದು ತಿಳಿಯುತ್ತದೆ. ಈ ಕಾದಂಬರಿಗಳಲ್ಲಿ ಬರುವ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮತ್ತು ರಾಜಕೀಯ ಸ್ಥಿತ್ಯಂತರಗಳನ್ನು ಆಳವಾಗಿ ಬಲ್ಲವರಾಗಿದ್ದು ಇಂತಹ ವಿಚಾರ-ಧಾರೆಗಳನ್ನು ತಮ್ಮ ಕೃತಿಗಳಲ್ಲಿ ದರ್ಶನಗೈದಿದ್ದಾರೆ. ರಸಋಷಿ, ವರಕವಿ, ಯುಗದಕವಿ, ಮಹಾಕವಿ ಕುವೆಂಪು ಅವರ ಕಾವ್ಯದರ್ಶನ ಮತ್ತು ಕ್ರಾಂತಿದರ್ಶನದ ಬಗೆಗೆ ವಿಶೇಷ ಆಸಕ್ತಿಯನ್ನು ಪಡೆದಿರುವ ಲೇಖಕರು ಅವನ್ನು ತಮ್ಮ ಮೌಲ್ಯಯುತ ಬದುಕಿನ ದೇದೀಪ್ಯಮಾನವಾದ ಕಿರಣಗಳೆಂದು ಭಾವಿಸುತ್ತಾರೆ. ಚಾರಿತ್ರಿಕ ವಿಷಯ ಸಂಗತಿಗಳನ್ನು ಹೃದಯವಾಗಿ ಮನಂಬುಗುವಂತೆ ಚಿತ್ರಿಸಿ ಓದುಗರ ಚಿತ್ತ ಭಿತ್ತಿಯನ್ನು ಒಳಹೊಕ್ಕರು. ಸಂಸಕವಿಯು ಮೈಸೂರು ಯದುಕುಲ ಬಗೆಗೆ ತಾಳಿದ್ದ ವಿಶೇಷ ಅಧ್ಯಯನಾಸ್ಥೆಯ ದ್ಯೋತಕವಾಗಿ ನಾಟಕ ಸಾಹಿತ್ಯವು ಒಡಮೂಡಿದಂತೆ ಮಗು ಅವರ ಯದುವಂಶದ ಬಗೆಗಿನ ಆಸಕ್ತಿಮನಸೆಳೆಯುತ್ತದೆ. ಮೈಸೂರು ಅರಸು ಚಿಕ್ಕದೇವರಾಜನ ವ್ಯಕ್ತಿತ್ವ ಅನುಪಮ ಹಾಗೂ ಅಸಾಧಾರಣವಾದುದು. ಧೀರೋದಾತ್ತದೆಯಿಂದ ಕೂಡಿದುದು. ಕಡುವೈರಿಗಳು ಹೂಡುವ ರಾಜತಂತ್ರ, ಪ್ರತಿತಂತ್ರ, ಕುತಂತ್ರಗಳನ್ನು ತನ್ನ ರಾಜವ್ಯೂಹದ ಆಯುಧದಿಂದ ಬೇಧಿಸಿ ಭೇದಿಸಿದ ಮುತ್ಸದ್ದಿಯವನು. ತನ್ನ ಅಜೇಯ ಪೌರುಷ-ಪರಾಕ್ರಮವನ್ನು ಸಹಜ ರಾಜತಾಂತ್ರಿಕ ಸ್ತರಗಳಲ್ಲಿ ಮೆರೆದವನು, ತನ್ನ ಸಾಮಾನ್ಯ ನಾಡಜನರ ಒಳಿತನ್ನೇ ಬಯಸಿ ಅವರೊಡನೆ ಬೆರೆತು ಒಂದಾದವನು. ಸುವರ್ಣ ಸಿಂಹಾಸನದ ಗದ್ದುಗೆಯನ್ನೇರಿದರೂ ಪ್ರಜಾವತ್ಸಲನಾಗಿ ರಾರಾಜಿಸಿದವನು, ಮಾನವೀಯತೆಯನ್ನು ಮೆರೆದ ಉಜ್ವಲ ಪುರುಷನವನು, ಲೇಖಕರು ಈ ಎಲ್ಲ ಅಂಶಗಳನ್ನು ಮಥಿಸಿ, ಎಕ್ಕಿ ಸಾಣೆ ಹಿಡಿದು ಅಕ್ಷರಗಳಲ್ಲಿ ಒಡಮೂಡಿಸಿದ್ದಾರೆ. ತಮ್ಮ ಚಾರಿತ್ರಿಕ ಕೃತಿಯಲ್ಲಿ 'ಅಪ್ರತಿಮವೀರ' ಕಾದಂಬರಿಯೂ ಹಳೆಯ ಮೈಸೂರು ಪ್ರಾಂತ್ಯವನ್ನಾಳಿದ ಮಹಾರಾಜರುಗಳಲ್ಲಿ ಒಬ್ಬರು

ಪ್ರಸಿದ್ಧ ಚಿಕ್ಕದೇವರಾಜೊಡೆಯರ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಂಗತಿಗಳ ಪೂರಿತ ಮಾರ್ಮಿಕ ಸಂಶೋಧನಾತ್ಮಕ ರಚನೆ. ಇದು ಮ.ನ.ಮೂರ್ತಿ ಅವರ 'ಚಿಕ್ಕದೇವರಾಜ' ಕೃತಿಯ ಮುಂದುವರೆದ ಭಾಗದಂತಿದ್ದು ಸತ್ಯ ಘಟನೆಗಳನ್ನು ಬೆನ್ನುಹತ್ತಿ ರಚಿಸಿದ ಸಮರ್ಥ ಚಾರಿತ್ರಿಕ ಪ್ರಸಿದ್ಧ ಕಾದಮುಬರಿಯಾಗಿದೆ. ಚಿಕ್ಕದೇವರಾಯನು ಎಂತಹ ವಿಶಿಷ್ಟ ಧೀಮಂತ ನಾಡಪ್ರೇಮಿ ಎಂಬುದನ್ನು ಪ್ರತಿಮಾವೀರ ಕಾದಂಬರಿ ಭದ್ರಪಡಿಸಿದೆ. 'ಚಿಕ್ಕದೇವ ಬೂಪ ಮನೆಯಲ್ಲಿ ದೀಪ' ಎಂಬ ಖ್ಯಾತಿ ಆತನ ಯಸಸ್ವೀ ಆಡಳಿತ ಕ್ರಮವನ್ನು ಅಣುರಣಿಸಿತು. ಅಂದು ಪುಂಖಾನುಪುಂಖವಾಗಿ ಘಟಿಸಿಹೋದ ಜೈನ–ವೀರಶೈವ–ವೈದಿಕ ಮತಗಳ ಸಂಘಷಗಳನ್ನು ದುಷ್ಪರಿಣಾಮಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಮ.ಗು ಅವರ ಕೊಡುಗೆ ಮತ್ತು ಸ್ಥಾನವನ್ನು ಭದ್ರಪಡಿಸಿರುವ ಕ್ರತಿ ಇದಾಗಿದೆ.

ಹದಿನೈದನೆಯ ಶತಮಾನದಲ್ಲಿ ಆಗಿಹೋದ ಮಹಾನ್ ಸಂತ, ಸಮಾಜ ಸುಧಾರಕ ಹಾಗೂ ಒಬ್ಬ ಮಹಾನ್ ದಾರ್ಶನಿಕ ಸಿದ್ಧಪುರುಷ ಶ್ರೀ ಮಲೆಯ ಮಹದೇಶ್ವರರು ಕಾಡಿನ ಜನರಲ್ಲಿ ಬೀಡುಬಿಟ್ಟು ಮಡುಗಟ್ಟಿದ್ದ ಮೌಢ್ಯ, ಕಂದಾಚಾರಗಳನ್ನು ಬುಡಸಮೇತ ಕಿತ್ತು ಹಾಕಿದವರು; ಅಹಿಂಸಾ ಧರ್ಮವನ್ನು ಪ್ರತಿಪಾದಿಸಿ ಜಾತ್ಯತೀತವಾಗಿ ಮೆರೆದವರು. ಮಲೆಯ ಮಹದೇಶ್ವರ ಒಬ್ಬ ಕಾಯಕ ಜೀವಿ, ಜನಪದ ಬಿಂದು ಚಾರಿತ್ರಿಕ ಮೇರು ಪುರುಷ, ಹಾಗೆ ಇಲ್ಲಿನ ಲೇಖಕರಾದ ಮಲೆಯೂರು ಗುರುಸ್ವಾಮಿ ಅವರು ಅಂತಹ ಮಹಾನ್ ವ್ಯಕ್ತಿಯನ್ನು ತಮ್ಮ 'ಮಹಾಯಾತ್ರಿಕ' (೧೯೮೯) ಬೃಹತ್ ಹಾಗೂ ಮಹತ್ ಕಾದಂಬರಿಯಲ್ಲಿ ಚಿನ್ಮಯ ಸ್ವರೂಪವಾಗಿ ಚಿತ್ರಿಸಿದ್ದಾರೆ. ಮಹದೇಶ್ವರರು ಮಲೆನಾಡು ಬೀಡುಗಳಲ್ಲಿ ವಾಸಿಸುತ್ತಿದ್ದವರ ಬದುಕನ್ನು ಹಸನುಗೊಳಿಸಲು ದಲಿತೋದ್ಧಾರ, ಹರಿಜನೋದ್ಧಾರ, ಗಿರಿಜನೋದ್ಧಾರ ಮತ್ತು ಸಮಾಜೋದ್ಧಾರ ಹಾಗೂ ಪರಿವರ್ತನೆಯ ಹಿನ್ನೆಲೆಯಲ್ಲಿ ಕಾರ್ಯವೆಸಗಿದವರು. ಈ ಕಾದಂಬರಿಯಲ್ಲಿ ಮಹಾಮಹಿಮನು ಬೋಧಿಸಿದ ಅಹಿಂಸಾ ಧರ್ಮಪಾಲನೆ ಮತ್ತು ಮೌಢ್ಯ ನಿರ್ಮೂಲನಾ ಕಾರ್ಯಕ್ರಮಗಳು ಮತ್ತು ಅನುಸರಿಸಿದ ಜಾತ್ಯಾತೀತತೆಯನ್ನು ವಿಶದವಾಗಿ ಕಾಣಬಹುದಾಗಿದೆ. ಒಟ್ಟಿನಲ್ಲಿ ಮಲೆಯ ಮಹಾದೇಶ್ವರರ ಸಾಧನೆಯ ಮಾರ್ಗವನ್ನು ತಮ್ಮ ಒಳಗಣ್ಣಿನ ನೋಟದಿಂದ ದರ್ಶಿಸಿ ಸರಳ ಶೈಲಿ ಹಾಗೂ ಜನಪದದಲ್ಲಿ ಎಲ್ಲ ವರ್ಗದ ಜನತೆಗೆ ಅರ್ಥವಾಗುವ ಗ್ರಾಮೀಣ ಶೈಲಿಯ ಮಾತುಗಳ ಹಾಗೂ ಗ್ರಾಮೀಣ ಜನತೆಗೆ ಅರ್ಥವಾಗುವ

ಆಡುಭಾಷೆಯಲ್ಲಿ ಲೇಖಕರು ಬರೆದಿದ್ದಾರೆ ಎಂಬುದನ್ನು ಈ ನಿಬಂಧದ ಈ ಅಧ್ಯಾಯದಲ್ಲಿ ನೋಡಬಹುದಾಗಿದೆ.

ಈ ಅಧ್ಯಾಯದಲ್ಲಿ ಲೇಖಕರ ಸಾಹಿತ್ಯ ನಿರ್ಮಿತ ವಿಚಾರ ಪ್ರಚೋದಕವೇ ಹೊರತು ಪ್ರಚಾರ ಸಾಧಕವಲ್ಲ ಎಂಬುದನ್ನು ನಾವು ತಿಳಿಯಬಹುದು. ಲೇಖಕರಾದ ಮ.ಗು ಅವರ ಸಾಹಿತ್ಯ ಕೊಡುಗೆ ಎಂದಿಗೂ ಗಟ್ಟಿಯಾಗಿ ನಿಲ್ಲುವಂತಹುದು. ವೈಚಾರಿಕ ನೆಲೆಯಲ್ಲಿಯೇ ನಿಂತು ಚಿಂತನೆಗೈದು ಅಧ್ಯಾತ್ಮವನ್ನು ಅನುಸರಿಸಿ ಪಸರಿಸುವ ಪ್ರಗತಿಪರ ನಿಲುವು ಅವರದು. ಸಾಧು ಸಂತರ ಸಾಧನೆಗಳನ್ನು ಪವಾಡಗಳ ಹಿನ್ನೆಲೆಯಲ್ಲಿ ನೋಡುವ ಭಾವುಕ ಸ್ಥಿತಿಯನ್ನುಳ್ಳವರಾಗದೆ ಆ ಮಹಾಮಹಿಮರು ತಮ್ಮ ಜೀವಿತಾವಧಿಯಲ್ಲಿ ಜನಮಾನಸದಲ್ಲಿ ಬೆರೆತು ಒಂದಾಗಿ ಗೈದ ಒಳಿತನ್ನು ದಾಖಲಿಸುವ ನಿರ್ವ್ಯಾಜ್ಯ ಮನೋವಾಂಛೆಯನ್ನುಳ್ಳವರು, ಅವರ ಬರಹ ಕಾಲ್ಪನಿಕ ಕಥಾವಸ್ತುಗಳ ರೇಖೆಗಳನ್ನು ಮೀರಿದುದು, ಮೊದಲಿನಿಂದಲೂ ಕನ್ನಡನಾಡಿನ ಚರಿತ್ರೆಯ ಬಗೆಗೆ ವಿಷಯ ಹಾಗೂ ಅಪಾರ ಜನಪರ ಕಾಳಜಿ ಮತ್ತು ಅಧ್ಯಯನಾಸಕ್ತಿಯನ್ನು ಹೊಂದಿದವರು. ಅಂತೆಯೇ 'ಮಗು' ಅವರು ಮಂಟೇಸ್ವಾಮಿ ಹಾಗೂ ಮಲೆಯ ಮಹದೇಶ್ವರರಂತಹ ದಿವ್ಯಾತ್ಮರು ಸಂಚರಿಸಿದ ಪ್ರದೇಶದೆಲ್ಲೆಡೆ ವಿಹರಿಸಿ ಸಂತಸಗೊಂಡಿದ್ದಾರೆ. ಜೀವಿಗಳ ಕಷ್ಟಕೋಟಲೆಗಳನ್ನು ಮತ್ತು ಸಾಂಸ್ಕೃತಿಕ ಲೋಕವನ್ನು ವಿಸ್ತರಿಸಿದ್ದಾರೆ. ಯಾವುದೇ ಒಬ್ಬ ಸಂಶೋಧಕ ಅನ್ವೇಷಕನಿಗೆ ಒಂದು ವಿಷಯದಲ್ಲಿ ಭೇದವಿದ್ದಲ್ಲಿ ಚಿಂತನ ಮಂಥನವೇರ್ಪಟ್ಟು ಉಪಯೋಗವಾಗಬಲ್ಲುದು. ಐತಿಹಾಸಿಕ ಸತ್ಯ ಹೊರಹೊಮ್ಮಬಹುದು ಎಂಬುದು ಅವರ ದೃಢ ಅಭಿಪ್ರಾಯ. ಅದನ್ನು ಮುಕ್ತವಾಗಿ ಯುಕ್ತವಾಗಿ ಶಕ್ತವಾಗಿ ಸ್ವಾಗತಿಸುತ್ತಾರೆ ಕೂಡಾ. ಇದು ಸತ್ಯಶೋಧನೆಗೆ ಉತಮ ಮಾದರಿ ಎನ್ನುತ್ತಾರೆ. ಅನಿಶ್ಚಿತ ವಿಷಯಗಳ ಬಗೆಗೆ ಊಹಾಪೋಹ ಸಲ್ಲ ಕೂಡದು ಎನ್ನುತ್ತಾರೆ. ಯಾವುದೇ ವ್ಯಕ್ತಿಯು ತಾನು ತುಸುಮಟ್ಟಿಗಾದರೂ ಅರಿವನ್ನು ಹೊಮದಿರಬೇಕೆಂಬುದನ್ನು ಮತ್ತು ಅದರ ಅಗತ್ಯವನ್ನು ಮನಗಂಡಿದ್ದಾರೆ. ಮಗು ಅವರ ಬರಹಗಳಲ್ಲಿ ಸಾಂದರ್ಭಿಕವಾಗಿ ಅಲ್ಲಲ್ಲಿ ಮಿಂಚುವ ಗಾದೆ ಮಾತುಗಳು ಮತ್ತು ನಾಣ್ಣುಡಿಗಳು ವಚನ ಸಾಹಿತ್ಯದ ವಿಚಾರಗಳು ಎಲ್ಲ ವರ್ಗದ ಜನತೆಯ ಪ್ರೀತಿಯನ್ನು ಎಲ್ಲಾ ವರ್ಗದ ಜನತೆಯ ಮನಸ್ಸನ್ನು ಸೆಳೆಯುವ ಅವರ ಆಕರ್ಷಿತವಾದ ಮಾತುಗಾರಿಕೆ, ಮಾತುಗಾರಿಕೆ ಎಂದಾಗ ಪ್ರತಿಯೊಬ್ಬ ವ್ಯಕ್ತಿಯ ಮಾತುಗಾರಿಕೆ ಸಭೆ--ಸಮಾರಂಭಗಳಲ್ಲಿ ಮಾತನಾಡುವವರನ್ನು ನಾವು ಕೇಳಿದ್ದೇವೆ. ಆದರೆ

ಮಲೆಯೂರು ಗುರುಸ್ವಾಮಿ ಅವರ ಮಾತುಗಾರಿಕೆ, ವಿಭಿನ್ನವಾಗಿರುತ್ತದೆ. ಅವರು ಮಾತನಾಡುವ ಶೈಲಿ ಕೆಲವು ಪದಗಳನ್ನು ಮತ್ತೊಮ್ಮೆ ಮಗದೊಮ್ಮೆ ಒತ್ತಿ ಒತ್ತಿ ಹೇಳುತ್ತಿರುತ್ತಾರೆ. ಕೇಳುಗರಿಗೆ ಒಂದು ರೀತಿಯ ಆಶ್ಚರ್ಯ ಹಾಗೂ ರೋಮಾಂಚನವಾಗುತ್ತದೆ. ಒಟ್ಟಾರೆಯಾಗಿ ಮಗು ಅವರ ಮಾತುಗಾರಿಕೆ ಎಷ್ಟು ಕೇಳಿದರೂ ಅದು ಅತೃಪ್ತಿದಾಯಕ ಎನಿಸುತ್ತದೆ.[೨]

ಈ ನಿಬಂಧದಲ್ಲಿ ಒಟ್ಟು ಮೂರು ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ. ಗ್ರಾಮೀಣ ಬದುಕಿನ ಚಿತ್ರಣ, ಇತಿಹಾಸ, ಪ್ರಕೃತಿಪ್ರೇಮ, ಅಧ್ಯಾತ್ಮಶಕ್ತಿ ಇನ್ನೂ ಮುಂತಾದ ವಿಚಾರಗಳು ಹೇಗೆ ಮೂಡಿಬಂದಿದೆ ಎಂಬುದರ ತೌಲನಿಕ ಅಧ್ಯಯನ ಈ ಅಧ್ಯಯನ ಉದ್ದೇಶವಾಗಿದೆ. ಅನಂತರ ಒಟ್ಟಾರೆಯಾಗಿ ಎಲ್ಲಾ ಅಧ್ಯಾಯಗಳ ಸಾರ-ಸಂಗ್ರಹವನ್ನು ಪ್ರಸ್ತುತಪಡಿಸಲಾಗಿದೆ.

ಕೊನೆಯದಾಗಿ ಪ್ರಸ್ತುತ ಸಂದರ್ಭದಲ್ಲಿ ಈ ಸಂಶೋಧನೆಯ ಉದ್ದೇಶ, ಮಹತ್ವ ಪ್ರಾಮುಖ್ಯತೆಗಳನ್ನು ಕುರಿತಂತೆ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

---

೨. ಮಹಾಮನೆ, ಅಭಿನಂದನಾ ಗ್ರಂಥ, ಸಂಪಾದಕರು, ಸೋಮಶೇಖರ್ ಬಿಸಲ್ವಾಡಿ, ಪು. ೫೦-೫೧

# ಅಧ್ಯಾಯ ಆರು

# ಉಪಸಂಹಾರ

ಈ ನಿಬಂಧದಲ್ಲಿ ಒಟ್ಟು ಆರು ಅಧ್ಯಾಯಗಳನ್ನಾಗಿ ಮಾಡಿಕೊಂಡಿದ್ದೇನೆ. ಮುಖ್ಯವಾಗಿ ಈ ಆರು ಅಧ್ಯಾಯಗಳಲ್ಲಿ ಗ್ರಾಮೀಣ ಜನತೆಯ ಚಿತ್ರಣ ಹೇಗಿದೆ ಎಂಬುದನ್ನು ತಿಳಿಸಲಾಗಿದೆ. ಹಾಗೂ ಜನಪದ ಸಾಹಿತ್ಯ ಹೇಗಿದೆ ಮತ್ತು ಜನರ ಅಧ್ಯಾತ್ಮ ಮತ್ತು ವೈಚಾರಿಕತೆಯನ್ನು ಮುಖ್ಯವಾಗಿ ಗುರುತಿಸುವುದಾಗಿದೆ. ಒಟ್ಟು ಆರು ಅಧ್ಯಾಯಗಳಲ್ಲಿ ಮೂರು ಅಧ್ಯಾಯಗಳು ಪ್ರಮುಖವಾಗಿ ಚಾರಿತ್ರಿಕ ಅಂಶಗಳನ್ನು ಒಳಗೊಂಡಿವೆ. ಹಾಗೂ ಐತಿಹಾಸಿಕ ಅಂಶಗಳು ಕಂಡುಬರುತ್ತವೆ. ಮುಖ್ಯವಾಗಿ ಈ ನಿಬಂಧದಲ್ಲಿ ಒಟ್ಟಾರೆಯಾಗಿ ಲೇಖಕರು ಗ್ರಾಮೀಣ ಭಾಗದವರಾಗಿರುವುದರಿಂದ ಗ್ರಾಮೀಣ ಜನತೆಯ 'ಆಡುಭಾಷೆ' ಈ ನಿಬಂಧದಲ್ಲಿ ಹೆಚ್ಚಾಗಿ ಬಳಸಲಾಗಿದೆ. ಮತ್ತು ಹಳೆಯ ಮೈಸೂರು ಪ್ರಾಂತ್ಯದಲ್ಲಿ ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ವಿಚಾರವಾಗಿ ಪ್ರಸ್ತಾಪಿಸಲಾಗಿದೆ. ಚಿಕ್ಕದೇವರಾಜರ ಪಟ್ಟಾಭಿಷೇಕದಿಂದ ಅವರ ಮರಣದವರೆಗಿನ ರಾಜ ಆಳ್ವಿಕೆ ಹೇಗಿತ್ತು ಎಂಬುದನ್ನು ತಿಳಿಸುವುದು ಕೂಡ ಈ ನಿಬಂಧದ ಉದ್ದೇಶವಾಗಿರುತ್ತದೆ.

ಮೈಸೂರು ಮತ್ತು ಚಾಮರಾಜನಗರ ಪ್ರಾಂತ್ಯದಲ್ಲಿದ್ದುಕೊಂಡು ಹೆಚ್ಚು ಜನಪ್ರಿಯವಾಗಿ ಸಾಹಿತ್ಯ ರಚನೆ ಮಾಡಿದ ಸಾಹಿತಿ. ಮಗು ಅವರು ತಮ್ಮ ಕೃತಿಗಳಿಗಿಂತ ತಾವು ಹೆಚ್ಚಾಗಿ ಗುರುತಿಸಿಕೊಂಡಿದ್ದಾರೆ. ಹಾಗಾಗಿ ಮಗು ಅವರ ಕೃತಿಗಳು 'ಮಹಾಯಾತ್ರಿಕ' ಹೊರತುಪಡಿಸಿದರೆ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಅಪ್ರತಿಮವೀರ ಹಾಗೂ ಇನ್ನಿತರ ಕೃತಿಗಳು ಹೆಚ್ಚು ಜನಪ್ರಿಯವಾಗಿಲ್ಲ. ಇತಿಹಾಸ ಮತ್ತು ಪುರಾಣ ಮತ್ತು ಸಮಾಜಕ್ಕೆ ನಿಷ್ಠರಾಗಿ ವಸ್ತುನಿಷ್ಠವಾಗಿ ಕೃತಿರಚನೆ ಮಾಡಿದ್ದರೂ ಅಜ್ಞಾತವಾಗಿಯೇ ಉಳಿದಿರುವ ಮಗು ಅವರ ಕೃತಿಗಳ ಮಹತ್ವವನ್ನು ಗುರುತಿಸುವುದು ಈ ನಿಬಂಧದದ ಮೂಲ ಉದ್ದೇಶವಾಗಿದೆ.

ಈ ನಿಬಂಧದಲ್ಲಿ ಪ್ರೊ. ಮಲೆಯೂರು ಗುರುಸ್ವಾಮಿ ಅವರ ಮೂರು ಕಾದಂಬರಿಗಳಾದ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ'(೧೯೮೪), ಮಹಾಯಾತ್ರಿಕ(೧೯೮೯) ಹಾಗೂ ಅಪ್ರತಿಮವೀರ(೧೯೯೬) ಕಾದಂಬರಿಗಳನ್ನು ವಿಶ್ಲೇಷಿಸಲಾಗಿದೆ. ಮಲೆಯೂರು ಗುರುಸ್ವಾಮಿ ಅವರ ಒಟ್ಟು ಸಾಹಿತ್ಯವನ್ನು ಅವಲೋಕಿಸಿದಾಗ ಆಧುನಿಕ ಭಾರತ ಗ್ರಾಮೀಣ ಜನತೆಯ ಬದುಕು, ಧಾರ್ಮಿಕ ಮತ್ತು ಸಾಂಸ್ಕೃತಿಕ ಆವರಣವನ್ನು ಇಂದಿನ ಸಾಹಿತ್ಯವಲಯಕ್ಕೆ

ಅಳವಡಿಸುವಲ್ಲಿ ಮಗು ಅವರ ಪ್ರತಿಭೆ ಮಹತ್ತರವಾದದ್ದು, ಹಾಗಾಗಿ ನಾನು ಇವರ ಮೂರು ಕಾದಂಬರಿಗಳನ್ನು ವಿಶ್ಲೇಷಿಸುವುದು ಮೂಲ ಉದ್ದೇಶವಾಗಿದೆ.

ಮಗು ಅವರ ಮೊದಲ ಕಾದಂಬರಿ 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಈ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ಅಲ್ಲಿನ ಗ್ರಾಮೀಣ ಬದುಕಿನ ಚಿತ್ರಣ, ಇತಿಹಾಸ ಎಳೆಗಳು ಇಲ್ಲಿ ಕಂಡುಬರುತ್ತದೆ. ಹಾಗೂ ಈ ಕಾದಂಬರಿಯಲ್ಲಿ ಚಾರಿತ್ರಿಕ ಅಂಶಗಳನ್ನೊಳಗೊಂಡಿರುವುದೊಂದು ವಿಶೇಷವಾಗಿದೆ ಎಂದು ಹೇಳಬಹುದಾಗಿದೆ. 'ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ' ಕಾದಂಬರಿಯಲ್ಲಿ ಪ್ರಮುಖವಾಗಿ ನಾವು ಚಾರಿತ್ರಿಕ ವ್ಯಕ್ತಿಯ ವ್ಯಥೆಯ ಕಥೆಯಿದೆ ಎಂಬುದನ್ನು ಕಾಣಬಹುದಾಗಿದೆ. ಈ ಕಾದಂಬರಿಯಲ್ಲಿ ನಾವು ಗ್ರಾಮೀಣ ಬದುಕಿನ ಚಿತ್ರಣ ಹೇಗಿದೆ ಎಂಬುದನ್ನು ಹೇಳುವುದು ನನ್ನ ಮೂಲ ಉದ್ದೇಶವಾಗಿದೆ. ಆದ್ದರಿಂದ ಈ ಕಾದಂಬರಿಯನ್ನು ಅಧ್ಯಾಯ ಮೂರು 'ಗ್ರಾಮೀಣ ಬದುಕಿನ ಚಿತ್ರಣ' ಎಂಬುದಾಗಿ ಮಾಡಿಕೊಂಡಿರುತ್ತೇನೆ. ಈ ಅಧ್ಯಾಯದ ಶೀರ್ಷಿಕೆ ಸೂಕ್ತವಾದುದು ಎಂಬುದು ನನ್ನ ಅಭಿಪ್ರಾಯವಾಗಿದೆ. ಮತ್ತು ಮೊದಲನೆಯ ಅಧ್ಯಾಯದಲ್ಲಿ ಗ್ರಾಮ್ಯ ಪರಿಸರದ ಚಿತ್ರಗಳಿವೆ. ಸ್ವಾತಂತ್ರ್ಯೋತ್ತರ ಭಾರತದ ಗ್ರಾಮಗಳ ಬದುಕು ಹೇಗಿದೆ ಎಂಬುದನ್ನು ಕಾದಂಬರಿಕಾರರು ವಿಶ್ಲೇಷಿಸಿರುವುದನ್ನು ನೋಡಬಹುದಾಗಿದೆ ಹಾಗೂ ಈ ಕಾದಂಬರಿಯಲ್ಲಿನ ಪಾತ್ರಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಲೇಖಕರು ಕಂಡರಿಸಿದ್ದಾರೆ ಎಂಬುದು ತಿಳಿಯುತ್ತದೆ.

ಮಗು ಅವರ ಎರಡನೇ ಕಾದಂಬರಿ 'ಮಹಾಯಾತ್ರಿಕ' ಇದನ್ನು ೧೯೮೯ರಲ್ಲಿ ರಚನೆ ಮಾಡಿದ್ದಾರೆ. ಈ ಕಾದಂಬರಿಯಲ್ಲಿ ಆಧ್ಯಾತ್ಮಿಕ ಮತ್ತು ವೈಚಾರಿಕತೆ ಹೇಗೆ ಕಂಡುಬರುತ್ತದೆ ಎಂಬುದನ್ನು ಗುರುತಿಸುವುದು ನನ್ನ ಮೂಲ ಉದ್ದೇಶವಾಗಿದೆ. ಹಳೇ ಮೈಸೂರು ಭಾಗದಲ್ಲಿ ಆಧ್ಯಾತ್ಮಿಕ ಸಿದ್ಧಪುರುಷನಾಗಿ ಜನಮಾನಸದಲ್ಲಿ ಉಳಿದಿರುವ ವ್ಯಕ್ತಿಯೇ ಮಲೆಯ ಮಹದೇಶ್ವರ ಈ ಮಲೆಯ ಮಹದೇಶ್ವರರನ್ನು ಕುರಿತು ಜನಪದರಲ್ಲಿ ಅಗಾಧ ಸಾಹಿತ್ಯ ನಿರ್ಮಾಣವಾಗಿರುವುದು ಆ ವ್ಯಕ್ತಿಯ ಮಹಿಮೆಗೆ ಮತ್ತೊಂದು ಸಾಕ್ಷಿರೂಪ. ಇಂಥ ವ್ಯಕ್ತಿಯ ಶಕ್ತಿಯನ್ನು ಕುರಿತು ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ 'ಮಹಾಯಾತ್ರಿಕ' ಕಾದಂಬರಿ ರೂಪುಗೊಂಡಿದೆ ಎಂಬುದನ್ನು ನೋಡಬಹುದಾಗಿದೆ. ಹಾಗೆಯೇ ಮಲೆಯ ಮಹದೇಶ್ವರರ ಒಟ್ಟು ಬದುಕಿಗೊಂದು ಈ ಕೃತಿ ಕನ್ನಡಿ ಹಿಡಿದಿದೆ. ಈ ಕಾದಂಬರಿಯನ್ನು ನನ್ನ

ನಿಬಂಧದಲ್ಲಿ ಐದನೆಯ ಅಧ್ಯಾಯ ಎಂದು ಮಾಡಿಕೊಂಡಿದ್ದೇನೆ. ಒಟ್ಟಾರೆಯಾಗಿ ಈ ಕಾದಂಬರಿಯಲ್ಲಿ ಮಹದೇಶ್ವರರ ಆಧ್ಯಾತ್ಮಶಕ್ತಿ, ಪ್ರಕೃತಿಪ್ರೇಮ, ಅನೇಕ ಶಿಷ್ಯರ ಸಮೂಹ, ಒಟ್ಟು ಸಂದೇಶಗಳನ್ನು ಈ ಕೃತಿಯ ಉದ್ದಕ್ಕೂ ಲೇಖಕರು ಹೇಗೆ ವ್ಯಕ್ತಪಡಿಸಿದ್ದಾರೆ ಎಂಬುದನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಮಗು ಅವರ ಮೂರನೆಯ ಕಾದಂಬರಿಯೇ ಅಪ್ರತಿಮವೀರ ಈ ಕಾದಂಬರಿಯನ್ನು ೧೯೯೬ರಲ್ಲಿ ರಚನೆಮಾಡಿದ್ದಾರೆ. ಈ ಕಾದಂಬರಿಯನ್ನು ನನ್ನ ನಿಬಂಧದಲ್ಲಿ ಅಧ್ಯಾಯ – ೪ ಎಂಬುದಾಗಿ ಮಾಡಿಕೊಂಡಿದ್ದೇನೆ. ಈ ಕಾದಂಬರಿಯಲ್ಲಿ ನಾನು ಮುಖ್ಯವಾಗಿ ಐತಿಹಾಸಿಕ ಅಂಶಗಳು ಹಾಗೂ ಚಾರಿತ್ರಿಕ ಅಂಶಗಳನ್ನು ಗುರ್ತಿಸಲು ಪ್ರಯತ್ನಮಾಡಿದ್ದೇನೆ. 'ಅಪ್ರತಿಮವೀರ ಚರಿತೆ' ಕಾದಂಬರಿಯಲ್ಲಿ ಪ್ರಮುಖವಾಗಿ ರಆಜಮಹಾರಾಜರಿಗೆ ಸಂಬಂಧಿಸಿದ ಅಂಶಗಳನ್ನು ಕಲೆಹಾಕಿಕೆ. ಮೈಸೂರು ಸಂಸ್ಥಾನದ ರಾಜಪ್ರಭುತ್ವ, ಪ್ರಜಾಪ್ರಭುತ್ವಗಳೆರಡರ ತೌಲನಿಕ ಅಧ್ಯಯನವನ್ನು ಈ ಕಾದಂಬರಿಯಲ್ಲಿ ಗುರ್ತಿಸಿದ್ದೇನೆ. ರಾಜರ ಕಥೆಯೆಂದರೆ ಸಾಮಾನ್ಯವಾಗಿ ಕಲ್ಪನೆ, ಆದರೆ ಕಲ್ಪನೆಗಿಂತ ಹೆಚ್ಚಾಗಿ ವಾಸ್ತವ ಮತ್ತು ಇತಿಹಾಸಗಳೆರಡಕ್ಕೂ ಸಮೀಪವಾಗಿ ಈ ಕಾದಂಬರಿ ರಚಿತವಾಗಿರುವುದನ್ನು ನೋಡಬಹುದಾಗಿದೆ.

ಈ ಕಾದಂಬರಿ ಮೈಸೂರು ರಾಜರ ಚರಿತ್ರೆಯನ್ನು ಕಟ್ಟಬೇಕೆಂದರೆ ಇರಬೇಕಾದ ಎಲ್ಲ ಐತಿಹಾಸಿಕ ಗುಣಗಳನ್ನು ಮೈಗೂಡಿಸಿಕೊಂಡಿವೆ. ಚಾರಿತ್ರಿಕ ಅಂಶಗಳ ಜೊತೆಗೆ ಹೇಗೆ ಐತಿಹಾಸಿಕ ಅಂಶಗಳು ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ ಎಂಬುದರ ಅಧ್ಯಯನ ಈ ಅಧ್ಯಾಯದ ವಸ್ತುವಾಗಿದೆ.

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583276

2014–15ನೆಯ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

# ನೇಮಿಚಂದ್ರ ಅವರ ಪ್ರವಾಸ–ಕಥನಗಳು

ನಿಬಂಧಕಾರರು

ವೈ.ಪಿ.ರಮ್ಯ

ನೋಂದಣಿ ಸಂಖ್ಯೆ – KVTM/K 140901030094

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಗಣೇಶ

ಕನ್ನಡ ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ

ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

2014–15

# ಪರಿವಿಡಿ

## ನೇಮಿಚಂದ್ರ ಅವರ ಪ್ರವಾಸ-ಕಥನಗಳು


| ಅಧ್ಯಾಯಗಳು | | ಪಠ್ಯ ಶೀರ್ಷಿಕೆ | ಪುಟ ಸಂಖ್ಯೆ |
|---|---|---|---|
| ಅಧ್ಯಾಯ – ೧ | : | ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ | ೧–೯ |
| ಅಧ್ಯಾಯ – ೨ | : | ಪ್ರವಾಸ ಮತ್ತು ಪ್ರವಾಸ ಸಾಹಿತ್ಯ, ಅರ್ಥ ಮತ್ತು ಪರಿಕಲ್ಪನೆ, ಪ್ರವಾಸ ಸಾಹಿತ್ಯದ ಸ್ವರೂಪ – ಲಕ್ಷಣಗಳು, ಪ್ರವಾಸ ಸಾಹಿತ್ಯದ ವಿಂಗಡಣೆ, ಪ್ರವಾಸ ಸಾಹಿತ್ಯದ ಮಹತ್ವ, ಪ್ರವಾಸ ಸಾಹಿತ್ಯ ಬೆಳೆದು ಬಂದ ಬಗೆ | ೧೦–೨೨ |
| ಅಧ್ಯಾಯ – ೩ | : | ನೇಮಿಚಂದ್ರ ಅವರ ಬದುಕು-ಬರಹ : ಹಿನ್ನೆಲೆ ಪರಿಚಯ | ೨೩–೫೦ |
| ಅಧ್ಯಾಯ – ೪ | : | ನೇಮಿಚಂದ್ರ ಅವರ ಪ್ರವಾಸ ಸಾಹಿತ್ಯದ ಅಧ್ಯಯನ<br>೧. ಒಂದು ಕನಸಿನ ಪಯಣ<br>೨. ಪೆರುವಿನ ಪವಿತ್ರ ಕಣಿವೆಯಲ್ಲಿ | ೫೧–೭೯ |
| ಅಧ್ಯಾಯ – ೫ | : | ನೇಮಿಚಂದ್ರ ಅವರ ಪ್ರವಾಸ ವಿನ್ಯಾಸದ ಕಥನಗಳ ಅಧ್ಯಯನ<br>೧. ಯಾದ್‌ವಶೇಮ್ (ಕಾದಂಬರಿ)<br>೨. ಕೆಲವು ಪ್ರಮುಖ ಕತೆಗಳು | ೮೦–೧೧೮ |
| ಅಧ್ಯಾಯ – ೬ | : | ಉಪಸಂಹಾರ | ೧೧೯–೧೨೪ |
| ಅನುಬಂಧಗಳು | : | ೧. ಆಕರ ಗ್ರಂಥಗಳು<br>೨. ಪರಾಮರ್ಶನ ಗ್ರಂಥಗಳು<br>೩. ಲೇಖನಗಳು/ಜಾಲತಾಣಗಳು<br>೪. ಸಂಶೋಧನ ಪ್ರಬಂಧಗಳು<br>೫. ಪತ್ರಿಕೆಗಳು/ಸಂಶೋಧನೆಗೆ ನೆರವಾದವರು<br>೬. ನೇಮಿಚಂದ್ರರ ಬದುಕಿನ ಹೆಜ್ಜೆಗಳು<br>೭. ಛಾಯಾಚಿತ್ರಗಳು<br>೮. ಲೇಖಕರ ಸಂದರ್ಶನ | ೧೨೫–೧೪೯ |


* * * * *

## ಅಧ್ಯಾಯ – ೧

# ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ

ಮನುಷ್ಯನ ಮನಸ್ಸು ಅಂದಂದಿನ ವಿಷಯಗಳಲ್ಲಿ ತೃಪ್ತವಾಗದೆ ಹಿಂದೆ ಹೇಗಿತ್ತು, ಮುಂದೆ ಹೇಗಿರಬಹುದು ಎಂದು ತಿಳಿಯಲು ಆಶಿಸುತ್ತದೆ. ಮುಂದೆ ಹೇಗಿರಬಹುದೆಂಬುದು ಕೇವಲ ಊಹೆಯಲ್ಲಿಯೇ ಕೊನೆಗೊಳ್ಳುತ್ತದೆ. ಅದಕ್ಕೆ ಪ್ರಮಾಣದ ಅಥವಾ ಸಾಕ್ಷ್ಯದ ಆಧಾರವಿರುವುದಿಲ್ಲ. ಆದರೆ ಹಿಂದೆ ಹೇಗಿತ್ತೆಂಬುದನ್ನು ಬಹುಮಟ್ಟಿಗೆ ವಾಸ್ತವವಾಗಿ ಹೇಳಬಹುದು ; ಅದಕ್ಕೆ ಪ್ರಮಾಣದ ಅಥವಾ ಸಾಕ್ಷ್ಯದ ಆಧಾರವಿರುತ್ತದೆ.

ಅಂತಹ ಪ್ರಮಾಣಗಳನ್ನು, ಸಾಕ್ಷ್ಯಗಳನ್ನು ಒದಗಿಸಿಕೊಡುವುದರಲ್ಲಿ ಪ್ರವಾಸ ಸಾಹಿತ್ಯವೂ ಒಂದು. ಇತಿಹಾಸವನ್ನು ಬರೆಯುವುದಕ್ಕೆ ಪ್ರವಾಸಿಗಳ ಕಥನ ಮತ್ತು ಪ್ರಾಚ್ಯ ಸಂಶೋಧನೆ ಇವೆರಡು ಮುಖ್ಯ ಸಾಧನಗಳು. ಸರಿಯಾದ ಇತಿಹಾಸವೇ ಇಲ್ಲದ ಈ ಪ್ರಾಚೀನ ಭಾರತದಲ್ಲಿ ಹೊಸ ಇತಿಹಾಸವನ್ನು ಬರೆಯಲು ನಾವು ಪ್ರವಾಸ ಸಾಹಿತ್ಯಕ್ಕೆ ಹೆಚ್ಚು ಕೈಹಾಕಬೇಕಾಗಿದೆ. ಪ್ರವಾಸಿಗಳ ಸಾಹಿತ್ಯ ನಮಗಿಲ್ಲದೆ ಹೋಗಿದ್ದರೆ ನಮಗೆ ತಿಳಿದಿರುವ ಬಹುಮಟ್ಟಿನ ಚರಿತ್ರೆ ನಮಗೆ ತಿಳಿಯದೇ ಹೋಗುತ್ತಿತ್ತು.

ಡಾಕ್ಟರ್ ಅರ್ನಾಲ್ಡರು ಹೇಳುವಂತೆ "ಇತಿಹಾಸದ ಮುಖ್ಯ ಉದ್ದೇಶ, ಸುಸಂಸ್ಕೃತ ಮಾನವನ ಜೀವನವನ್ನು ಅಂದರೆ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಸಂಸ್ಥೆಗಳ ಬದಲಾವಣೆಗಳನ್ನು ತೋರಿಸುವುದೇ ಆಗಿದೆ. ಅಂಥ ಜೀವನವನ್ನು ತೋರಿಸುವುದಕ್ಕೆ ಮುಖ್ಯ ಸಾಮಗ್ರಿ ಪ್ರವಾಸಿಗಳ ಸಾಹಿತ್ಯ".[೧] ಹಿಂದಿನ ಕಾಲದ ನಮ್ಮ ರಾಜಕೀಯ ನಡೆನುಡಿಗಳ, ಮತಧರ್ಮಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕಾದರೆ ಪ್ರವಾಸಿಗಳ ಕಥನ ಅತ್ಯಂತ ಉಪಯೋಗವಾಗಿದೆ.

ಪ್ರವಾಸ ಸಾಹಿತ್ಯವು ಮಾನವನ ಪಂಚೇಂದ್ರಿಯಗಳಿಗೆ ಕ್ರಿಯಾಶೀಲತೆಯನ್ನು ಒದಗಿಸುವ, ಸರ್ವ ಸಮಸ್ಯೆಗಳಿಗೂ ಪರಿಹಾರ ಸೂಚಿಸುವ ಒಂದು ಸಂಜೀವಿನಿ. ನಮ್ಮ ಸುತ್ತಮುತ್ತಲಿನ ಪರಿಸರ, ಜನಸಮುದಾಯ, ಸಂಪ್ರದಾಯ, ಸಂಸ್ಕೃತಿ ಮತ್ತು ವಿಶೇಷ ಆಕರ್ಷಣೆಗಳ ಬಗ್ಗೆ ತಿಳಿಯುವುದು ಇಂದಿನ ಕುತೂಹಲದ ವಿಷಯವಾಗಿದೆ. ಮಾನವ ಯಾವಾಗಲೂ ಹೊಸತನಕ್ಕೆ, ಹೊಸ ವಿಷಯ ತಿಳಿಯುವುದಕ್ಕೆ ಹಾತೊರೆಯುತ್ತಾನೆ. ಹೊಸ ಸಂಶೋಧನೆಗಳ ಮೂಲಕ ಹೊಸ ವಿಷಯಗಳನ್ನು ಅರಿತು ಜ್ಞಾನಶಾಖೆಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತಾನೆ.

ಉದ್ದೇಶವಿಲ್ಲದೆ ಪ್ರವಾಸ ಇರಲಾರದು. ಅರಿಯುವ, ಅರಿವಿನಿಂದ ಕುತೂಹಲವನ್ನು ತಣಿಸಿಕೊಳ್ಳುವ ನೆಲೆಯಿಂದ ನೋಡಬೇಕೆಂಬ ಮಹದಾಸೆಯಿಂದ, ಅನುಭವ ದೆಸೆಯಿಂದ,

ಹೀಗೆ ವಿಭಿನ್ನ ನೆಲೆಗಳಿಂದ ಪ್ರವಾಸ ಮಾಡಬಹುದಾದರೂ, ಪ್ರವಾಸ ಮಾಡಿದವರೆಲ್ಲ ತಮ್ಮ ಅನುಭವಗಳನ್ನು ಬರೆಯಬೇಕೆಂದಿಲ್ಲ ಮತ್ತು ಉತ್ಕಟತೆ ಮೂಡಿದಾಗ ಬರೆಯದಿರಲೂ ಆಗುವುದಿಲ್ಲ. ಪ್ರವಾಸಿಗನಿಗೆ ತನ್ನ ಬದುಕಿನಲ್ಲಿ ದಿನನಿತ್ಯದ ನೋಟಕ್ಕಿಂತ ಭಿನ್ನವಾದುದ್ದನ್ನು ಕಂಡಾಗ ಇನ್ನೊಬ್ಬರೊಂದಿಗೆ ಹಂಚಿಕೊಳ್ಳಬೇಕೆಂಬ ಮನೋತ್ಕಟತೆ ಮೂಡುವುದು ಸಹಜ. ಅದರ ಪ್ರತಿಫಲವೇ ಪ್ರವಾಸ ಕಥನವೆಂದು ಹೇಳಬಹುದು.

ಈ ಪ್ರವಾಸ ಸಾಹಿತ್ಯ ಇತಿಹಾಸದ ಎಲ್ಲೆಯನ್ನು ಮೀರಿ ನಿಂತ ಸಾಮರ್ಥ್ಯವುಳ್ಳದ್ದಾಗಿದೆ. ಇಲ್ಲಿ ಖಗೋಳ, ಭೂಗೋಳ, ಸಸ್ಯ, ಪ್ರಾಣಿ, ಖನಿಜ, ತಂತ್ರಜ್ಞಾನ, ವಿಜ್ಞಾನ, ನಂಬಿಕೆ, ಸಂಪ್ರದಾಯ, ಆಡಳಿತ, ಸೈನ್ಯಪದ್ಧತಿ, ವಾಣಿಜ್ಯ, ಭಾಷೆ, ಕಾಮ, ವೈಭವ, ಹಸಿವು – ಹೀಗೆ ಪ್ರವಾಸ ಸಾಹಿತ್ಯವು ಸರ್ವತೋಮುಖ ವಿಷಯಗಳ ಕಣಜಗಳಾಗಿವೆ, ಗುಡಾಣಗಳಾಗಿವೆ.

ಪ್ರವಾಸ ಸಾಹಿತ್ಯವನ್ನು ಘಟನಾ ಸ್ವರೂಪ, ವಿಡಂಬನಾ ಸ್ವರೂಪ, ಆತ್ಮಕಥನ ಸ್ವರೂಪ, ಕಾದಂಬರಿ ಸ್ವರೂಪವಾಗಿ ಬರೆದರೂ ಶೈಲಿಯಲ್ಲಿ ಭಿನ್ನತೆಯನ್ನು ಕಾಯ್ದುಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ ಅದರ ಆರಂಭಿಕ ಶೈಲಿಯಲ್ಲಿ ವರದಿ ಮಾದರಿ, ದಿನಚರಿ ಮಾದರಿ ಮುಂತಾಗಿರುವುದು ಕಂಡುಬರುತ್ತದೆ. ಆಯಾ ಕಾಲದ ಬದುಕಿನ ಆಲೋಚನಾ ಕ್ರಮ ತಿಳಿವಳಿಕೆಗಳು ಬರಹದ ಶೈಲಿಯನ್ನು ನಿಯಂತ್ರಿಸುತ್ತವೆ ಎನ್ನುವುದಕ್ಕೆ ಈ ಕೃತಿಗಳು ನಿದರ್ಶನಗಳಾಗಿವೆ. ಈ ಕೃತಿಗಳು ಪ್ರಾದೇಶಿಕತೆಯ ಕುರಿತು ಅಧ್ಯಯನ ಮಾಡುವವರಿಗೆ ಮತ್ತು ಯಾವುದೇ ವಿಷಯವನ್ನು ಕುರಿತು ಸಂಶೋಧನೆ ನಡೆಸುವವರಿಗೆ ಮಹತ್ವದ ಆಕರ ಗ್ರಂಥಗಳಾಗಿ ಬಳಕೆಯಾಗುತ್ತದೆ.

ಪ್ರವಾಸ ಸಾಹಿತ್ಯದಿಂದ ಬೇರೆ ಬೇರೆ ದೇಶಗಳ ಸಂಸ್ಕೃತಿ ಪರಿಚಯ ಮಾಡಿಕೊಳ್ಳುವಾಗ ನಮಗೆ ಅಲ್ಲಿಯ ಇತಿಹಾಸ–ಭೂಗೋಳದ ಹಿನ್ನೆಲೆಗಳು ಅತಿ ಮಹತ್ವದ್ದಾಗಿ ಕಾಣುತ್ತವೆ. ಇವುಗಳನ್ನು ತಿಳಿದುಕೊಳ್ಳುವಾಗ ಅಲ್ಲಿಯ ಜನರ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮುಂತಾದವುಗಳ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಕಾಣುತ್ತೇವೆ. ಅದರ ಅಭ್ಯಾಸದಿಂದ ಇವುಗಳೊಳಗಿನ ಮಾನವ ಸ್ವಭಾವಗಳು, ಚಲನವಲನಗಳು, ಅವರ ಇನ್ನಿತರ ಸಂಸ್ಕೃತಿ ವಿವರಗಳನ್ನು ತಿಳಿದುಕೊಳ್ಳುತ್ತೇವೆ.

ಉದಾಹರಣೆಗೆ: ಭೌತಿಕ–ಅಭೌತಿಕ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ದೇಶದ ಸ್ಥಿತಿಗತಿಗಳು, ಗ್ರಾಮಪಟ್ಟಣಗಳು, ಅಲ್ಪಸಂಖ್ಯಾತರು, ಆದಿವಾಸಿಗಳು, ಯುದ್ಧದಾಳಿಗಳು, ಮಹಾನ್ ವ್ಯಕ್ತಿಗಳು, ಚುನಾವಣೆ, ಜನಗಣತಿ, ನಿರಾಶ್ರಿತರು, ವಲಸೆಗಾರರು, ರಾಷ್ಟ್ರದ ಘನತೆ ಗಾಂಭೀರ್ಯ, ಸಾಹಿತ್ಯ, ಸಾಹಿತಿಗಳು, ಭಾಷೆ, ಸಂಗೀತ, ನೃತ್ಯ, ಚಿತ್ರ, ಕರಕುಶಲ ಕಲೆಗಳು, ಚಲನಚಿತ್ರ, ರಂಗಮಂದಿರ, ಕಲಾಕಾರರು, ವಾಸ್ತುಶಿಲ್ಪ, ವಸ್ತುಸಂಗ್ರಹಾಲಯ ಉದ್ದಿಮೆಗಳು, ಕಾರ್ಖಾನೆ,

ಹೋಟೆಲುಗಳು, ಮಾರುಕಟ್ಟೆ ಯೋಜನೆಗಳು, ನ್ಯಾಯಾಂಗ, ಕಾನೂನು, ವಿಜ್ಞಾನ ತಂತ್ರಜ್ಞಾನ ಮುಂತಾದವುಗಳನ್ನು ಗುರುತಿಸಿಕೊಳ್ಳುತ್ತೇವೆ.

ಪ್ರವಾಸ ಸಾಹಿತ್ಯದ ಸಂಸ್ಕೃತಿ ಅಧ್ಯಯನದಿಂದ ವೈವಿಧ್ಯಮಯ ಬದುಕಿನ ಸಂಸ್ಕೃತಿಗಳನ್ನು ಆಸಕ್ತಿಯಿಂದ ಓದಲು, ಕೇಳಲು, ಪರಿಚಯಿಸಿಕೊಳ್ಳಲು, ಅಲ್ಲಲ್ಲಿ ನಮ್ಮ ಸಂಸ್ಕೃತಿಗಳೊಂದಿಗೆ ಸಮಕಾಲೀನದಲ್ಲಿ ಚರ್ಚಿಸಿಕೊಳ್ಳಲು ಸಹಾಯವಾಗುತ್ತದೆ. ಈ ಎಲ್ಲಾ ಅನುಭವಗಳಿಂದ ಪ್ರವಾಸ ಸಾಹಿತಿಗಳ ಮತ್ತು ಓದುಗರ ಭಾವ ಪ್ರಪಂಚ ಶ್ರೀಮಂತವಾಗುತ್ತದೆ.

ಪ್ರತಿಯೊಬ್ಬ ಮನುಷ್ಯನಲ್ಲೂ ಸಂಕುಚಿತ ಮನೋಭಾವ ಮನೆ ಮಾಡಿದ್ದು, ಈ ಪ್ರವಾಸ ಕಥನಗಳು ಆ ಸಂಕುಚಿತತೆಯನ್ನು ಕಳೆಯುವ ಹಾಗೂ ಕತ್ತಲನ್ನು ಹೋಗಲಾಡಿಸುವ 'ವಿಶ್ವಜ್ಞಾನ ದೀವಿಗೆ'ಗಳಾಗಿ ಕಾರ್ಯನಿರ್ವಹಿಸುತ್ತವೆ. ಹೀಗೆ ಮನುಷ್ಯರ ಬದುಕಿನಲ್ಲಿ ಪ್ರಮುಖ ಪಾತ್ರವಹಿಸಿರುವ ಪ್ರವಾಸ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಷಯವನ್ನು ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಈ ಮುಖೇನ ದೇಶ-ವಿದೇಶಗಳ ಭಿನ್ನ ವಿಭಿನ್ನ ಸಂಸ್ಕೃತಿಯನ್ನು ತಿಳಿಯಲು ಮತ್ತು ತಿಳಿಸಲು ಪ್ರಯತ್ನಿಸಲಾಗಿದೆ.

ಅದರಂತೆ **'ನೇಮಿಚಂದ್ರ ಅವರ ಪ್ರವಾಸ-ಕಥನಗಳು'** ಎಂಬುದು ಇಲ್ಲಿನ ಸಂಶೋಧನ ಪ್ರಬಂಧದ ವಿಷಯವಾಗಿದೆ. ಈ ಪ್ರಬಂಧದ ಇತಿಮಿತಿಯ ಅರಿವಿನಲ್ಲಿ ವಿಶ್ವ ಸಂಸ್ಕೃತಿಗಳ, ಬದುಕಿನ ವಿಧಾನಗಳ ಅಧ್ಯಯನ ಹಿನ್ನೆಲೆಯಲ್ಲಿ ನೇಮಿಚಂದ್ರ ಅವರ ಪ್ರವಾಸ-ಕಥನಗಳನ್ನು ಆಯ್ದುಕೊಳ್ಳಲಾಗಿದೆ. ಇವರ ಕೃತಿಗಳು ಮಹಿಳಾ ಪ್ರವಾಸ ಕಥನಗಳಲ್ಲಿ ಅತ್ಯಮೂಲ್ಯ ಕೃತಿಗಳಾಗಿವೆ.

**ಮಹಿಳಾ ಪ್ರವಾಸಕಥನದ ಆಯ್ಕೆಯ ಹಿನ್ನೆಲೆ**

ಪುರುಷರು ಪ್ರವಾಸ ಮಾಡಿ ಪ್ರವಾಸ ಕೃತಿಗಳನ್ನು ರಚಿಸುತ್ತಾರೆ ಎಂಬುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ಆದರೆ ಸ್ತ್ರೀಯರು ದೇಶ, ವಿದೇಶಗಳಿಗೆ ಪ್ರವಾಸ ಕೈಗೊಂಡು ಪ್ರವಾಸ ಸಾಹಿತ್ಯಗಳನ್ನು ರಚಿಸಿದ್ದಾರೆ ಎಂಬುದು ನಿಜಕ್ಕೂ ಆಶ್ಚರ್ಯಕರ ಸಂಗತಿಯೆನಿಸುತ್ತದೆ. ಏಕೆಂದರೆ, "ಗಂಡಸು ಕೂತು ಕೆಟ್ಟ ಹೆಂಗಸು ಸುತ್ತಿ ಕೆಟ್ಟಳು"[೨] ಎಂಬಂತಹ ಗಾದೆಗಳನ್ನು ರೂಪಿಸಿಕೊಂಡ ನಮ್ಮ ಜನರು ಹೆಣ್ಣು ಮನೆಯಿಂದ ಹೊರಗೆ ಹೋಗಬಾರದು, ವಿದ್ಯೆ ಕಲಿಯಬಾರದು, ಯಾವುದೇ ವಿಷಯದಲ್ಲಿ ಗಂಡಸಿಗೆ ಸಮಾನಳಾಗಿ ನಿಲ್ಲಬಾರದು ಎಂಬೆಲ್ಲ ಕಟ್ಟುಪಾಡುಗಳನ್ನು ಬೇಲಿಯಂತೆ ಹೆಣ್ಣಿನ ಸುತ್ತ ಹಾಕಿ, ಈ ಬೇಲಿಯನ್ನು ದಾಟಿದವರಿಗೆ ಮಾತುಗಳೆಂಬ ಮುಳ್ಳುಗಳಿಂದ, ತೀಕ್ಷ್ಣ ನೋಟದಿಂದ ಚುಚ್ಚುತ್ತಿದ್ದರು. ಈ ಕ್ರಿಯೆ ಹಿಂದಿನಿಂದಲೂ ನಡೆದು ಬಂದಿದ್ದು, ಆಧುನಿಕ ಜಗತ್ತಿನಲ್ಲೂ ಚಾಲ್ತಿಯಲ್ಲಿರುವುದು ಗಮನೀಯ. ಇಂತಹ ಸಂದರ್ಭದಲ್ಲೂ ಈ ಎಲ್ಲ ಕಟ್ಟುಪಾಡುಗಳನ್ನು, ನೀತಿ ನಿಯಮಗಳನ್ನು ಮೀರಿ ದೇಶ, ವಿದೇಶಗಳಿಗೆ ಪ್ರವಾಸ ಕೈಗೊಂಡ ನಮ್ಮ ಅನೇಕ

ಮಹಿಳೆಯರು ದೊಡ್ಡ ಸಾಧನೆಯನ್ನು ಆ ಮೂಲಕ ಭವ್ಯದರ್ಶನವನ್ನೂ ಕಟ್ಟಿಕೊಟ್ಟರು ಎಂದರೆ ತಪ್ಪಾಗಲಾರದು.

ಅಂದರೆ, ಒಬ್ಬ ಪುರುಷ ವಿದೇಶಕ್ಕೆ ಹೋಗಿದ್ದ ಎಂದರೆ ಅದು ಅಷ್ಟು ದೊಡ್ಡ ವಿಷಯವಾಗಿ ಕಾಣಿಸುವುದಿಲ್ಲ. ಆದರೆ ಒಬ್ಬ ಮಹಿಳೆ ವಿದೇಶಕ್ಕೆ ಪ್ರವಾಸ ಕೈಗೊಂಡು, ಅಲ್ಲಿನ ಸಂಸ್ಕೃತಿಯನ್ನು ಅಧ್ಯಯನ ಮಾಡಿ ಕೃತಿಯೊಂದನ್ನು ರಚಿಸಿದಳು ಎಂದರೆ ಅದು ದೊಡ್ಡ ವಿಷಯವಾಗಿಯೇ ಕಾಣಿಸುತ್ತದೆ. ಆದ್ದರಿಂದ ಇಲ್ಲಿ 'ಮಹಿಳಾ ಪ್ರವಾಸ ಕಥನ'ವನ್ನು ನನ್ನ ಸಂಶೋಧನ ವಿಷಯವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇಡೀ ಮಹಿಳಾ ಪ್ರವಾಸ ಕಥನವನ್ನು ಅಧ್ಯಯನ ಮಾಡಿದರೆ, ಅದು ಸಂಶೋಧನ ವ್ಯಾಪ್ತಿಯನ್ನು ಮೀರುವುದರಿಂದ, ಕನ್ನಡದ ವಿಶೇಷ ರಚನೆಗಳಾಗಿರುವ 'ನೇಮಿಚಂದ್ರ ಅವರ ಪ್ರವಾಸ-ಕಥನಗಳು' ಎಂಬ ಶೀರ್ಷಿಕೆಯೊಂದಿಗೆ ಮಹಿಳಾ ಪ್ರವಾಸ ಸಾಹಿತ್ಯವನ್ನು ಇವರ ಕೃತಿಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ನೇಮಿಚಂದ್ರ ಪ್ರಬಂಧದ ಶೀರ್ಷಿಕೆಗೆ ಸಂಬಂಧಿಸಿದಂತೆ ಇಲ್ಲೇ ಹೇಳಿಬಿಡಬಹುದಾದ ವಿಚಾರವೊಂದಿದೆ. ಅದೇನೆಂದರೆ, ನೇಮಿಚಂದ್ರ ಅವರು ಪ್ರವಾಸ ಬರಹಗಳನ್ನು ಹಾಗೂ ಪ್ರವಾಸ ವಿನ್ಯಾಸದ ಕಥನಗಳನ್ನು ಅತ್ಯಪೂರ್ವವಾಗಿ ಬರೆದಿದ್ದಾರೆ. ಅವರ ಪ್ರವಾಸ ಬರಹಗಳಲ್ಲಿ ಕಥನಗುಣವೂ, ಕಥನ ಸಾಹಿತ್ಯದಲ್ಲಿ ಪ್ರವಾಸಿ ಅನುಭವವು ಮೇಳೈಸಿರುವಂತೆ ಮೂಡಿಬಂದಿವೆ. ಅವೆರಡನ್ನೂ ವಿಶ್ಲೇಷಿಸುವ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧಕ್ಕೆ **'ಪ್ರವಾಸ-ಕಥನ'** ಎಂಬ ಶೀರ್ಷಿಕೆಯನ್ನು ಪ್ರಜ್ಞಾಪೂರ್ವಕವಾಗಿ ಇಡಲಾಗಿದೆ.

**"ನೇಮಿಚಂದ್ರ ಅವರ ಪ್ರವಾಸ-ಕಥನಗಳು"** ಎಂಬ ಶೀರ್ಷಿಕೆಯ ಮೂಲಕ ಜಗತ್ತಿನ ಜನಜೀವನ ಮತ್ತು ಸಂಸ್ಕೃತಿಯ ವಿವಿಧ ಮುಖಗಳನ್ನು ನೋಡಲು ಪ್ರಯತ್ನಿಸಿದೆ. ಅಧ್ಯಯನದ ಅನುಕೂಲಕ್ಕೆಂದು ಇಲ್ಲಿ ಆರು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ.

### ಅಧ್ಯಾಯ ಒಂದು: ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ

ಮೊದಲನೆಯ ಅಧ್ಯಾಯ 'ಅಧ್ಯಯನದ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ'ವನ್ನು ಕುರಿತು ಹೇಳಲಾಗಿದೆ. ಇದರಲ್ಲಿ ಪ್ರವಾಸ ಸಾಹಿತ್ಯದ ಸ್ವರೂಪ, ಅದು ಒಳಗೊಳ್ಳುವ ಬಗ್ಗೆ, ಅದರ ಗುರಿ-ಉದ್ದೇಶಗಳನ್ನು ತಿಳಿಸುವ ಪ್ರಯತ್ನವಿದೆ. ಮಾನವನ ಜೀವನ ವಿಧಾನ, ಸಾಧನೆ-ಸಿದ್ಧಿಗಳು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ, ದೇಶದಿಂದ ದೇಶಕ್ಕೆ ನಾನಾ ಕಾರಣಗಳಿಂದಾಗಿ ವ್ಯತ್ಯಾಸವಾಗುವುದು ಸಹಜ. ನಿತ್ಯ ವಿಕಾಸಶೀಲವಾದ ಜ್ಞಾನ ಜಗತ್ತಿನಷ್ಟೇ ವಿಸ್ತಾರವಾದದ್ದು, ವೈವಿಧ್ಯಮಯವಾದದ್ದು. ಕೂಪಮಂಡೂಕದಂತಿರುವ ಮಾನವನ ಬದುಕು ಇಂದಿನ ಜಗತ್ತಿನಲ್ಲಿ ನಿಸ್ತೇಜವಾಗುತ್ತದೆ; ಸೊನ್ನೆಯಾಗುತ್ತದೆ. ಮಾನವನ ದೇಹಕ್ಕೆ ಇಂದ್ರಿಯಗಳೇ ಕಿಟಕಿಗಳು. ಅವನ್ನವನು ಯಾವಾಗಲೂ ತೆರೆದಿರಬೇಕು.

ಪ್ರವಾಸ ಹಾಗೂ ಗ್ರಂಥಗಳ ಅಧ್ಯಯನ – ಇವು ಜ್ಞಾನ ಸಂಪಾದನೆಯ ಮಾರ್ಗಗಳು. ಅಧ್ಯಯನಕ್ಕಿಂತಲೂ ಪ್ರವಾಸವು ಅಧಿಕವಾದುದು. ಮನರಂಜನೆ ಅಥವಾ ನಿರ್ದಿಷ್ಟ ಕಾರ್ಯ ಸಾಧನೆಯಷ್ಟೇ ಪ್ರವಾಸದ ಗುರಿಯಲ್ಲ. ತಾನು ನೋಡಿದ್ದನ್ನು, ಅನುಭವಿಸಿದ್ದನ್ನು ತನ್ನ ನೆರೆಹೊರೆಯವರೊಂದಿಗೆ, ತನ್ನ ಜನಕ್ಕೆ ಹಂಚಬೇಕಾದದ್ದು ಅವನ ಕರ್ತವ್ಯ. ಪ್ರವಾಸ ಸಾಹಿತ್ಯ ದೂರದರ್ಶನದ ಪೆಟ್ಟಿಗೆಯಂತೆ ಮನರಂಜನೆಯ ಮಾರ್ಗವೂ ಹೌದು, ಜ್ಞಾನದ ಮಾರ್ಗವೂ ಹೌದು; ಒಂದು ರೀತಿಯಲ್ಲಿ ಅದೊಂದು ದೂರಶಿಕ್ಷಣ ವ್ಯವಸ್ಥೆಯೂ ಹೌದು.

ಪ್ರವಾಸ ಸಾಹಿತ್ಯ ಇಂದು ಪ್ರಪಂಚದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದ್ದು, ಕನ್ನಡದಲ್ಲಿಯೂ ಒಂದು ಸಾಹಿತ್ಯದ ಪ್ರಕಾರವಾಗಿ ರೂಪುಗೊಂಡಿರುವುದನ್ನು ಪ್ರಸ್ತುತ ಅಧ್ಯಾಯದಲ್ಲಿ ಸ್ಥೂಲನೋಟಗಳ ಮುಖಾಂತರ ಪರಿಚಯಾತ್ಮಕವಾಗಿ ವಿವರಿಸಲಾಗಿದೆ.

**ಅಧ್ಯಾಯ ಎರಡು: ಪ್ರವಾಸ ಮತ್ತು ಪ್ರವಾಸ ಸಾಹಿತ್ಯ**

ಎರಡನೆಯ ಅಧ್ಯಾಯ 'ಪ್ರವಾಸ ಮತ್ತು ಪ್ರವಾಸ ಸಾಹಿತ್ಯ'ವನ್ನು ಕುರಿತದ್ದಾಗಿದೆ. ಇದರಲ್ಲಿ ಮುಖ್ಯವಾಗಿ ಪ್ರವಾಸ ಎಂದರೇನು? ಪ್ರವಾಸ ಸಾಹಿತ್ಯ ಎಂದರೇನು? ಪ್ರವಾಸದ ಅರ್ಥ ಮತ್ತು ಪರಿಕಲ್ಪನೆ, ಪ್ರವಾಸ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳು, ಪ್ರವಾಸ ಸಾಹಿತ್ಯದ ವಿಂಗಡಣೆ, ಪ್ರವಾಸ ಸಾಹಿತ್ಯದ ಮಹತ್ವ, ಪ್ರವಾಸ ಸಾಹಿತ್ಯ ಬೆಳೆದುಬಂದ ಬಗೆ – ಇವುಗಳ ಸ್ಥೂಲ ಪರಿಚಯವನ್ನು ಮಾಡಿಕೊಡಲಾಗಿದೆ.

ಒಬ್ಬ ವ್ಯಕ್ತಿ ತನ್ನ ಊರು ಬಿಟ್ಟು ಬೇರೆ ಊರಿಗೆ ಹೋಗಿ ಒಂದಿಷ್ಟು ದಿನಗಳು ಆ ಪ್ರದೇಶದಲ್ಲಿ ಸುತ್ತಾಡಿಕೊಂಡು ಬರುವುದನ್ನು ಪ್ರವಾಸ ಎನ್ನುತ್ತಾರೆ. ೧೯ನೆಯ ಶತಮಾನದ ಮೊದಲಿಗೆ ಇಂಗ್ಲಿಷ್ 'Tourist' ಪದವು ಪ್ರವಾಸ ಅಥವಾ ಪ್ರವಾಸಗಳನ್ನು ಮಾಡುವವನು, ಮೇಲಾಗಿ ಇದನ್ನು ಮನರಂಜನೆಗಾಗಿ ಮಾಡುವವನು ಅಥವಾ ಅನಂದಕ್ಕಾಗಿ ಕುತೂಹಲಕ್ಕಾಗಿ, ಸುಂದರ ದೃಶ್ಯಗಳಿಗಾಗಿ ಸಂಚರಿಸುವವನು ಎಂಬ ಅರ್ಥದಲ್ಲಿ ಬಳಕೆಗೊಂಡಿತು. "ಕಿವಿಗೊಡು ಓ ಪ್ರೇಕ್ಷಕ ರಸಿಕನೆ ಪ್ರವಾಸದ ಕರೆಗೆ"[೩] ಎಂಬುದಾಗಿ ತೀ.ನಂ.ಶ್ರೀ.ಯವರು "ನೆಂಟರು" ಪ್ರಬಂಧ ಸಂಕಲನದಲ್ಲಿ ಉಲ್ಲೇಖಿಸಿದ್ದಾರೆ.

ಪ್ರವಾಸ ಸಾಹಿತ್ಯದಿಂದ ಬೇರೆ ಬೇರೆ ದೇಶಗಳ ಸಂಸ್ಕೃತಿ ಪರಿಚಯ ಮಾಡಿಕೊಳ್ಳಬಹುದು. ಪ್ರವಾಸ ಸಾಹಿತ್ಯದ ಸಂಸ್ಕೃತಿ ಅಧ್ಯಯನದಿಂದ ವೈವಿಧ್ಯಮಯ ಬದುಕಿನ ಸಂಸ್ಕೃತಿಗಳನ್ನು ಆಸಕ್ತಿಯಿಂದ ಓದಲು, ಕೇಳಲು, ಪರಿಚಯಿಸಿಕೊಳ್ಳಲು, ಅಲ್ಲಲ್ಲಿ ನಮ್ಮ ಸಂಸ್ಕೃತಿಗಳೊಂದಿಗೆ ಸಮಕಾಲೀನದಲ್ಲಿ ಚರ್ಚಿಸಿಕೊಳ್ಳಲು ಸಹಾಯವಾಗುತ್ತದೆ. ಈ ಎಲ್ಲ ಅನುಭವಗಳಿಂದ ಪ್ರವಾಸ ಸಾಹಿತಿಗಳ ಮತ್ತು ಓದುಗರ ಭಾವಪ್ರಪಂಚ ಶ್ರೀಮಂತವಾಗುತ್ತದೆ.

ಪ್ರವಾಸ ಸಾಹಿತ್ಯ ಇಂಥದೇ ರೂಪದಲ್ಲಿ ಇರಬೇಕೆನ್ನುವ ನಿಯಮವೇನೂ ಇಲ್ಲ. ಅದು ಗದ್ಯದಲ್ಲಿ ಇರಬಹುದು. ಪದ್ಯದಲ್ಲಿ ಇರಬಹುದು. ಈ ಸಾಹಿತ್ಯ ಬಹುಮಟ್ಟಿಗೆ ಗದ್ಯರೂಪದಲ್ಲಿ ಇರುತ್ತದೆ. ಪ್ರವಾಸ ಸಾಹಿತ್ಯ ಸೃಜನಶೀಲ ಸಾಹಿತ್ಯ ಪ್ರಕಾರವಲ್ಲ. ಕಥೆ ಕಾದಂಬರಿಗಳಲ್ಲಿ ಕಾಣುವ ಕಲ್ಪನಾಶಕ್ತಿ ಪ್ರವಾಸ ಸಾಹಿತ್ಯದಲ್ಲಿ ಕಾಣಬರುವುದಿಲ್ಲ ಎಂದು ನಿಚ್ಚಳವಾಗಿ ಹೇಳಬಹುದು. ಆದರೆ ಇದ್ದದ್ದನ್ನು ರಸವತ್ತಾಗಿ ನಿರೂಪಿಸುವುದು ಒಂದು ಕಲೆ ಎಂದು ತಿಳಿದುಕೊಳ್ಳಬೇಕು.

ಈ ರೀತಿಯಾಗಿ ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಅದರ ಬಗೆಗಿನ ಅಧ್ಯಯನಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

**ಅಧ್ಯಾಯ ಮೂರು: ನೇಮಿಚಂದ್ರ ಅವರ ಬದುಕು–ಬರಹ : ಪರಿಚಯ**

ಮೂರನೆಯ ಅಧ್ಯಾಯದಲ್ಲಿ ನೇಮಿಚಂದ್ರ ಅವರ ಬದುಕು–ಬರಹವನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ಇವರ ಬಾಲ್ಯ, ವಿದ್ಯಾಭ್ಯಾಸ, ವೃತ್ತಿಜೀವನ, ಕೌಟುಂಬಿಕ ಬದುಕು, ಇವರ ವ್ಯಕ್ತಿತ್ವ, ಪ್ರವಾಸದ ಹಿನ್ನೆಲೆ ಸಾಹಿತ್ಯದಲ್ಲಿ ತೊಡಗಿಸಿಕೊಂಡಿರುವ ಬಗೆ ಅವರ ಸಾಹಿತ್ಯ ಕೃತಿಗಳ ಪರಿಚಯ ಇವುಗಳನ್ನು ಕುರಿತು ಅವಲೋಕಿಸಲಾಗಿದೆ.

ನೇಮಿಚಂದ್ರ ಅವರು ಬರಹದ ಮೂಲಕ ಆಧುನಿಕ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಇವರೇ ಹೇಳುವಂತೆ "ನಾನು ಶಾಲೆ ಓದಿದ ಕಾಲದಲ್ಲಿ ನನ್ನೆದುರು ಸ್ಫೂರ್ತಿ ನೀಡುವಂತಹ ಮಹಿಳಾ ಮಾದರಿಗಳಿರಲಿಲ್ಲ. ಶಾಲೆಯಲ್ಲಿ ನಾನು ಓದಿದ ಯಾವ ಪುಸ್ತಕದಲ್ಲೂ ಮಹಿಳಾ ಸಾಧಕಿಯರ ಉಲ್ಲೇಖವಿರಲಿಲ್ಲ. ಮೂವತ್ತು ವರ್ಷಗಳಿಗೂ ಹಿಂದೆ, ಪಿ.ಯು.ಸಿ. ಮುಗಿಸಿ ಇಂಜಿನಿಯರಿಂಗ್ ರಂಗವನ್ನು ಪ್ರವೇಶಿಸುವಾಗ ನನ್ನಲ್ಲಿ ಸಾಕಷ್ಟು ಅಳುಕು ಆತಂಕವಿತ್ತು. ನನ್ನೆದುರು ಉದಾಹರಣೆಗಳಿರಲಿಲ್ಲ. ಅಳುಕುತ್ತಾ ಒಳಹೊಕ್ಕ ನಾನು ಮತ್ತು ನನ್ನ ಗೆಳತಿ ವಿಶ್ವವಿದ್ಯಾಲಯಕ್ಕೆ ರ್‍ಯಾಂಕ್ ಪಡೆದು ಹೊರಬಂದಾಗಲೇ ಅಲ್ಲಿ ಹೆಣ್ಣುಮಕ್ಕಳಿಗೆ ಅಸಾಧ್ಯವಾದದ್ದು ಏನೂ ಇಲ್ಲವೆಂದು ತಿಳಿದದ್ದು!"[೪] – ಎಂಬುದಾಗಿ 'ನಾನೇಕೆ ಬರೆಯುತ್ತೇನೆ' ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಇತಿಹಾಸದಲ್ಲಿ ಕಳೆದುಹೋದ ಮಹಿಳಾ ವಿಜ್ಞಾನಿಗಳನ್ನು, ವೈಮಾನಿಕರನ್ನು ಹೊರತೆಗೆದು ಸ್ತ್ರೀ ಪರಂಪರೆಯನ್ನು ಪರಿಚಯಿಸುವುದು ನೇಮಿಚಂದ್ರ ಅವರ ಅಧ್ಯಯನ ಮತ್ತು ಬರಹದ ವಸ್ತುವಾಯಿತು. ಹಾಗೆಯೇ ಇವರ ಬದುಕು ಮತ್ತು ಪಯಣ ಜೊತೆಜೊತೆಯಾಗಿ ಸಾಗಿದೆ. ಇವರ ಪ್ರವಾಸದಲ್ಲಿಯ ಜೀವನದರ್ಶನ ಅತ್ಯಮೂಲ್ಯವಾಗಿದೆ. ಆಗ ಅವರು ಕಂಡ ಜನರನ್ನು, ಜಗತ್ತನ್ನು ಪ್ರತಿಬಿಂಬಿಸುವ ಇವರ ಬರಹವನ್ನು ಮತ್ತು ಬದುಕನ್ನು ಕುರಿತ ವಿಶ್ಲೇಷಣೆಯ ಮುನ್ನೋಟವನ್ನು ಕಾಣುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಲಾಗಿದೆ.

**ಅಧ್ಯಾಯ ನಾಲ್ಕು : ನೇಮಿಚಂದ್ರ ಅವರ ಪ್ರವಾಸ ಸಾಹಿತ್ಯದ ಅಧ್ಯಯನ**

ಈ ಅಧ್ಯಾಯದಲ್ಲಿ ನೇಮಿಚಂದ್ರ ಪ್ರವಾಸ ಸಾಹಿತ್ಯದ ಬರಹಗಳನ್ನು ಕುರಿತು ಚರ್ಚಿಸಲಾಗಿದೆ. ಅಂತೆಯೇ ಮೇಲಿನ ಪ್ರವಾಸ ಸಾಹಿತ್ಯವು ಬಿಂಬಿಸುವ ವಿಷಯದ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಅವರ ಮೊದಲನೆಯ ಪ್ರವಾಸ ಕಥನ 'ಒಂದು ಕನಸಿನ ಪಯಣ'. ಐರೋಪ್ಯ ರಾಷ್ಟ್ರಗಳಲ್ಲಿನ ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ಚಿತ್ರಕಲಾರಂಗದ ಸಾಧಕ–ಸಾಧಕಿಯರ ಮೂಲಸ್ಥಳಗಳಿಗೆ, ಸ್ಮಾರಕ ಕೇಂದ್ರಗಳಿಗೆ ನೇಮಿಚಂದ್ರ ಅವರು ಹೇಮಲತಾ ಮಹಿಷಿಯವರೊಂದಿಗೆ ಮಾಡಿದ ಒಂದೂವರೆ ತಿಂಗಳ ಕಾಲದ ಅನುಭವಗಳ ದಾಖಲೆಯಾಗಿದೆ. ಆತ್ಮೀಯ ನಿರೂಪಣೆ, ಸೂಕ್ಷ್ಮ ಅವಲೋಕನ ಗುಣ, ಯಾವ ಎಡೆಗೆ ನಡೆದರೂ ಕೈಬಿಡದ ಮೂಲ ನೆಲದ ನೆನಪು, ಕಣ್ಣಿಗೆ ಕಟ್ಟಿದಂತೆ ಆಯಾ ತಾಣಗಳ ಸಾಮಾಜಿಕ–ಸಾಂಸ್ಕೃತಿಕ ವಿವರಗಳನ್ನು ದಾಖಲಿಸುವುದರಲ್ಲಿನ ನಿಪುಣತೆ – ಇವುಗಳಿಂದಾಗಿ ಈ ಪ್ರವಾಸ ಸಾಹಿತ್ಯ ಕೇವಲ ನೀರಸ ಅಂಕಿ–ಅಂಶಗಳ ದಾಖಲೆಯಾಗುವ ಬದಲಿಗೆ ಕಾವ್ಯಾತ್ಮಕ ಶೈಲಿಯ ಸಾಂಸ್ಕೃತಿಕ ಪಠ್ಯವಾಗಿ ಮೂಡಿಬಂದಿದೆ.

ಹಾಗೆಯೇ ಮತ್ತೊಂದು ಪ್ರವಾಸಕಥನ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಪ್ರಾಚೀನ ನಾಗರಿಕತೆಯ ನಾಡು, ಕಡಿದಾದ ಬೆಟ್ಟದ ಸಾಲುಗಳು, ಆಳವಾದ ಕಣಿವೆಗಳು, ಅಭೇದ್ಯವಾದ ಅರಣ್ಯ ಪ್ರಕೃತಿ ವಿಶೇಷಗಳೊಂದಿಗೆ ಪ್ರಾಚೀನರು ರೂಢಿಸಿಕೊಂಡು ಬಂದ ಸಂಸ್ಕೃತಿ, ಅಂತರಿಕ್ಷದಿಂದ ಮಾತ್ರ ನೋಡಬಹುದಾದ ನಾಸ್ಕಾ ಗೆರೆಗಳು, ದೈತ್ಯ ಚಿತ್ರಗಳು ಪ್ರಾಚೀನ ಪೆರುವಿಗರ ಅದ್ಭುತ ಕಲ್ಪನಾಶಕ್ತಿಯನ್ನೂ ಜ್ಯಾಮಿತಿ ಜ್ಞಾನವನ್ನೂ ಅನಾವರಣಗೊಳಿಸುತ್ತದೆ. ಸಂತ ಕ್ಯಾರೋಲಿನಾ ಮನಸ್ಸಿನ ನಿಗೂಢತೆ, ಅಮೆಜಾನ್ ನದಿಯಲ್ಲಿ ತೇಲಿದ ಅನುಭವ – ಹೀಗೆ ನೂರಾರು ಸಂಗತಿಗಳನ್ನು ಒಳಗೊಂಡಿದೆ.

ಇದನ್ನು ಪ್ರಸ್ತುತ ಸಂಶೋಧನಾ ನಿಬಂಧದ ಮುಖ್ಯ ವಸ್ತುವಾಗಿ ತೆಗೆದುಕೊಂಡು ಈ ಕೃತಿಗಳನ್ನು ಅವಲೋಕನ ಮಾಡಿ ಇದರ ಆಶಯಗಳನ್ನು ಕುರಿತು ವಿಶ್ಲೇಷಿಸಿ ಪ್ರಬಂಧವನ್ನು ಮಂಡಿಸಲಾಗಿದೆ.

**ಅಧ್ಯಾಯ ಐದು : ನೇಮಿಚಂದ್ರ ಅವರ ಪ್ರವಾಸ ವಿನ್ಯಾಸದ ಕಥನಗಳ ಅಧ್ಯಯನ**

೧. ಯಾದ್ ವಶೇಮ್

೨. ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು

ಈ ಅಧ್ಯಯನದಲ್ಲಿ 'ನೇಮಿಚಂದ್ರ ಅವರ ಪ್ರವಾಸ ವಿನ್ಯಾಸದ ಕಥನಗಳ ಅಧ್ಯಯನ' ಮಾಡಲಾಗಿದೆ. ಇದರಲ್ಲಿ ಆನುಷಂಗಿಕ ಆಕರಗಳನ್ನಾಗಿ 'ಯಾದ್ ವಶೇಮ್' ಎಂಬ

ಕಾದಂಬರಿಯನ್ನು ಮತ್ತು 'ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು' ಎಂಬ ಕಥಾಸಂಕಲನವನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಆ ಮೂಲಕ ಈ ಕೃತಿಗಳನ್ನು ಕುರಿತು ತಾತ್ತ್ವಿಕವಾಗಿ ಚರ್ಚಿಸಲಾಗಿದೆ.

ಜರ್ಮನಿಯಲ್ಲಿ ೧೯೩೩ರಲ್ಲಿ ಅಧಿಕಾರಕ್ಕೆ ಬಂದ ಹಿಟ್ಲರ್ ಮೊದಲು ಆರಂಭಿಸಿದ್ದೇ ಯಹೂದಿ ಜನರ ಹತ್ಯಾಕಾಂಡ, ಜೊತೆಗೆ ಕಮ್ಯುನಿಸ್ಟ್‌ರ ಹತ್ಯೆ, ಆರ್ಯ ರಕ್ತದ ಅಹಮಿಕೆಯನ್ನು ತುಂಬಿ ನಡೆಸಿದ ಆ ಹತ್ಯಾಕಾಂಡ ಜಗತ್ತನ್ನೇ ಬೆಚ್ಚಿಬೀಳಿಸಿತ್ತು. ವಿಜ್ಞಾನ, ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಮನುಷ್ಯರನ್ನು ಕೊಲೆಗೈದ ಆ ಇತಿಹಾಸ, ಅದರ ಹಿಂದಿರುವ ಜನಾಂಗೀಯ ದ್ವೇಷ–ಮನುಕುಲ ಎಷ್ಟು ಕ್ಷಮೆ ಕೇಳಿದರೂ ಕ್ಷಮಾರ್ಹವಲ್ಲದ್ದು, ಹಿಟ್ಲರನ ದಾಳಿಗೆ ಬಲಿಯಾಗಿ ಬದುಕನ್ನರಸಿ ತಪ್ಪಿಸಿಕೊಂಡು ಬಂದು ಬೆಂಗಳೂರು ಸೇರಿದ ತಂದೆ ಹಾಗೂ ಪುಟ್ಟ ಮಗಳ ಕಥೆ ಈ 'ಯಾದ್ ವಶೇಮ್' ಕಾದಂಬರಿಯ ಕೇಂದ್ರ ವಸ್ತುವಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೇಮಿಚಂದ್ರರವರ ಸಣ್ಣಕತೆಗಳು ಅತ್ಯಮೂಲ್ಯವಾದ ಕೊಡುಗೆಯನ್ನು ಕೊಟ್ಟಿದೆ. ಸಮಾಜದ ಪ್ರತಿಯೊಬ್ಬ ನಾಗರಿಕನು ಕಣ್ತೆರೆಯದ ಹೊರತು ಸಾಮಾಜಿಕ ಪಿಡುಗುಗಳು ಅಂತ್ಯ ಕಾಣುವುದಿಲ್ಲ. ಕಾನೂನಿನ ಚೌಕಟ್ಟನ್ನು ಎಷ್ಟೇ ವಿಸ್ತರಿಸಿದರೂ ಅದನ್ನು ಮೀರಿ ನಿಲ್ಲಬಲ್ಲ ಸಾಮರ್ಥ್ಯ ಇಂದಿನ ಜನತೆಯಲ್ಲಿ ಬಿಂಬಿತವಾಗುತ್ತಿದೆ. ದುಷ್ಟ ಪದ್ಧತಿಗಳ ಬುಡಕ್ಕೆ ಕೊಡಲಿ ಪೆಟ್ಟನ್ನು ಕೊಟ್ಟು – ದಿಟ್ಟ ಹೆಜ್ಜೆಯಿಡುವ ಸಾಹಸದಲ್ಲಿ ಸಮಾಜ ಟೊಂಕಕಟ್ಟಿ ನಿಲ್ಲುವಂತೆ ನೇಮಿಚಂದ್ರರವರ ಕತೆಗಳು ಪ್ರೇರೇಪಿಸುತ್ತವೆ.

ಈ ರೀತಿಯಲ್ಲಿ ಹಿಂದಿನ ಅಧ್ಯಾಯಕ್ಕೆ ಪೂರಕವಾಗಿ ನೇಮಿಚಂದ್ರ ಅವರ ಪ್ರವಾಸ ವಿನ್ಯಾಸದ ಕಥನವನ್ನು ವಿಭಿನ್ನ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಆರು : ಸಮಾರೋಪ**

ಈ ಅಧ್ಯಾಯದಲ್ಲಿ ಕಳೆದುಹೋದ ಸಂಸ್ಕೃತಿಯನ್ನು ಪುರಾತನ ಪರಂಪರೆಯನ್ನು ಸಮಕಾಲೀನವಾಗಿ ಶೋಧಿಸುವ ನೇಮಿಚಂದ್ರ ಅವರ ಇತಿಹಾಸ ಪ್ರಜ್ಞೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಹೀಗೆ ಪ್ರವಾಸ ಕಥನಗಳ ವ್ಯಾಪ್ತಿಯನ್ನು ನಿರ್ದಿಷ್ಟಪಡಿಸಿಕೊಂಡು, ವಿವಿಧ ಅಧ್ಯಾಯಗಳಾಗಿ ಮಾಡಿಕೊಂಡು ಆಳವಾದ ಅಧ್ಯಯನ ಮಾಡಲಾಗಿದೆ. ಈ ಮೂಲಕ ಒಂದು ನಾಡನ್ನು ಮತ್ತು ಅವರ ಜೀವನ ಕ್ರಮವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಪ್ರಾಚೀನ ಸಂಸ್ಕೃತಿಯ ದೇಶವಾದ ಭಾರತಕ್ಕೂ ಮತ್ತು ಕೃತಿಯಲ್ಲಿರುವ ನಾಡಿನ ಸಂಸ್ಕೃತಿಯ ವ್ಯತ್ಯಾಸವನ್ನು ಅಥವಾ ಸಾಮ್ಯತೆಗಳನ್ನು ಸಾಂಸ್ಕೃತಿಕ ಜಾಗತೀಕರಣದ ಪ್ರತಿಪಾದನೆಯ ಹಿನ್ನೆಲೆಯಲ್ಲಿ ನೋಡಲಾಗಿದೆ.

ಒಟ್ಟಾರೆ, ಈವರೆಗಿನ ವಿವರಣೆಗಳು ಮುಂದಿನ ಶೋಧನೆಗೆ ರೂಪರೇಷೆಯನ್ನು ಒದಗಿಸುತ್ತಿದ್ದು, ಈ ತಳಹದಿಯನ್ನು ಆಧಾರವಾಗಿಟ್ಟುಕೊಂಡು ಪ್ರಬಂಧವನ್ನು ವೈಚಾರಿಕ ಚರ್ಚೆಗೆ ಒಳಗು ಮಾಡಲು ಪ್ರಯತ್ನಿಸಿದೆ.

## ಕೊನೆ ಟಿಪ್ಪಣಿಗಳು

೧. ಎಸ್.ವಿದ್ಯಾಶಂಕರ : ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಸ್ನೇಹಾ ಪ್ರಕಾಶನ, ೧೯೯೧

೨. ಪಿ.ಕೆ. ರಾಜಶೇಖರ : ಭೂಮಿತೂಕದ ಮಾತು ; ೨೦೦೨, ಪು. ೨೨

೩. ಜಿ.ಗುಂಡಣ್ಣ : ಪ್ರವಾಸ ತೀರ್ಥದ ಮುನ್ನುಡಿ ; ೧೯೫೨-ಪು. ೧೯

೪. ನಾನೇಕೆ ಬರೆಯುತ್ತೇನೆ, ಪು. ೩

# ಅಧ್ಯಾಯ – ೬
# ಉಪಸಂಹಾರ

ಸಾಹಿತ್ಯದ ಹಲವಾರು ಪ್ರಕಾರಗಳಾದ ಕತೆ, ಕಾದಂಬರಿ, ಕಾವ್ಯ, ವಿಮರ್ಶೆ ಹೀಗೆ ಅನೇಕ ಕ್ಷೇತ್ರಗಳಲ್ಲಿ ಮಹಿಳೆಯರು ಸಾಹಿತ್ಯ ಸಾಧನೆ ಮಾಡಿದ್ದಾರೆ. ಆದರೆ ಪ್ರವಾಸ ಕಥನವನ್ನು ಕುರಿತು ಕೆಲಸ ಮಾಡಿದ ಮಹಿಳೆಯರ ಸಂಖ್ಯೆ ತೀರ ಕಡಿಮೆ ಪ್ರಮಾಣದಲ್ಲಿ ಇದ್ದರೂ, ಪ್ರತಿಯೊಂದು ಮಹಿಳಾ ಪ್ರವಾಸಕಥನಗಳು ಸಂಸ್ಕೃತಿಯ ಅಧ್ಯಯನದ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಂದರೆ, ದೇಶ–ವಿದೇಶಗಳಿಗೆ ಭೇಟಿಕೊಟ್ಟು ಪ್ರವಾಸಕಥನಗಳನ್ನು ರಚಿಸಿರುವ ಪ್ರತಿಯೊಬ್ಬ ಮಹಿಳೆಯರು, ತಮ್ಮ ಅನುಭವಗಳ ಜೊತೆಗೆ ಆಯಾ ದೇಶಗಳ ಜನರ ಮತ್ತು ಸಮಾಜದ ಭಿನ್ನ–ವಿಭಿನ್ನ ನೆಲೆಗಳನ್ನು ಕುರಿತು ಆಳವಾಗಿ ಚರ್ಚೆ ಮಾಡುತ್ತಾರೆ. ಈ ಮೂಲಕ ಜಗತ್ತಿನ ವಿವಿಧ ದೇಶಗಳ ಜೀವನ ದರ್ಶನವನ್ನು ಪ್ರತಿಬಿಂಬಿಸುತ್ತಾರೆ. ಜೊತೆಗೆ, "ಬಿಡಿ ಬಿಡಿ ಮಹಿಳೆಯರ ಪ್ರವಾಸವೇ? ಅದು ವಿದೇಶ ಪ್ರವಾಸ! ಸೀರೆ ಬಟ್ಟೆ, ಒಡವೆ ವಸ್ತ್ರ, ಬ್ಯಾಗು ಪರ್ಸು, ಪಾತ್ರೆ ಪದಾರ್ಥ! ಹೆಂಗಸರ ಪ್ರವಾಸ ಊರಿಂದ ಊರಿಗಲ್ಲ ಅಂಗಡಿಯಿಂದ ಅಂಗಡಿಗೆ" ಎಂದು ತಮ್ಮ ಪ್ರವಾಸದ ಬಗ್ಗೆ ಲಘುವಾಗಿ ಆಡುವ ಮಾತುಗಳನ್ನು ಸುಳ್ಳುಗೊಳಿಸಿದ್ದಾರೆ. ಇದಕ್ಕೆ ಈವರೆಗೆ ಮಾಡಿರುವ 'ನೇಮಿಚಂದ್ರ ಅವರ ಪ್ರವಾಸ ಕಥನಗಳು' ಎಂಬ ಹಿನ್ನೆಲೆಯಲ್ಲಿನ ಅಧ್ಯಯನ ಉತ್ತಮ ಸಾಕ್ಷಿಯಾಗುತ್ತದೆ.

ಈ ಅಧ್ಯಯನದಿಂದ ದಕ್ಷಿಣ ಅಮೇರಿಕಾದಲ್ಲಿರುವ ಐತಿಹಾಸಿಕ ಪ್ರಸಿದ್ಧ ಸ್ಥಳಗಳು ಮತ್ತು ಘಟನೆಗಳ ಪರಿಚಯವಾಗುತ್ತದೆ. ಅಷ್ಟೇ ಅಲ್ಲದೆ ನೇಮಿಚಂದ್ರ ಅವರು ಜಗತ್ತಿನ ಪ್ರಮುಖ ಮಹಿಳಾ ವಿಜ್ಞಾನಿಗಳನ್ನು ಕುರಿತು ಪುಸ್ತಕವನ್ನು ಬರೆದಿದ್ದಾರೆ. ಅವರ ಬದುಕಿಗೆ ಜೋಡಿಸಿದ ಆ ಎಲ್ಲ ಸ್ಥಳಗಳು ಸಹ ಪರಿಚಯವಾಗುತ್ತದೆ. ಕನ್ನಡ ಸಾಹಿತ್ಯ ಲೋಕಕ್ಕೆ ನೇಮಿಚಂದ್ರರ ಕೊಡುಗೆ ಅಪಾರವಾದದ್ದು. ಸಾಹಿತ್ಯ, ವಿಜ್ಞಾನ ಮತ್ತು ಮಹಿಳಾ ಅಧ್ಯಯನ ಇವರ ಆಸಕ್ತಿಯ ವಿಷಯಗಳಾದ್ದರಿಂದ ಪ್ರವಾಸವನ್ನು ಕೈಗೊಂಡು ಪ್ರವಾಸ ಕಥನವನ್ನು ರಚಿಸಿದ್ದಾರೆ. ಇವರ ಕೃತಿಗಳು ಹೊಸ ಹೊಸ ದರ್ಶನಾಂಶಗಳನ್ನು ಸ್ಫುರಿಸುತ್ತವೆ. ಅಲ್ಲದೆ ಪ್ರವಾಸ ಸಾಹಿತ್ಯದಲ್ಲಿ ಹೊಸ ದೃಷ್ಟಿಕೋನವನ್ನು, ಪ್ರವಾಸದ ನೂತನ ಅನುಭವವನ್ನು ಸಹೃದಯರಿಗೆ ನೀಡುತ್ತವೆ. ಈ ಮೂಲಕ ಇವರ ಪ್ರವಾಸ ಕಥನಗಳು ಹೊಸ ಸಂವೇದನೆಯನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ಸಮಾಜವನ್ನು ಕಟ್ಟುವ ಮತ್ತು ಸಾಮಾಜಿಕ ಬದಲಾವಣೆಯನ್ನು ತರುವ ಕೆಲಸವನ್ನು ಮಾಡುತ್ತಿದ್ದಾರೆ.

ಅಷ್ಟೇ ಅಲ್ಲದೆ ಗಟ್ಟಿ ತಾತ್ವಿಕತೆ, ನೇರ ನಿರೂಪಣೆಯ ಕತೆಗಳನ್ನು ಭಾವಗೀತಾತ್ಮಕವಾಗಿ ಬರೆದು ಹೊಸ ಪೀಳಿಗೆಯ ಲೇಖಕಿಯರಲ್ಲಿ ಒಂದು ಗಟ್ಟಿ ಸ್ಥಾನ ಪಡೆದುಕೊಂಡರು.

ಅಂತಃಕರಣಪೂರಿತವಾಗಿ ಮಹಿಳೆಯರ ಸಮಾನತೆಗಾಗಿ ಹೋರಟ, ಪ್ರಧಾನ ಸಂಸ್ಕೃತಿಯ ಎಡೆಯಲ್ಲೇ ಒಂದು ಸಮಾನಾಂತರ ಸಂಸ್ಕೃತಿ, ಮೌಲ್ಯ, ಧ್ಯೇಯೋದ್ದೇಶಗಳನ್ನು ಪ್ರತಿಪಾದಿಸುವ ಪ್ರಯತ್ನಗಳ ಕುರಿತು ಇಲ್ಲಿ ಬರೆದಿದ್ದಾರೆ.

ಸ್ತ್ರೀವಾದಿ ದೃಷ್ಟಿಕೋನ, ಯಾವುದೇ ಸುಶಿಕ್ಷಿತ, ಬುದ್ಧಿವಂತ, ಸಂವೇದನಾಶೀಲ ಮಹಿಳೆಯಲ್ಲಿ ಹೂವರಳವಷ್ಟೇ ಸಹಜವಾಗಿ ಇವರ ಕೃತಿಗಳಲ್ಲಿ ಮೂಡಿರುತ್ತದೆ. ಇವರ ತಾತ್ವಿಕ ಕಾಳಜಿಗಳು ಶೋಷಿತ ಮಹಿಳೆಯರು ತಮ್ಮ ವೈಯಕ್ತಿಕ ಬದುಕನ್ನು ನೇರ ಮಾಡಿಕೊಳ್ಳಲು ನಮ್ಮಿಷ್ಟದಂತೆ ಬದುಕಲು ಸಾಧ್ಯವಾಗಿಸುತ್ತದೆ. ಹೆಂಗಸರ ಮನಸ್ಸಿನಲ್ಲಿ ಅರಿವಿನ ಕಿಡಿಯನ್ನು ಹೊತ್ತಿಸುತ್ತದೆ. ಇವರ ಪ್ರವಾಸ ಕಥನದ ಮೂಲಕ 'ಗಂಡು ನಿರೀಕ್ಷೆ'ಗಳಿಗೆ ತಕ್ಕಂತೆ ಬದುಕುವ ಕಲೆ ಮೈಗೂಡಿಸಿಕೊಂಡಿರುವ ಬಹುಮಂದಿ ಸ್ತ್ರೀಯರು ತಮ್ಮ ಕವಚ ಕಳಚಿ ಸ್ವಂತಿಕೆಯ ನಿಚ್ಚಳ ಪ್ರಕಾಶಕ್ಕೆ ತೆರೆದುಕೊಳ್ಳುತ್ತದೆ. ಮಹಿಳೆಯು ಬೌದ್ಧಿಕ ಸಂಪತ್ತನ್ನು ತನ್ನದಾಗಿಸಿಕೊಂಡಾಗ ಸ್ವಾವಲಂಬನೆ ಬದುಕನ್ನು ಕಂಡುಕೊಳ್ಳಬಹುದು ಎಂಬುದು ಮನದಟ್ಟಾಗುತ್ತದೆ. ಈ ನಿಟ್ಟಿನಲ್ಲಿ ನೇಮಿಚಂದ್ರರ ಕೃತಿಗಳು ಸ್ಫೂರ್ತಿದಾಯಕವಾದ ಆದರ್ಶದ ದೀಕ್ಷೆ ಕೊಡುವ ಬರಹಗಳಿವೆ.

ವಿಪುಲವಾಗಿ ಓದಿ, ದೇಶ ಸಂಚಾರ ಮಾಡಿ, ಹೋದೆಡೆಗಳಲ್ಲೆಲ್ಲ ತನ್ನ ಆಸಕ್ತಿಯ ವಿಷಯವನ್ನು ಚುರುಕಾಗಿ ಗ್ರಹಿಸುತ್ತಾರೆ. ತತ್‌ಕ್ಷಣ ಮಾಹಿತಿ ಸಂಗ್ರಹಿಸುವ ಕಾರ್ಯಕ್ಕೆ ಮುಂದಾಗುತ್ತಾರೆ. ಹೀಗಾಗಿ ಅವರ ಬಹುತೇಕ ಕೃತಿಗಳು ಪ್ರವಾಸವನ್ನು ಕೈಗೊಂಡು ಕೃತಿಯ ಬಗ್ಗೆ ಖಚಿತ ವಿಚಾರ ಮತ್ತು ಅಭಿಪ್ರಾಯವನ್ನು ಕಲೆಹಾಕುತ್ತಾರೆ. ಒಂದು ತಪಸ್ಸಿನಂತೆ ಅವುಗಳನ್ನು ಬೆಂಬತ್ತುವ ಲೇಖಕಿಯ ಅರ್ಥಪೂರ್ಣ ಕೃತಿಗಳು ಹೊರಹೊಮ್ಮಿದವು.

ಈ ಸಂಶೋಧನಾ ನಿಬಂಧದಲ್ಲಿ ಇದುವರೆಗೆ ನೇಮಿಚಂದ್ರ ಪ್ರವಾಸ ಕಥನಗಳನ್ನು ತೌಲನಿಕವಾಗಿ ಸಮೀಕ್ಷಿಸುತ್ತಾ ಬೇರೆ ಬೇರೆ ದೇಶಗಳ ಸಂಸ್ಕೃತಿಗಳ ಪರಿಚಯದಿಂದ ಅಲ್ಲಿಯ ಇತಿಹಾಸ ಭೂಗೋಳ ಹಿನ್ನೆಲೆಗಳನ್ನು ಶೋಧಿಸಲು ಸಾಧ್ಯವಾಗಿದೆ. ಅಲ್ಲಿಯ ಜನರ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಮುಂತಾದವುಗಳ ಸಂಸ್ಕೃತಿಗಳನ್ನು ಅರ್ಥಪೂರ್ಣವಾಗಿ ಹೊಸ ಪರಿಕಲ್ಪನೆಗಳ ಅಡಿಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಈ ಹೊತ್ತಿನಲ್ಲಿ ಜಾಗತಿಕವಾಗಿ ತಲೆದೋರಿರುವ ಹೊಸಬಗೆಯ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಪ್ರಯತ್ನ ಮಾಡಲಾಗಿದೆ. ಮುಖ್ಯವಾಗಿ ಜನರ ಬದುಕನ್ನು ಮುಖಾಮುಖಿಯಾಗಿಸಿಕೊಂಡು ಮಾನವೀಯ ಬಾಂಧವ್ಯದ ಬೆಸುಗೆಯ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಸಂಶೋಧನ ನಿಬಂಧದ ಶೀರ್ಷಿಕೆ 'ನೇಮಿಚಂದ್ರ ಅವರ ಪ್ರವಾಸ ಕಥನಗಳು' ಆಗಿದ್ದು, ಒಟ್ಟು ಆರು ಮುಖ್ಯ ಅಧ್ಯಾಯಗಳನ್ನು ಒಳಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ಹೊರಹೊಮ್ಮಿರುವ ಪ್ರವಾಸ ಕಥನಗಳ ವಿಕಾಸದ ಹಾದಿಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು, ನೇಮಿಚಂದ್ರ ಪ್ರವಾಸ ಕಥನಗಳ ಮುಖ್ಯ ನೆಲೆಗಳನ್ನು ಶೋಧಿಸಲು ಪ್ರಯತ್ನಿಸಿದೆ. ಇವರ ವಿವಿಧ ಕಾಲದಲ್ಲಿ ರಚನೆಯಾದ ಎರಡು ಪ್ರವಾಸ ಸಾಹಿತ್ಯವು ವಿಭಿನ್ನತೆಯಿಂದ ಕೂಡಿದೆ. ಇವರ ಮೊದಲ ಪ್ರವಾಸ ಕಥನದಲ್ಲಿ ಮಹಿಳಾ ವಿಜ್ಞಾನಿಗಳ ನೆಲೆಯನ್ನು ಹುಡುಕಿಕೊಂಡು ನೆಲೆಬೆಲೆಯನ್ನು ಗುರುತಿಸಿದ್ದಾರೆ. ಜಗತ್‌ಪ್ರಸಿದ್ಧ ಸಾಹಿತಿಗಳ ಸ್ಥಳಗಳನ್ನು ಶೋಧಿಸಿ ಅವರ ಸಾಹಿತ್ಯಕ್ಕೆ ಸ್ಫೂರ್ತಿಯನ್ನುಂಟುಮಾಡಿದ ಜಾಗಗಳನ್ನೆಲ್ಲಾ ಶೋಧಿಸಿದ್ದಾರೆ. ಹಾಗೆಯೇ ನಾಗರಿಕತೆ ನೆಲೆಯಾದ ಪಾಂಪೆ ಮತ್ತು ಇನ್ನಿತರ ಮ್ಯೂಸಿಯಂಗಳಿಗೆ ಭೇಟಿ ನೀಡಿ ನಮ್ಮೆಲ್ಲರ ಬೌದ್ಧಿಕ ಸಂಪತ್ತನ್ನು ವೃದ್ಧಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಆರ್ಥಿಕ, ರಾಜಕೀಯ, ಸಂಸ್ಕೃತಿ ಮತ್ತು ಜೀವನ ದರ್ಶನವನ್ನು ಎಳೆಎಳೆಯಾಗಿ ಕೃತಿಯ ಮೂಲಕ ಸಾದರಪಡಿಸಿದ್ದಾರೆ. ಇದರಲ್ಲಿ ಮಹಿಳಾ ಹೋರಾಟದ ಬದುಕು ಮತ್ತು ಬಡರಾಷ್ಟ್ರಗಳ ಮೇಲೆ ಶ್ರೀಮಂತ ರಾಷ್ಟ್ರಗಳ ದೌರ್ಜನ್ಯವನ್ನು ಸಹ ಕಣ್ಣಿಗೆ ಕಟ್ಟಿಕೊಂಡಿದ್ದಾರೆ. ಮನರಂಜನೆಯ ಪ್ರವಾಸ ಕೃತಿಯಾಗದೇ ಸಹೃದಯರ ಸುಪ್ತ ಪ್ರತಿಭೆಯನ್ನು ಎಚ್ಚರಿಸುವ ಮತ್ತು ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಅಲ್ಲದೆ ವೈವಿಧ್ಯದೊಳಗೆ ಬಹುತ್ವವನ್ನು ಹುಡುಕುತ್ತದೆ. ಇವರ ಪ್ರವಾಸ ಸಾಹಿತ್ಯ ವಿವಿಧ ಜನರ ಆಚಾರವಿಚಾರಗಳನ್ನು, ಅವರ ಸಂಸ್ಕೃತಿಯ ದರ್ಶನವನ್ನು ನೀಡುವಂತದ್ದಾಗಿದೆ.

ಮೊದಲನೆ ಅಧ್ಯಾಯದಲ್ಲಿ 'ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೇಮಿಚಂದ್ರ ಅದರ ಪ್ರವಾಸ ಸಾಹಿತ್ಯದಲ್ಲಿನ ಮಹತ್ವ, ಗುರಿ ಮತ್ತು ಸಾಧ್ಯತೆಗಳನ್ನು ಸಂಶೋಧನೆಯ ವೈಧಾನಿಕತೆಯ ಮೂಲಕ ವಿವರಿಸಲಾಗಿದೆ. ಪ್ರವಾಸ ಸಾಹಿತ್ಯದ ಅಧ್ಯಯನದಿಂದ ಕೇವಲ ಮನರಂಜನೆ ಚಿಂತನೆ ಸೃಜನಶೀಲತೆ, ಮಾತ್ರವಲ್ಲ, ಜ್ಞಾನವು ಲಭಿಸುತ್ತದೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ 'ಪ್ರವಾಸ ಮತ್ತು ಪ್ರವಾಸ ಸಾಹಿತ್ಯ'ವನ್ನು ಕುರಿತು ವಿಶ್ಲೇಷಿಸಲಾಗಿದೆ. ಇದರಲ್ಲಿ ಪ್ರವಾಸದ ಅರ್ಥ ಮತ್ತು ಪರಿಕಲ್ಪನೆ, ಪ್ರವಾಸ ಸಾಹಿತ್ಯದ ಸ್ವರೂಪ-ಲಕ್ಷಣಗಳು, ಪ್ರವಾಸ ಸಾಹಿತ್ಯದ ವಿಂಗಡಣೆ, ಪ್ರವಾಸ ಸಾಹಿತ್ಯದ ಮಹತ್ವ ಮತ್ತು ಪ್ರವಾಸ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಸ್ಥೂಲವಾಗಿ ಚರ್ಚಿಸಲಾಗಿದೆ. ಪ್ರವಾಸ ಸಾಹಿತ್ಯದ ಸಂಸ್ಕೃತಿ ಅಧ್ಯಯನದಿಂದ ವೈವಿಧ್ಯಮಯ ಬದುಕಿನ ಸಂಸ್ಕೃತಿಗಳನ್ನು ಆಸಕ್ತಿಯಿಂದ ಓದಲು, ಕೇಳಲು, ಪರಿಚಯಿಸಿಕೊಳ್ಳಲು, ಅಲ್ಲಲ್ಲಿ ನಮ್ಮ ಸಂಸ್ಕೃತಿಗಳೊಂದಿಗೆ ಸಮಕಾಲೀನದಲ್ಲಿ

ಇಟ್ಟು ಚರ್ಚಿಸಲಾಗಿದೆ. ಪ್ರಾಚೀನ ಕಾಲದಲ್ಲಿನ ಪ್ರವಾಸದ ಉದ್ದೇಶ, ಇತ್ತೀಚಿನ ಪ್ರವಾಸದ ಉದ್ದೇಶವನ್ನು ಚರ್ಚಿಸಲಾಗಿದೆ. ಪ್ರವಾಸದಲ್ಲಿ ಹಲವಾರು ಲಕ್ಷಣಗಳು ಪ್ರಯೋಜನಗಳನ್ನು ತಿಳಿಸುತ್ತಾ, ಪ್ರವಾಸ ಸಾಹಿತ್ಯದಲ್ಲೂ ಹಲವು ಪ್ರಕಾರಗಳಿವೆ ಎಂಬುದನ್ನು ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ 'ನೇಮಿಚಂದ್ರ ಅವರ ಬದುಕು–ಬರಹ : ಪರಿಚಯ'ದ ಶೀರ್ಷಿಕೆಯಲ್ಲಿ ಜನನ, ಶಿಕ್ಷಣ, ಉದ್ಯೋಗ, ಕುಟುಂಬದ ವಿವರಗಳು, ಸಾಹಿತ್ಯದ ಕೊಡುಗೆ, ಮಹಿಳಾ ಅಧ್ಯಯನ ಮತ್ತು ಅವರ ಸಾಧನೆ, ಅವರಿಗೆ ಬಂದ ಪ್ರಶಸ್ತಿಗಳು, ಕೃತಿಗಳನ್ನು ತಿಳಿಸಲಾಗಿದೆ.

ಸಂಶೋಧನಾ ನಿಬಂಧದ ಹೃದಯಭಾಗವಾದ ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ನೇಮಿಚಂದ್ರ ಅವರ ಪ್ರವಾಸ ಸಾಹಿತ್ಯದ ಅಧ್ಯಯನ ಮತ್ತು ಅವರ ಪ್ರವಾಸ ವಿನ್ಯಾಸದ ಕಥನಗಳ ಅಧ್ಯಯನ ಕುರಿತು ಆಳವಾಗಿ ಚರ್ಚಿಸಲಾಗಿದೆ.

ಪ್ರತಿಯೊಬ್ಬ ಮನುಷ್ಯನಲ್ಲೂ ಸಂಕುಚಿತ ಮನೋಭಾವ ಮನೆ ಮಾಡಿದ್ದು, ಇವರ ಪ್ರವಾಸ ಕಥನಗಳು ಆ ಸಂಕುಚಿತತೆಯನ್ನು ಕಳೆಯುವ ಹಾಗೂ ಕತ್ತಲನ್ನು ಹೋಗಲಾಡಿಸುವ 'ವಿಶ್ವ ಜ್ಞಾನ ದೀವಿಗೆ'ಗಳಾಗಿ ಕಾರ್ಯನಿರ್ವಹಿಸಿದೆ.

ನೇಮಿಚಂದ್ರ ಅವರು ಲಂಡನ್, ಫ್ರಾನ್ಸ್, ರೋಮ್, ದಕ್ಷಿಣ ಅಮೇರಿಕಾ ಮೊದಲಾದ ೨೦ಕ್ಕೂ ಹೆಚ್ಚು ದೇಶಗಳನ್ನು ಸುತ್ತಿಬಂದು ಎರಡು ಪ್ರವಾಸ ಸಾಹಿತ್ಯ ಕೃತಿಗಳನ್ನು ರಚನೆ ಮಾಡಿದ್ದು, ಒಂದಕ್ಕಿಂತ ಇನ್ನೊಂದು ಭಿನ್ನವಾಗಿ, ಹೊಸತನದಿಂದ ಕೂಡಿದೆ ಎಂಬುದನ್ನು ಚರ್ಚಿಸಲಾಗಿದೆ. ಅಲ್ಲದೆ ಪ್ರವಾಸ ಹಿನ್ನೆಲೆಯುಳ್ಳ ಇವರ ಕಾದಂಬರಿ ಮತ್ತು ಆಯ್ದು ಕೆಲವು ಪ್ರಮುಖ ಕತೆಗಳನ್ನು ಅಧ್ಯಯನದ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ.

ನೇಮಿಚಂದ್ರ ಅವರ ಎರಡು ಪ್ರವಾಸ ಕೃತಿಗಳಾದ "ಒಂದು ಕನಸಿನ ಪಯಣ" ಮತ್ತು "ಪೆರುವಿನ ಪವಿತ್ರ ಕಣಿವೆಯಲ್ಲಿ" ಕೃತಿಗಳ ಬಗ್ಗೆ ವಿವರಿಸಲಾಗಿದೆ. "ಒಂದು ಕನಸಿನ ಪಯಣ" ಪ್ರವಾಸ ಕಥನವು ನೇಮಿಚಂದ್ರ ಅವರು ಮಾಡಿದ ಲಂಡನ್, ಫ್ರಾನ್ಸ್, ರೋಮ್ ಮುಂತಾದ ಸ್ಥಳಗಳಿಗೆ ಭೇಟಿ ನೀಡಿದ ಪ್ರವಾಸ ಕಥನವಾಗಿದ್ದು, ಮಹಿಳಾ ಸಾಧಕಿಯರ ಜೀವನ ವಿಚಾರಗಳನ್ನು ತೌಲನಿಕವಾಗಿ ಚರ್ಚಿಸಲಾಗಿದೆ. ಇತಿಹಾಸ ಪುಟದಲ್ಲಿ ಮರೆಯಾಗುತ್ತಿರುವ ಮಹಿಳಾ ವಿಜ್ಞಾನಗಳ ಮೂಲವನ್ನು ಶೋಧಿಸಿ ಮುಂದಿನ ಮಹಿಳೆಯರಿಗೆ ಮಾದರಿಯಾಗುವಂತೆ ಅವರ ತತ್ವ ಆದರ್ಶಗಳನ್ನು ಚರ್ಚಿಸಲಾಗಿದೆ. ಪ್ರಸಿದ್ಧ ಸಾಹಿತಿಗಳ ಕೃತಿಯ ಹಿನ್ನೆಲೆಯಲ್ಲಿನ ಪರಿಸರವನ್ನು ಸಮಕಾಲೀನ ಸಂದರ್ಭದಲ್ಲಿ ಇಟ್ಟು ನೋಡಲಾಗಿದೆ.

"ಪೆರುವಿನ ಪವಿತ್ರ ಕಣಿವೆಯಲ್ಲಿ" ಎಂಬ ಪ್ರವಾಸ ಕಥನವು ನೇಮಿಚಂದ್ರ ಅವರು ಮಾಡಿದ ದಕ್ಷಿಣ ಅಮೆರಿಕಾದ ಕಥನವಾಗಿದ್ದು ಕಾದಂಬರಿ ತಂತ್ರದ ಹೊಸತನವನ್ನು ಮತ್ತು

ಈ ಕಥನದಲ್ಲಿ ಅಮೆರಿಕಾ ಮತ್ತು ಭಾರತಗಳ ನಡುವೆ ಮಾನವೀಯ ಮೌಲ್ಯ, ರಾಜಕೀಯ, ಧಾರ್ಮಿಕ ವಿಚಾರಗಳನ್ನು ತೌಲನಿಕವಾಗಿ ಚರ್ಚಿಸಲಾಗಿದೆ. ಭಾರತದಂತೆಯೇ ಪುರಾತನ ನಾಗರಿಕತೆ ಚರಿತ್ರೆಯನ್ನು ಹೊಂದಿರುವ ಪೆರು ದೇಶದ ಖಗೋಳಶಾಸ್ತ್ರ, ಭೂಗೋಳ, ಸಸ್ಯ, ಪ್ರಾಣಿ, ಖನಿಜ, ತಂತ್ರಜ್ಞಾನ, ಜ್ಯಾಮಿತಿಶಾಸ್ತ್ರ, ವಿಜ್ಞಾನ, ನಂಬಿಕೆ, ಸಂಪ್ರದಾಯ, ಭಾಷೆ, ಆಡಳಿತ, ಬಡತನ, ಕಲೆ, ಹಸಿವು, ಜ್ಞಾನ – ಹೀಗೆ ಸರ್ವತೋಮುಖ ವಿಷಯಗಳನ್ನು ಕುರಿತು ಚರ್ಚಿಸಲಾಗಿದೆ. ಪ್ರವಾಸಿಗನಿಗೆ ತನ್ನ ಬದುಕಿನಲ್ಲಿ ದಿನನಿತ್ಯದ ನೋಟಕ್ಕಿಂತ ಭಿನ್ನವಾದುದ್ದನ್ನು ಕಂಡಾಗ ಇನ್ನೊಬ್ಬರೊಂದಿಗೆ ಹಂಚಿಕೊಳ್ಳಬೇಕೆಂಬ ಮನೋತ್ಕಟತೆಯಿಂದ ಪ್ರಜ್ಞಾಪೂರ್ವಕವಾಗಿ ಪ್ರತಿಪಾದಿಸಲಾಗಿದೆ. ಈ ಹಿನ್ನೆಲೆಯಲ್ಲಿ ಒಂದೊಂದು ಕೃತಿಯನ್ನು ಪರಸ್ಪರ ಹೋಲಿಸುತ್ತ ವಸ್ತುನಿಷ್ಠವಾಗಿ ಪರಿಶೀಲಿಸಲಾಗಿದೆ.

ನೇಮಿಚಂದ್ರ ಅವರ ಕಾದಂಬರಿ ಮತ್ತು ಕತೆಗಳಲ್ಲಿ ತೆರೆದುಕೊಳ್ಳುವ ಸಾಮಾನ್ಯ ಜೀವಿಗಳ ಜೀವನ ದರ್ಶನವನ್ನು ಕುರಿತು ವಿಶ್ಲೇಷಿಸಲಾಗಿದೆ. ಆಯಾ ಕಾಲದ ಬದುಕಿನ ಆಲೋಚನಾ ಕ್ರಮ ತಿಳುವಳಿಕೆಗಳು ಸಮಾಜದಲ್ಲಿ ಉಂಟಾಗುವ ವ್ಯತ್ಯಾಸ – ವೈರುಧ್ಧ್ಯಗಳ ಬಗ್ಗೆ, ಯುದ್ಧಕ್ಕೆ ಬುನಾದಿ ಆಗುವುದರ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಗಿದೆ. ಹೊಸ ಸಂಶೋಧನೆಗಳ ಮೂಲಕ ಹೊಸ ವಿಷಯಗಳನ್ನು ಅರಿತು ಜ್ಞಾನಶಾಖೆಯನ್ನು ವೃದ್ಧಿಸುತ್ತಾ ವಿಸ್ತರಿಸಲಾಗಿದೆ. ಅದರ ಅಭ್ಯಾಸದಿಂದ ಇವುಗಳೊಳಗಿನ ಮಾನವ ಸ್ವಭಾವಗಳು ಚಲನವಲನಗಳು, ಅವರ ಇನ್ನಿತರ ಸಂಸ್ಕೃತಿಗಳನ್ನು ವರ್ತಮಾನದ ನೆಲೆಯಲ್ಲಿ ಇಟ್ಟು ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ನೇಮಿಚಂದ್ರ ಅವರು ತಮ್ಮ ಕನ್ನಡ ಸಾಹಿತ್ಯಕ್ಕೆ ನೀಡಿದ ಪ್ರವಾಸ ಸಾಹಿತ್ಯದಲ್ಲಿನ ವಿಶಿಷ್ಟ ಅಂಶಗಳನ್ನು ಗುರುತಿಸಿ, ಅವರ ಸಾಹಿತ್ಯಕ್ಕೆ ಇಂದು ನೆಲೆ–ಬೆಲೆ ಇರುವುದನ್ನು ತೋರಿಸಲಾಗಿದೆ. ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಕನ್ನಡಿಯಲ್ಲಿ ತನ್ನ ತಾನು ನೋಡಿಕೊಳ್ಳುವ ಕ್ರಿಯೆ ಕೂಡ ಆಗಿದ್ದು, ಈ ಮೂಲಕ ಸ್ವಮೌಲ್ಯ ಮಾಪನವು ಪ್ರವಾಸ ಕಥನಗಳಲ್ಲಿರುವ ಮಹತ್ವವಾದ ಸಾಂಸ್ಕೃತಿಕ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಜಾತಿ ಮತ ಭಾಷೆ ಮತ್ತು ದೇಶಗಳ ಹೆಸರಲ್ಲಿ ನಾವು ಕಟ್ಟಿಕೊಂಡಿರುವ ಸಣ್ಣತನಗಳನ್ನು ಕಳೆದುಹಾಕಿ ನೇಮಿಚಂದ್ರ ಅವರ ಜೀವನ ದರ್ಶನಗಳ ಬಹುಮುಖಗಳನ್ನು ಶೋಧಿಸುತ್ತಾ ಇವುಗಳಿಂದ ಹೊರಹೊಮ್ಮುವ ಜಾತ್ಯಾತೀತವಾದುದು ಮತ್ತು ದಾರ್ಶನಿಕವಾದುದನ್ನು ವಸ್ತುನಿಷ್ಠನೆಲೆಯಲ್ಲಿ ಚರ್ಚಿಸಲಾಗಿದೆ.

ಕೊನೆಯದಾಗಿ, ನೇಮಿಚಂದ್ರ ಅವರ ಪ್ರವಾಸ ಕೃತಿಯಲ್ಲಿ ಕೆಲವು ಮಿತಿಯನ್ನು ನೋಡಿದಾಗ ರಾಜಕೀಯ ವಿಶ್ಲೇಷಣೆಯಿಂದ ಪ್ರೇರಿತವಾದುದು, ಬಹುವಾಗಿ ತುಂಬಿಹೋಗಿದೆ

ಎಂದೆನ್ನಿಸುತ್ತದೆ. ಆದರೆ ಅದರಿಂದ ಆಚೆಗೆ ಸಾಮಾನ್ಯದಲ್ಲಿ ಅಸಾಮಾನ್ಯತೆಯನ್ನು ಗುರುತಿಸುವ ಪರಿ ವಿಶೇಷವಾದುದು ಮತ್ತು ಮೌಲಿಕವಾದುದ್ದನ್ನು ಕಾಣಬಹುದು. ಇವರ 'ಯಾವುದೇ ಆಡಂಬರ, ವೈಭವಕ್ಕೆ ಇಚ್ಛಿಸದೇ ವಾಸ್ತವವನ್ನು ವರ್ತಮಾನದ ನೆಲೆಯಲ್ಲಿ ಪ್ರತಿಪಾದಿಸುತ್ತ ತಮ್ಮ ಕೃತಿಗಳ ಮೂಲಕ ಭವಿಷ್ಯದ ಬದುಕಿಗೆ ಭದ್ರ ಬುನಾದಿಯನ್ನು ರೂಪಿಸುವ ಕೈದೀವಿಗೆಯಾಗಿದೆ.

# ಕನ್ನಡ ವಿಶ್ವವಿದ್ಯಾಲಯ ಹಂಪಿ

"ವೈಕಂ ಮಹಮ್ಮದ್ ಬಷೀರ್ ರವರ ಆಯ್ದ ಕತೆಗಳಲ್ಲಿ ಸಾಮಾಜಿಕತೆ ಮತ್ತು ಸಂಘರ್ಷ"(ಅನುವಾದಗಳನ್ನು ಅನುಲಕ್ಷಿಸಿ)


ದಿವ್ಯ ಪಿ.ಸಿ
ಸಂಶೋಧನಾ ವಿದ್ಯಾರ್ಥಿನಿ
ನೋಂದಣಿ ಸಂಖ್ಯೆ : 141001030070


ಮಾರ್ಗದರ್ಶಕರು


ಡಾ॥ ಬಿ.ಎ ಅನ್ನದಾನೇಶ್
ಮುಖ್ಯಸ್ಥರು,ಕನ್ನಡ ವಿಭಾಗ
ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ
ಮಹಿಳಾ ಪದವಿ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು–12



ಕಾವ್ಯಮಂಡಲ
ಬೆಂಗಳೂರು 2014–15

## ಪರಿವಿಡಿ

ಪುಟ ಸಂಖ್ಯೆ

ಅಧ್ಯಾಯ : 1 ಪೀಠಿಕೆ, ಅಧ್ಯಯದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಮಹತ್ವ 1–13

ಅಧ್ಯಾಯ : 2 ವೈಕಂ ಬಷೀರ್‌ರವರ ಕತೆಗಳಲ್ಲಿ ಸ್ತ್ರೀಸಂವೇದನೆಯ ನೆಲೆಗಳು. 14–32

ಅಧ್ಯಾಯ : 3 ವೈಕಂ ಮಹಮ್ಮದ್ ಬಷೀರ್‌ರವರ ಕತೆಗಳಲ್ಲಿನ ಮಾನವೀಯ ಮೌಲ್ಯಗಳ ಅನಾವರಣ ಹಾಗೂ ಧಾರ್ಮಿಕ ಸಂಘರ್ಷಗಳು. 33–50

ಅಧ್ಯಾಯ : 4 ವೈಕಂ ಮಹಮ್ಮದ್ ಬಷೀರ್‌ರವರ ಕತೆಗಳಲ್ಲಿ ಸಾಮಾಜಿಕ ಬದಲಾವಣೆಯ ದೃಷ್ಟಿಕೋನ 51–67

ಅಧ್ಯಾಯ : 5 ವೈಕಂ ಮಹಮ್ಮದ್ ಬಷೀರ್ ಕತೆಗಳಲ್ಲಿನ ಪಾತ್ರ ಚಿತ್ರಣ 68–74

ಅಧ್ಯಾಯ : 6 ವೈಕಂ ಮಹಮ್ಮದ್ ಬಷೀರ್ ಕತೆಗಳಲ್ಲಿನ ಭಾಷೆ, ತಂತ್ರ ,ವಸ್ತುವನ್ನ ಕುರಿತ ಅಧ್ಯಯನ. 75–79

ಅಧ್ಯಾಯ : 7 ಸಮಾರೋಪ. 80–83

ಪರಾಮರ್ಶನ ಗ್ರಂಥಗಳು 84–85

# ಅಧ್ಯಾಯ –1

# ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

# ಹಾಗೂ ಅಧ್ಯಯನದ ಮಹತ್ವ.

# ಕೃತಿಕಾರನ ಪರಿಚಯ.

**ಪೀಠಿಕೆ :**

ದೇಸಿಸಾಹಿತ್ಯ ಚಳುವಳಿ, ವಚನ, ಕೀರ್ತನೆ, ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದ ಪರಿಣಾಮವಾಗಿ ಭಾರತದ ಬೇರೆ ಬೇರೆ ಭಾಷಾ ಸಾಹಿತ್ಯಗಳಲ್ಲಿ ಹೊಸ – ಹೊಸ ಪ್ರಕಾರಗಳು ಮೂಡಿಬಂದ ಅಂಶ ಸರ್ವಕಾಲಿಕವಾದದ್ದು. ಭಾಷೆಯಲ್ಲಿಯೂ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರ ಆವಿರ್ಭವಿಸಿದುದು ಇದೇ ರೀತಿಯಲ್ಲಿಯೇ.

"ವೈಕಂ ಮಹಮ್ಮದ್ ಬಷೀರ್" ಅವರು ಮಲೆಯಾಳಂನ ಪ್ರಸಿದ್ಧ ಲೇಖಕನಾಗಿ ಕಂಡು ಬರುತ್ತಾರೆ. ಇವರ ಬರಹದ ಶೈಲಿ, ಧಾಟಿ, ವಸ್ತು ವೈವಿಧ್ಯತೆ, ಪಾತ್ರಗಳ ನೈಜತೆ ಮುಂತಾದವುಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತೋರಿಸಿಕೊಡುವುದರ ಮೂಲಕ ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿದ ಬಷೀರ್ ಈ ಶತಮಾನ ಕಂಡ ವಿಸ್ಮಯ ಸೃಷ್ಟಿಕರ್ತ.

1935–1950 ರ ಕಾಲವನ್ನು ಮಲೆಯಾಳಂನ ಸಣ್ಣಕಥೆಗಳ ಸುವರ್ಣಯುಗವೆಂದು ಕರೆಯುತ್ತಾರೆ. ಹಾಲಿ ಇದ್ದ ಸಾಮಾಜಿಕ ಜೀವನದ ಪತನವೂ, ದಾರಿದ್ರ್ಯವೂ, ಕಷ್ಟನಷ್ಟಗಳೂ, ಹೃದಯಭೇದಕವಾದ ಶೋಷಣೆಯೂ, ಸ್ವಾತಂತ್ರ್ಯವಾಂಛೆಯೂ ಎಲ್ಲವೂ ವೈಕಂ ಮಹಮ್ಮದ್ ರವರ ಕಥೆಗಳಲ್ಲಿ ಸೇರಿ ಓದುಗರನ್ನು ಚಿಂತನೆಗೆ ಒಳಪಡಿಸಿವೆ. ಒಂದು ಸಮುದಾಯದಲ್ಲಿನ ಸಾಮಾಜಿಕ ಸ್ಥಿತಿಗತಿ ರೂಪುರೇಷೆಗಳನ್ನು ಕುರಿತಂತೆ ಇವರ ಕತೆಗಳು ರೂಪುಗೊಂಡಿವೆ. *1

ಬೇರೆ ಭಾಷೆಯ ಸಾಹಿತ್ಯವನ್ನು ಓದಬೇಕೆಂಬ ಅನಿಸಿಕೆಯಿಂದ ಹಾಗೂ ಬದುಕನ್ನು ನೋಡುವ ರೀತಿ ಮತ್ತು ಆಸಕ್ತಿ ಮೂಡಿಸುವಂತಹ ವಿಚಾರಧಾರೆ ವೈಕಂ ರವರ ಕಥೆಗಳಲ್ಲಿ ನನಗೆ ಕಂಡುಬಂದಿತು. ಆ ಕಾರಣದಿಂದಾಗಿ ನಾನು ಇವರ ಕತೆಗಳಿಗೆ ಸಂಬಂಧಿಸಿದಂತೆ ಅಧ್ಯಯನವನ್ನು ಮಾಡುವ ನಿರ್ಣಯ ಮಾಡಿದ್ದೇನೆ.

ಇವರ ಬರಹದ ಶೈಲಿ, ತಂತ್ರಗಾರಿಕೆ, ವಸ್ತುಸ್ಥಿತಿಯನ್ನು ಯಥಾವತ್ತಾಗಿ ಹೇಳುವಂತಹ ಮನೋಧರ್ಮ, ಮಾನವೀಯ ನೆಲೆಗಳು ಹೃದಯ ಮಿಡಿಯುತ್ತವೆ. ಹೇಳಬೇಕಾಗಿರುವ ಸಂಗತಿಯನ್ನು ನೇರವಾಗಿ ಸೂಕ್ಷ್ಮವಾಗಿ ಹೇಳುವಂತಹ ಗುಣ, ಶಕ್ತಿ ಇವರ ಬರಹಕ್ಕಿದೆ.

ಮನಮುಟ್ಟುವ, ಅನುಕಂಪ, ಸಹಾನುಭೂತಿ, ಹಾಗೂ ನೈಜ ಅನುಭವದಿಂದ ಕತೆಯನ್ನು ಕಟ್ಟುವಂತಹ ತಂತ್ರಗಾರಿಕೆ ಇವರಲ್ಲಿದೆ.

ಇವರ ಕತೆಗಳಲ್ಲಿ ಶ್ರೀ ಸಾಮಾನ್ಯನ ಬದುಕನ್ನು ಕುರಿತಂತೆ ಕಳವಳ,ಪ್ರೀತಿಯ ವಿಡಂಬನೆ, ಸಮಾಜದ ತಳ ಸಮುದಾಯದ, ಎಲ್ಲಾ ರೀತಿಯ ವೃತ್ತಿಯ ಜನರ ಆಚಾರ, ವಿಚಾರ, ಸ್ಥಿತಿಯನ್ನು ಕುರಿತು ಹೇಳಿರುವುದು ನನ್ನ ಅಧ್ಯಯನದ ಆಸಕ್ತಿಗೆ ಮತ್ತಷ್ಟು ಉತ್ಸಾಹ ಮೂಡಿದಂತಾಗಿದೆ.

ಪ್ರಸ್ತುತ ಸಮಾಜಕ್ಕೆ ಹತ್ತಿರವಾದಂತಹ ಕತೆಗಳು ಅನೇಕ ಆಯಾಮಗಳು ದೃಷ್ಟಿಕೋನಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಇವರ ಕತೆ ಮತ್ತು ಕಾದಂಬರಿಯ ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚಿನ ಓದುಗರನ್ನು ಸೆಳೆಯುತ್ತದೆ. ಅಲ್ಲದೆ ಅವರು ತಮ್ಮ ಕತೆಗಳಲ್ಲಿ ತಂದಿರುವ ಪಾತ್ರಗಳು ಓದುಗರ ಅನುಭವಕ್ಕೆ ಹತ್ತಿರವಾಗಿ ಅವರನ್ನು ಚಿಂತನೆಗೆ ಈಡು ಮಾಡುತ್ತದೆ.

**ಭಾಷಾಂತರದ ಸಾಂಸ್ಕೃತಿಕ ನೆಲೆಗಳು**

ಆಧುನಿಕ ಯುಗದ ಶೈಕ್ಷಣಿಕ ಜ್ಞಾನ ಶಿಸ್ತುಗಳಲ್ಲಿ ಭಾಷಾಂತರವು ಕೇಂದ್ರಸ್ಥಾನ ಪಡೆದಿದೆ. ಇತ್ತೀಚೆಗೆ ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಾರಂಭವಾಗಿರುವ ಭಾಷಾಂತರ ಅಧ್ಯಯನ ವಿಭಾಗಗಳೇ ಇದಕ್ಕೆ ಸ್ಪಷ್ಟ ಸೂಚನೆಗಳಾಗಿವೆ. ಪ್ರತಿವರ್ಷವೂ ಭಾಷಾಂತರ ಅಧ್ಯಯನಗಳಿಗೆ ಸಂಬಂಧಿಸಿದಂತೆ ಪ್ರಪಂಚದಾದ್ಯಂತ ಪ್ರಕಟವಾಗುತ್ತಿರುವ ಗ್ರಂಥಗಳು ಹಾಗೂ ನಿಯತಕಾಲಿಕೆಗಳು ಇದಕ್ಕೆ ಸಾಕ್ಷಿಯಾಗಿವೆ. ಅದರಲ್ಲೂ ವಿಶೇಷವಾಗಿ ಇಂಡಿಯಾದ ಬಹುಭಾಷೆ ಮತ್ತು ಬಹುಸಂಸ್ಕೃತಿಗಳ ಸಂದರ್ಭದಲ್ಲಿ ಭಾಷಾಂತರವು ಅನೇಕ ಸಮಸ್ಯೆಗಳಿಗೂ ಕೀಲಿಕೈಯಾಗಿದೆ.

ಇಂದು ಭಾಷಾಂತರ ಅನ್ನುವ ಪ್ರಕ್ರಿಯೆ ಬರೀ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಸಾಹಿತ್ಯೇತರ ಜ್ಞಾನ ಶಿಸ್ತುಗಳಾದ ಪತ್ರಿಕೋದ್ಯಮ, ಧರ್ಮ, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಿಗೂ ವ್ಯಾಪಿಸಿದೆ. ಪ್ರತಿದಿನವೂ ಭಾಷಾಂತರವು ವೈವಿಧ್ಯಮಯವಾಗಿ, ಅಪರಿಮಿತವಾಗಿ ಬೆಳೆಯುತ್ತಿದೆ. ಇಂದು ಇಂಡಿಯಾದಲ್ಲಿ ಅನೇಕ ವಿದ್ವಾಂಸರು ಭಾಷಾಂತರವನ್ನು ತಮ್ಮ ಬದುಕಿನ ಒಂದು ಬಹುಮುಖ್ಯ ಅಂಗವನ್ನಾಗಿ ಸ್ವೀಕರಿಸಿದ್ದಾರೆ. ಇದು ಅನೇಕ ಲೇಖಕರಿಗೆ ಪ್ರೋತ್ಸಾಹದಾಯಕವಾದ ಒಂದು ಜೀವನ ವೃತ್ತಿಯೂ ಆಗಿದೆ.

ಕೆಲವು ದಶಕಗಳ ಹಿಂದೆ ಭಾಷಾಂತರ ಎಂದರೆ, ಶುದ್ಧ ಸಾಹಿತ್ಯದ ಭಾಷಾಂತರ ಎಂಬ ಅರ್ಥದಲ್ಲಿ ಬಳಕೆಯಲ್ಲಿತ್ತು. ಜನತೆಯನ್ನು ಅಕ್ಷರಸ್ಥರನ್ನಾಗಿ ಮಾಡುವುದಕ್ಕಾಗಿ ಇದು ಒಂದು ಹವ್ಯಾಸ ಅಥವಾ ಕಾಲ ತುಂಬಿಸುವ ಒಂದು ಸಾಧನ ಎಂಬ ಅರ್ಥ ಇದಕ್ಕೆ ಇತ್ತು. ಅತ್ಯುತ್ತಮ ಭಾಷಾಂತರಕಾರರು ನಿರ್ಮಾಣವಾಗಬೇಕಾಗಿದೆ. ಯಾವುದೇ ಮಧ್ಯವರ್ತಿ ಭಾಷೆಯ ಮೂಲಕ ಭಾಷಾಂತರ ಮಾಡುವ ಬದಲು ಮೂಲ ಭಾಷೆಯಿಂದ ನೇರವಾಗಿ ಉದ್ದಿಷ್ಟ ಭಾಷೆಗೆ ಭಾಷಾಂತರ ಮಾಡು ಭಾಷಾಂತರಕಾರರು ನಿರ್ಮಾಣವಾಗಬೇಕಾಗಿದೆ ಎಂಬುದು ಇಂದಿನ ವಿದ್ವಾಂಸರ ಅಭಿಪ್ರಾಯ.

ಪ್ರಾಚೀನ ಹಾಗೂ ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಭಾಷಾಂತರ ಒಂದು ಅನುಸೃಷ್ಟಿಯ ಪ್ರಕ್ರಿಯೆಯಾಗಿತ್ತು. ಭಾಷೆ ಹಾಗೂ ಸಂಸ್ಕೃತಿಗಳ ನಡುವೆ ನಡೆಯುವ ಒಂದು ಭಾಷಿಕವಾದ, ಸಾಹಿತ್ಯಕವಾದ ಪ್ರಕ್ರಿಯೆ ಆಗಿತ್ತು. ವಸಾಹತುಶಾಹಿ ಸಂದರ್ಭಕ್ಕೆ ಅದು ರಾಜಕೀಯ ನೆಲೆಯವರೆಗೂ ವಿಸ್ತರಿಸಿತ್ತು. ಇಂದು ಜಾಗತೀಕರಣದ ಸಂದರ್ಭದಲ್ಲಿ ಭಾಷಾಂತರದ ಪರಿಕಲ್ಪನೆ ಎಲ್ಲ ವಲಯಗಳಿಗೂ ಹಬ್ಬುತ್ತಿದೆ.

ಭಾಷಾಂತರ ಎಂದರೆ ಕೇವಲ ಒಂದು ಭಾಷೆಯಿಂದ ಇನ್ನೊಂದು. ಭಾಷೆಗೆ ನಡೆಯುವ ಅರ್ಥಾಂತರ ಎಂದಲ್ಲ. ಅದು ಹೊಸ ಸೃಷ್ಟಿ ಕೂಡ ಅಗಿರುತ್ತದೆ. ಭಾಷಾಂತರದ ಅರ್ಥವ್ಯಾಪ್ತಿ ವಿಸ್ತರಿಸಿರುತ್ತದೆ ಮತ್ತು ವಿಸ್ತರಿಸಬೇಕಾಗುತ್ತದೆ. ಕಾವ್ಯ, ಕಥೆ, ಕಾದಂಬರಿ, ನಾಟಕ ಭಾಷಾಂತರ ಮಾಡುವಾಗ ಎಲ್ಲವೂ ಏಕರೀತಿಯಲ್ಲಿ ಇರುವುದಿಲ್ಲ. *2

ಕನ್ನಡ ನವೋದಯ ಕಾಲದ ಭಾಷಾಂತರ ಸೃಜನಶೀಲವಾದದ್ದು, ಎರಡು ಭಾಷೆಗಳು ಎರಡು ಸಂಸ್ಕೃತಿಗಳ ಪ್ರಜ್ಞೆಗಳು ಇಲ್ಲಿ ಮುಖಾಮುಖಿಯಾದವು. ಅವುಗಳ ನಡುವೆ ಸಂಘರ್ಷ, ಸಾಮರಸ್ಯ, ಏರ್ಪಟ್ಟಿತು.

ಹಳಗನ್ನಡಕ್ಕೆ ಸಂಸ್ಕೃತ ಪ್ರೇರಕ, ಪೋಷಕ, ಹೊಸಗನ್ನಡಕ್ಕೆ ಇಂಗ್ಲೀಷ್ ಪ್ರೇರಕ ಪೋಷಕ ಎಂಬ ವಿದ್ವಾಂಸರ ಅಭಿಪ್ರಾಯಗಳು ಇಂದು ಮರುಚಿಂತನೆಗೆ ಒಳಗಾಗುತ್ತಿವೆ 19ನೇಯ ಮತ್ತು 20ನೇ ಶತಮಾನದ ಅಡಿಯಲ್ಲಿ ಭಾಷಾಂತರ ಹೆಚ್ಚಾಗಿ ನಡೆದದ್ದು ರೂಪಾಂತರ ಅಳವಡಿಕೆಗಳ ಮೂಲಕವೇ.

ಭಾಷಾಂತರ ಎನ್ನುವುದು ನಮ್ಮ ದಿನನಿತ್ಯದ ಕ್ರಿಯೆಯಾಗಿರುವುದರಿಂದ ಪ್ರತಿಯೊಬ್ಬರೂ ಅದನ್ನೇ ಕುರಿತ ಅವ್ಯಕ್ತ  ಅಭಿಪ್ರಾಯವನ್ನು ಹೊಂದಿರುತ್ತರೆ. ಲಿಖಿತ ಭಾಷಾಂತರ ನಮ್ಮ ದಿನನಿತ್ಯದ ಕ್ರಿಯೆಯಲ್ಲದಿದ್ದರೂ ಮೌಖಿಕ ಭಾಷಾಂತರದಲ್ಲಿ ನಾವು ಸದಾ ತೊಡಗಿರುತ್ತೇವೆ. ಭಾಷಾಂತರ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅಥವಾ ಭಾಷೆಯೊಳಗಿನ ವಿವಿಧ ಪ್ರಭೇಧಗಳ ನಡುವೆ, ವಿವಿಧರೂಪ (ಆಕೃತಿ)ಗಳ ನಡುವೆ ನಡೆಯುವ ಕ್ರಿಯೆಯಾಗಿರಬಹುದು.

**ಭಾಷಾಂತರದಲ್ಲಿ** ಚಲನಾ ಕ್ರಿಯೆಯು ಬಹಳ ಪ್ರಮುಖವಾದದ್ದು. ಭಾಷಾಂತರದ ಸಾಮಾನ್ಯ ಬಳಕೆಯಲ್ಲಿ ಅರ್ಥವು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಚಲಿಸುತ್ತದೆ. ಇದನ್ನು ರೋಮನ್ "ಯಾಕೊಬ್‌ಸನ್‌ನ ಪರಿಭಾಷೆಯಲ್ಲಿ ಹೇಳುವುದಾದರೆ, ಇಂಟರ್ ಟ್ರಾನ್ಸ್‌ಲೇಷನ್ ಎಂದಾಗುತ್ತದೆ. ಇದು ನಾವು ಭಾಷಾಂತರವೆಂದು ಗುರುತಿಸುವ ಸಾಮಾನ್ಯ ಕ್ರಿಯೆ ಹಾಗೆಯೇ ಒಂದೇ ಭಾಷೆಯಲ್ಲಿ ಅರ್ಥವು ತನ್ನ ಈಗಿನ ರೂಪವನ್ನು ತ್ಯಜಿಸಿ ಮತ್ತೊಂದು ರೂಪವನ್ನು ಧರಿಸುವುದನ್ನೂ ನಾವು ಭಾಷಾಂತರವೆಂದು ಗುರುತಿಸುತ್ತೇವೆ.

ಉದಾ: ಪಂಪನ ವಿಕ್ರಮಾರ್ಜುನ ವಿಜಯದ ಗದ್ಯಾನುವಾದ ಅಥವಾ ಸಣ್ಣ ಕಥೆಯೊಂದು ನಾಟಕ ಪಠ್ಯವಾಗಿ ರೂಪುಗೊಳ್ಳುವುದು. ಇದನ್ನು ಯೂಕೋಬ್‌ಸನ್ ಆಂತರಿಕ ಭಾಷಾಂತರ (ಇಂಟ್ರಾಟ್ರಾನ್ಸ್‌ಲೇಷನ್) ಎಂದು ಕರೆಯುತ್ತಾರೆ.

ಇವೆಲ್ಲವುಗಳಿಗೆ ಸಾಮಾನ್ಯವಾದದ್ದು ಅರ್ಥ ಚಲನೆ. ಚಲನೆಯನ್ನು ಬದಲಾವಣೆ ಎಂದು ನೋಡಬಹುದು. ಈ ಮೇಲೆ ವಿವರಿಸಿದ ಮೂರು ರೀತಿಯ ಭಾಷಾಂತರದಲ್ಲಿ ಅಥವಾ ತಾನು ಧರಿಸಿದ್ದ ಭಾಷಿಕ ಕವಚವನ್ನು ಅಥವಾ ರೂಪವನ್ನು ಅಥವಾ ಸಂಜ್ಞಾ ವ್ಯವಸ್ಥೆಯನ್ನು ಬಿಟ್ಟು ಬೇರೊಂದನ್ನು ಧರಿಸುತ್ತದೆ. ಇದನ್ನು ಬದಲಾವಣೆ ಎಂದು ಗುರುತಿಸಲು ಸಾಧ್ಯವಿದೆ. ಇಲ್ಲಿ ಬದಲಾವಣೆ ಕೇವಲ ಭಾಷೆ, ರೂಪ ಸಂಜ್ಞಾವ್ಯವಸ್ಥೆಗೆ ಸಂಬಂದಿಸಿದ್ದಲ್ಲ. ಏಕೆಂದರೆ ಭಾಷೆ, ರೂಪ ಮತ್ತು ಸಂಜ್ಞಾವ್ಯವಸ್ಥೆಗಳು ಕೇವಲ ಅರ್ಥದ ಧಾರಕಗಳಲ್ಲ. ಅವು ಅರ್ಥವನ್ನು ರೂಪಿಸುತ್ತವೆ. ಒಂದು ನಿರ್ದಿಷ್ಟ ಭಾಷೆ, ರೂಪ ಮತ್ತು ಸಂಜ್ಞಾವ್ಯವಸ್ಥೆಯನ್ನು ಆಧರಿಸಿದಾಗ ಅದು ಮರುರೂಪವನ್ನು ಪಡೆಯುತ್ತದೆ. ಇದರರ್ಥ ಭಾಷೆ ರೂಪ ಮತ್ತು ಸಂಜ್ಞಾ ವ್ಯವಸ್ಥೆಗಳು ಪಾರದರ್ಶಕ ವಾಹಕಗಳಲ್ಲ. ಬದಲಿಗೆ ಅವು ಕ್ರಿಯಾಶೀಲ ಮಾಧ್ಯಮಗಳಾಗಿರುವುದರಿಂದ ಅವು ಅರ್ಥವನ್ನು ರೂಪಿಸುತ್ತವೆ. ಅದನ್ನು ಕ್ರಿಯಾಶೀಲ ಮಾಧ್ಯಮಗಳಾಗಿರುವುದರಿಂದ ಅವು ಅರ್ಥವನ್ನು ರೂಪಿಸುತ್ತವೆ, ಅದನ್ನು ಕ್ರಿಯಾಶೀಲವಾಗಿ ಬದಲಾಯಿಸುತ್ತವೆ. ಅವುಗಳು ಅರ್ಥವನ್ನು ಒಂದು ಕಾಲ, ದೇಶದ ಮತ್ತೊಂದು ಕಾಲ ದೇಶಕ್ಕೆ ರವಾನಿಸುತ್ತವೆ. ರೂಪ / ಆಕೃತಿಗೂ ಅರ್ಥ/ ಆಶಯಕ್ಕೂ ಅವಿನಾಭಾವ ಸಂಬಂಧವಿದೆ. ಇವರೆಡರಲ್ಲಿ ಒಂದು ಬದಲಾದಾಗ ಮತ್ತೊಂದು ಬದಲಾಗುವುದು ಅನಿವಾರ್ಯವಾಗುತ್ತದೆ. ಭಾಷಾಂತರದಲ್ಲಿ ರೂಪ, ಭಾಷೆ / ಮತ್ತು ಸಂಜ್ಞಾವ್ಯವಸ್ಥೆ ಬದಲಾಗುವುದರಿಂದ ಅರ್ಥದಲ್ಲೂ / ಆಶಯದಲ್ಲೂ ಬದಲಾವಣೆ ಅನಿವಾರ್ಯ ಎನ್ನುವುದನ್ನೇ ಇತ್ತೀಚಿನ ಸಿದ್ಧಾಂತಗಳು ಪ್ರತಿಪಾದಿಸುತ್ತವೆ. ಈ ಹಿಂದೆ ಬದಲಾಗದಿರುವುದು ಭಾಷಾಂತರ ಎಂದು ಭಾವಿಸಲಾಗುತ್ತಿತ್ತು. ಎಂದು ಹೇಳುವುದು ಸೂಕ್ತ ಎನ್ನಿಸುತ್ತದೆ. ಈ ರೀತಿಯಾಗಿ ಭಾಷಾಂತರವನ್ನು ಪರಿಭಾವಿಸುವುದರಲ್ಲಿ ಆಗಿರುವ ಬದಲಾವಣೆಯ ಪರಿಣಾಮಗಳನ್ನು ಮುಂದೆ ಹೇಳಲಿದ್ದೇನೆ.

ಈ ಅನಿವಾರ್ಯತೆಯಿಂದ ಮಾತ್ರ ಭಾಷಾಂತರಗಳು ಬದಲಾಗುತ್ತವೇ ಎಂದೇನಲ್ಲ. ಇತರ ಕಾರಣಗಳಿಗಾಗಿಯೂ ಬದಲಾವಣೆ ಉಂಟಾಗಬಹದು. ಅವುಗಳನ್ನು ಸ್ಥೂಲವಾಗಿ ಇಲ್ಲಿ ಪಟ್ಟಿ ಮಾಡುತ್ತೇನೆ.

1. ವಿಭಿನ್ನ ಭಾಷೆ, ರೂಪ, ಸಂಜ್ಞಾವ್ಯವಸ್ಥೆಗಳ ನಡುವಿನ ವ್ಯತ್ಯಾಸಗಳು
2. ಅರ್ಥವು ಕೇವಲ ತನ್ನ ಹೊಸ ರೂಪವನ್ನು ಧರಿಸುವುದಷ್ಟೆ ಅಲ್ಲದೆ ಹೊಸ ಕಾಲ, ದೇಶವನ್ನೆ ಧರಿಸವುದುರಿಂದ / ಪ್ರವೇಶಿಸಿರುವುದರಿಂದಲೂ ಕಾಲ, ದೇಶಗಳು, ಅದರ ರೂಪ / ಆಳ್ವಿಕೆಯನ್ನು

ನಿರ್ಧರಿಸುತ್ತದೆ ಹೊಸ ಕಾಲ, ದೇಶವನ್ನೂ ಧರಿಸುವುದರಿಂದ/ಪ್ರವೇಶಿಸಿರುವುದರಿಂದಲೂ ಕಾಲ, ದೇಶಗಳು ಅದರ ರೂಪ/ ಆಕೃತಿಯನ್ನು ನಿರ್ಧರಿಸುತ್ತವೆ.

3. ಭಾಷಾಂತರ ಪ್ರಕ್ರಿಯೆಯಲ್ಲಿ ಕೇವಲ ವಿಭಿನ್ನ ಕಾಲ, ದೇಶ ಮತ್ತು ಭಾಷೆ, ರೂಪ ಸಂಜ್ಞಾವ್ಯವಸ್ಥೆಗಳಲ್ಲದೆ ನಡುವೆ ಸಕ್ರಿಯಾಶೀಲ ಏಜೆಂಟ್ ಸಹ ಕೆಲಸ ಮಾಢುತ್ತಿರುತ್ತದೆ. ಭಾಷಾಂತರಕಾರ/ರ್ತಿ ಯಂತ್ರ / ಕಂಪ್ಯೂಟರ್ ಭಾಷಾಂತರಗಳನ್ನು ಹೊರತುಪಡಿಸಿದರೆ ಉಳಿದ ಭಾಷಾಂತರಗಳಲ್ಲಿ ಈ ಏಜೆಂಟ್ ಮನುಷ್ಯ ಜೀವಿಯಾಗಿರುವುದರಿಂದ ಮತ್ತು ಸಾಮಾಜಿಕ ಜೀವಿಯಾಗಿರುವುದರಿಂದ ಅವರ ಮನಸ್ಸನ್ನು, ವಿಚಾರವನ್ನು, ಕ್ರಿಯೆಯನ್ನು ಪ್ರಭಾವಿಸುವ ಎಲ್ಲಾ ಅಂಶಗಳು ಅವರು ನಡೆಸುವ ಭಾಷಾಂತರವನ್ನು ಪ್ರಭಾವಿಸುವ ಸಾದ್ಯತೆ ಇರುತ್ತದೆ. ಆದ್ದರಿಂದ ಭಾಷಾಂತರವೆಂದರೆ ಚಲನೆ, ಬದಲಾವಣೆ ಎಂದೇ ನಾವು ಭಾವಿಸಬೇಕಾಗುತ್ತದೆ. *2

## ಭಾಷಾಂತರ ಅಧ್ಯಯನ :

ಭಾಷಾಂತರದ ಅಧ್ಯಯನ ಎನ್ನುವುದು ಒಂದು ಹೊಸ ಅಧ್ಯಯನ ಕ್ಷೇತ್ರ ಭಾಷಾಂತರ ಕುರಿತು ಜ್ಞಾನವನ್ನೇ ಇದು ಒಳಗೊಂಡಿರುತ್ತದೆ. ಭಾಷಾಂತರ ಎನ್ನುವುದು ಭಾಷೆಗಳಷ್ಟೇ ಹಳೆಯ ಕ್ರಿಯೆಯಾಗಿರುವುದರಿಂದ ಆ ಕ್ರಿಯೆಯನ್ನು ಕುರಿತ ಜ್ಞಾನವೂ ಅಷ್ಟೇ ಹಳೆಯದಾದದ್ದು. ಆದರೆ ಈ ಜ್ಞಾನವು ಆ ಕ್ರಿಯೆಯಲ್ಲಿ ತೊಡಗಿದ್ದವರು ತಮ್ಮ ಅನುಭವವನ್ನು ಆಧರಿಸಿ ರೂಪಿಸಿದ್ದಾಗಿತ್ತು. ಈ ಅನುಭವ ರೂಪಿತ ಭಾಷಾಂತರ ಕುರಿತ ಜ್ಞಾನವು ಭಾಷಾಂತರ ಪಠ್ಯಗಳ ಮುನ್ನುಡಿಯಲ್ಲಿ ಅಥವಾ ಭಾಷಾಂತರಕಾರರ ಇತರ ಬಿಡಿ ಬರಹಗಳಲ್ಲಿ ಹೇಳಿಕೆಗಳಲ್ಲಿ ಅಡಕವಾಗಿತ್ತು. ಅದು ವ್ಯವಸ್ಥಿತ ರೂಪವನ್ನು ಪಡೆಯಲಿಲ್ಲ. ಆ ರೀತಿಯ ವ್ಯವಸ್ಥಿತ ರೂಪವನ್ನು ಭಾಷಾಂತರ ಕುರಿತ ಜ್ಞಾನಕ್ಕೆ ನೀಡುವ ಯತ್ನಗಳು ಸಹ ಹಿಂದೆ ನಡೆದಿವೆ. ಯಾವಾಗ ಸಾಂಸ್ಥಿಕ ರೂಪದಲ್ಲಿ ಬೃಹತ್ ಪ್ರಮಾಣದಲ್ಲಿ ಭಾಷಾಂತರಗಳು ನಡೆಯುವ ಅಗತ್ಯ ಉಂಟಾಗಿದೆಯೋ ಹಾಗೆಲ್ಲ ಭಾಷಾಂತರಕಾರರಿಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡುವ ಸಲುವಾಗಿ ಭಾಷಾಂತರ ಕುರಿತ ಜ್ಞಾನವನ್ನೇ ವ್ಯವಸ್ಥಿತ ರೂಪಕ್ಕೆ ಒಳಪಡಿಸಲು ಪ್ರಯತ್ನಗಳು ನಡೆದಿವೆ.

ಉದಾ: ಬೈಬಲ್ ಭಾಷಾಂತರ ಅದೇ ರೀತಿ ಯುರೋಪಿನ ಭಾಷೆಗಳು ಗ್ರೀಕ್ ಮತ್ತು ಲ್ಯಾಟಿನ್‌ಗಳನ್ನು ಆಧರಿಸಿ ತಮ್ಮನ್ನು ರಾಷ್ಟ್ರಭಾಷೆಗಳಾಗಿ ಪ್ರಬುದ್ಧ ಭಾಷೆಗಳಾಗಿ ರೂಪಿಸಿಕೊಳ್ಳುವ ಸಂದರ್ಭದಲ್ಲೂ ಈ ರೀತಿಯ ಬಿಡಿ ಪ್ರಯತ್ನಗಳು ಕಂಡು ಬರುತ್ತವೆ.

ಇದಲ್ಲದೆ ಭಾಷಾಂತರ ಕುರಿತ ವ್ಯವಸ್ಥಿತ ಜ್ಞಾನವು ಇತರ ಜ್ಞಾನಶಾಖೆಗಳ ಭಾಗವಾಗಿ ಮೂಡಿದೆ. ಅವುಗಳ ಉಪಶಾಖೆಗಳಲ್ಲಿ ಈ ಕೆಲಸ ನಡೆದಿದೆ. ಹೆಚ್ಚಾಗಿ ತತ್ವಜ್ಞಾನ, ಭಾಷಾವಿಜ್ಞಾನ, ತೌಲನಿಕ ಸಾಹಿತ್ಯ, ಧರ್ಮಶಾಸ್ತ್ರ, ಮಾನವಶಾಸ್ತ್ರಗಳಲ್ಲಿ ಭಾಷಾಂತರ ಕುರಿತ ಜ್ಞಾ

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಇಂದಿನ ದಿನಗಳಲ್ಲಿ ಸಾಹಿತ್ಯವನ್ನು ನೋಡುವ ಕ್ರಮ ಮತ್ತು ಓದುವ ವಿಧಾನ ಆಲೋಚನೆಗಳಲ್ಲಿನ ದೃಷ್ಟಿಕೋನವು ಬದಲಾವಣೆಯಾಗಬೇಕಾಗಿದೆ. ಪರಿವರ್ತನೆಯಾದ ಸಮಾಜವನ್ನು ಸೂಕ್ಷ್ಮವಾಗಿ ಗಮನಿಸುತ್ತದೆ.

ಮಲಯಾಳಂ ಸಾಹಿತ್ಯದಲ್ಲಿ 19 ನೆಯ ಶತಮಾನವು ಅತ್ಯಂತ ಪರಿಣಾಮಕಾರಿ ಮತ್ತು ಪ್ರಭಾವಶಾಲೀ ಕಾಲಘಟ್ಟವೆಂದು ಪರಿಗಣಿಸಲ್ಲಟ್ಟಿದೆ. ಏಕೆಂದರೆ, ಈ ಯುಗದಲ್ಲಿ ಮನುಷ್ಯ–ಮನುಷ್ಯರ ನಡುವಿನ ಸಂಬಂದಗಳಲ್ಲಿ ಉಂಟಾದ ಅಸಮಾನತೆ, ವೈರುಧ್ಯತೆ, ಅಸೂಯೆಯ, ಸಾಮಾಜಿಕ ಸಂಘರ್ಷಗಳನ್ನು, ಗಮನಿಸಿದಾಗ ಮನುಷ್ಯಸ್ವಾರ್ಥಿಯೂ, ಲೋಭಿಯೂ, ಅಹಂಕಾರಿಯಾಗಿ ಮೆರೆಯುತ್ತಿದ್ದಾನೆ ಎಂದು ತಿಳಿದು ಬರುತ್ತದೆ. ಇದಕ್ಕೆ ಕಾರಣವೆಂದರೆ ಸಾಮಾಜಿಕ ಸಂಘರ್ಷಗಳು, ತಲ್ಲಣಗಳು, ಆತಂಕಗಳು, ಮಾನವೀಯತೆ ಎನ್ನುವುದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿರುವಂತಹ ಕಾಲಘಟ್ಟದಲ್ಲಿದ್ದೇವೆ. ವೈಕಂ ರವರ ಕತೆಗಳು ಈ ಮೇಲಿನ ಎಲ್ಲಾ ಸವಾಲುಗಳನ್ನು ಯಾವ ರೀತಿ ವಿಡಂಬಿಸುತ್ತದೆ? ಹಾಗೂ ಇಂದಿನ ಸಮಾಜಕ್ಕೆ ಎಷ್ಟು ಪ್ರಸ್ತುತವೆನಿಸುತ್ತದೆ ಎನ್ನುವಂತಹ ವಿಚಾರಗಳಿಗೆ ಸಂಬಂಧಿಸಿದಂತೆ ನನ್ನ ಅಧ್ಯಯನದಲ್ಲಿ ಸಂಶೋಧಿಸಿದ್ದೇನೆ.

ಸಾಹಿತ್ಯ ಎನ್ನುವುದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನ ಕೈಗನ್ನಡಿಯಿದ್ದಹಾಗೆ, ಮನುಷ್ಯ ತಾನು ಅನುಭವಿಸಿದ್ದನ್ನು ಅಭಿವ್ಯಕ್ತಿಗೊಳಿಸಬಲ್ಲನಾದರೆ, ಆ ಅನುಭವದ ಅಭಿವ್ಯಕ್ತಿಯ ಬರಹ ರೂಪವೇ ಸಾಹಿತ್ಯವೆನಿಸಿಕೊಳ್ಳುತ್ತದೆ. ಇದು ಬದುಕನ್ನು ಕಟ್ಟಿಕೊಳ್ಳಲು, ಬದುಕನ್ನು ಅರ್ಥೈಸಿಕೊಳ್ಳಲು ಸಾಹಿತ್ಯವು ಸಾಮಾಜಿಕ ರುವಾರಿಯಾಗಿ ಕಂಡುಬರುತ್ತದೆ.

ಮಲಯಾಳಂ ಸಾಹಿತ್ಯದಲ್ಲಿ 1935–1950 ರ ಕಾಲವನ್ನು ಸಣ್ಣಕಥೆಗಳು ಪ್ರಾರಂಭಗೊಳ್ಳುವ ಸುವರ್ಣಯುಗವೆಂದು ಕರೆಯುತ್ತಾರೆ. ಈ ಕಾಲಘಟ್ಟವು ಅತ್ಯಂತ ಪರಿಣಾಮಕಾರಿ ಮತ್ತು ಪ್ರಭಾವಶಾಲೀ ಎಂದು ಪರಿಗಣಿಸಲ್ಪಟ್ಟಿದೆ. ಏಕೆಂದರೆ ಈ ಯುಗದಲ್ಲಿ ಮನುಷ್ಯ – ಮನುಷ್ಯನ ನಡುವಿನ ಸಂಬಂಧಗಳಲ್ಲಿ ಉಂಟಾದ ವೈರುದ್ಯತೆ, ವೈಷಮ್ಯ, ದ್ವೇಷ, ಅಸೂಯೆಯ ಮನೋಭಾವಗಳನ್ನು ಗಮನಿಸಿದಾಗ ಮನುಷ್ಯನು ಸ್ವಾರ್ಥಿಯೂ, ಕ್ರೂರಿಯೂ, ಲೋಭಿಯಾಗಿ ಮೆರೆಯುತ್ತಿದ್ದಾನೆ ಎಂದು ತಿಳಿದು ಬರುತ್ತದೆ. ಇದಕ್ಕೆ ಕಾರಣವೇನೆಂದರೆ, ಮಾನವೀಯ ಮೌಲ್ಯವನ್ನು ಕಳೆದುಕೊಳ್ಳುತ್ತಿರುವುದು, ಸ್ವಾರ್ಥಮನೋಭಾವವನ್ನು ರೂಢಿಕೊಳ್ಳುತ್ತಿರುವುದು ಕಂಡುಬರುತ್ತದೆ. ಎನ್ನುವಂತಹ ಪ್ರಜ್ಞೆಯನ್ನು ವೈಕಂ ಮಹಮ್ಮದ್ ಬಷೀರ್ ರವರು ತಮ್ಮ ಕತೆಗಳಲ್ಲಿ ಹೇಳಿರುವ / ದೃಢ ನಿಲುವಿನಿಂದ ತಿಳಿದುಬರುತ್ತದೆ. *3

ಮಲಯಾಳಂ ಸಾಹಿತ್ಯಿಕ ಲೋಕದಲ್ಲಿನ ಸಾಮಾಜಿಕ ,ಧಾರ್ಮಿಕ ವಿಚಾರಗಳಿಗೆ

ಸಂಬಂಧಿಸಿದಂತೆ ವೈಕಂ ಕತೆಗಳಲ್ಲಿ ಕಾಣಬರುತ್ತದೆ. ಅನುವಾದಲೇಖನವನ್ನು ಓದಬೇಕೆಂಬ ಆಸಕ್ತಿಯನ್ನು ಮೂಡಿಸುವಲ್ಲಿ ವೈಕಂ ರವರ ಕತೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಮಾನವೀಯ ಸಂಬಂಧಗಳು ಇಂದಿನ ಯಾಂತ್ರಿಕ ಜಂಜಾಟದಲ್ಲಿ ನಶಿಸುತ್ತಿರುವುದು ಹಾಗೂ ಮಾನವನು ಮನುಷ್ಯತ್ತ್ವವನ್ನು ಕಳೆದುಕೊಂಡು ಮೃಗೀಯ ರೀತಿಯಲ್ಲಿ ವರ್ತಿಸುತ್ತಿರುವಂತಹ ಸ್ಥಿತಿಯಲ್ಲಿ ಇಂದು ಬದುಕು ನಡೆಸುತ್ತಿದ್ದಾನೆ. ಧಾರ್ಮಿಕವಾಗಿಯೂ ಕೂಡ ಅನೇಕರೀತಿಯ ಗೊಂದಲ, ಘರ್ಷಣೆಗಳಿಗೆ ಒಳಗಾಗಿ ತನ್ನ ತನವನ್ನು ಕಳೆದುಕೊಳ್ಳವಂತಹ ಸ್ಥಿತಿಯನ್ನು ಗಮನಿಸಬಹುದಾಗಿದೆ. ಮನುಷ್ಯನ ಸ್ವಾರ್ಥಿಯಾಗುತ್ತಿರುವುದೂ ಕಂಡುಬರುತ್ತದೆ.

ರಾಷ್ಟ್ರೀಯತೆ, ರಾಷ್ಟ್ರಪ್ರಜ್ಞೆ ಕಲ್ಪನೆಯನ್ನು ಇಂದಿನ ಯುವಜನತೆ ಮರೆಯುತ್ತಿರುವ ಹಿನ್ನೆಲೆಯಲ್ಲಿ

ಹಾಗೂ ಅಲ್ಲಿನ ಬದುಕು, ಒಳಾಡಳಿತಗಳು ಹೇಗೆ ಮತ್ತೊಬ್ಬರ ಮೇಲೆ ಹೊರೆಯಾಗುತ್ತವೆ? ಎನ್ನುವಂತಹ ವಿಚಾರಗಳೂ ಸಹ ಸಾಮಾಜಿಕ ನೆಲೆಯಲ್ಲಿ ನನ್ನ ಅಧ್ಯಯನದಲ್ಲಿನ ಕತೆಗಳು ಮೂಡಿಬಂದಿವೆ.

ಶತಮಾನಗಳಿಂದ ಗಂಡು-ಹೆಣ್ಣು ಕೂಡಿ ಬದುಕಿದವು. ಆದರೆ ಅವರಿಬ್ಬರಿಗೂ ಪರಿಚಿತವಾದ ಒಂದು ಸಾಮಾನ್ಯ ಪ್ರಪಂಚವಿದ್ದಂತೆ. ಹೆಣ್ಣಿಗೆ ಅವಳದೇ ಆದ ಭೌತಿಕ, ಮಾನಸಿಕ, ಪ್ರಪಂಚ ಉಳಿಯಿತು. ಈ ಹಿನ್ನೆಲೆಯಲ್ಲಿ ಮಹಿಳೆಯರ ಸ್ಪಂದನೆಯ ಗ್ರಹಿಕೆಯ ಸ್ವೀಕಾರದ ಲಯ, ಗತಿ, ತೀವ್ರತೆಗಳು ಭಿನ್ನವಾದವು. ಈ ಭಿನ್ನತೆ ಬದುಕನ್ನು ನೋಡುವ ಅವಳ ದೃಷ್ಟಿಕೊನಕ್ಕೂ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ. *4 (ವಿಜಯಾದಬ್ಬೆ 1989 ಪುಟ 105 ಮಹಿಳಾ ಸಾಹಿತ್ಯ ಸಮಾಜ)

ನವೋದಯ ಸಾಹಿತ್ಯ ಕಾಲಘಟ್ಟದಲ್ಲಿ ಹುಟ್ಟಿರುವಂತಹ ವೈಕಂ ಮಹಮ್ಮದ್ ಬಷೀರ್‌ರವರು ತಮ್ಮ ಕತೆಗಳಲ್ಲಿ ದೇಶಪ್ರೇಮ, ರಾಷ್ಟ್ರೀಯತೆ, ಹೋರಾಟಗಳಲ್ಲಿ ಸ್ವತಹ ಭಾಗಿಯಾಗಿದ್ದು ಅವರ ಅನುಭವ ಮತ್ತು ವಿಚಾರಗಳನ್ನು ಕುರಿತು ಅವರ ಕತೆಗಳಲ್ಲಿ ಕಂಡುಬರುತ್ತದೆ.

ಈ ಕಾಲದವರ ನಿಲುವು ಬದುಕು ಸ್ವೀಕಾರ್ಹವಾದದ್ದು, ಬಾಳಿನ ಅರ್ಥಪೂರ್ಣತೆಯನ್ನು ಬಿಂಬಿಸುವ ಸನ್ನಿವೇಶಗಳೂ ಸಹ ಅವರ ಕತೆಗಳಲ್ಲಿ ಕಾಣಸಿಗುತ್ತವೆ. ಪ್ರಕೃತಿ ಪ್ರೇಮ ಮತ್ತು ಮನುಷ್ಯ ಸಂಬಂಧದ ಗಾಢತೆಯನ್ನು ಕತೆಗಳಲ್ಲಿ ಕಾಣಬಹುದಾಗಿದೆ. ಸಾಮಾನ್ಯ ಜನರ ಬದುಕು ಇವರ ಕತೆಯ ವಸ್ತುವಾಗಿದೆ. ಆದರ್ಶ ಜೀವನ, ಆಶಾವಾದಿತನವನ್ನು ಸಹ ಇವರ ಸಾಹಿತ್ಯ ಬರಹದಲ್ಲಿ ಕಾಣಿಸಿಕೊಳ್ಳುತ್ತವೆ.

ಇಂದಿನಸಾಮಾಜಿಕಸಂದರ್ಭದಲ್ಲಿಮನುಷ್ಯರು ಯಂತ್ರನಾಗರೀಕತೆಯಲ್ಲಿ ಕಳೆದುಹೋಗುತ್ತಿರುವ ತಮ್ಮ ಬದುಕನ್ನು ಮತ್ತೆ ಸೃಷ್ಟಿಸಿಕೊಳ್ಳುವ, ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡಬೇಕಿದೆ.

ಆದ್ದರಿಂದ ಈ ಅಂಶಗಳನ್ನು ಪ್ರಧಾನವಾಗಿಟ್ಟುಕೊಂಡು ಸ್ವಾತಂತ್ರ್ಯ ಸಮಾನತೆ ಹಾಗೂ ಸಾಮಾಜಿಕ ಭದ್ರತೆಗಾಗಿ ರಚನೆಗೊಂಡ ಸಾಹಿತ್ಯದ ಅಧ್ಯಯನ ನನ್ನ ಮೂಲ ಉದ್ದೇಶವಾಗಿದೆ.

**ವ್ಯಾಪ್ತಿ:**

2006 ರಲ್ಲಿ ಪ್ರಕಟವಾಗಿರುವ ವೈಕಂ ಕತೆಗಳು ಹಾಗೂ ಇನ್ನು ಮುಂತಾದ ಮಲಯಾಳಂ ಕತೆಗಳ ಪರಿಶೀಲನೆಯನ್ನು ನಾನು ನನ್ನ ಎಂ.ಫಿಲ್. ಪ್ರಬಂಧದ

ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ.ಶೈಕ್ಷಣಿಕವಾಗಿ ನೋಡಿದಾಗಲೂ ,ಈ ಕತೆಗಳ ಮೇಲೆ ಯಾವುದೇ ರೀತಿಯ ಸಂಶೋಧನೆ ಇದುವರೆಗೆ ನಡೆದಿರುವುದಿಲ್ಲ.

ಕತೆಗಳ ಸಾಮಾಜಿಕತೆ ಮತ್ತು ಸಂಘರ್ಷಗಳ ಅಧ್ಯಯನವನ್ನು ಅನುವಾದ ಕತೆಗಳ ಪರಿಶೀಲನೆಯನ್ನು ಗಮನದಲ್ಲಿಟ್ಟುಕೊಂಡು ನನ್ನ ಅಧ್ಯನದ ವಿಚಾರವನ್ನು ಸಂಶೋಧಿಸುತ್ತಿದ್ದೇನೆ. ಈ ಕತೆಗಳು ನೇರವಾಗಿ ಒಂದು ಪ್ರದೇಶದ ಜನಾಂಗದ ಜನರ, ಬದುಕಿನ ರೀತಿ,ರಿವಾಜುಗಳನ್ನು ಅಧ್ಯಯನ ಮಾಡುತ್ತದೆ. ಹಾಗೂ ಕತೆಯಲ್ಲಿ ಕಂಡುಬಂದಿರುವ ಸಾಮಾಜಿಕತೆ ಮತ್ತು ಸಂಘರ್ಷದ ಅಂಶಗಳನ್ನು ಕಂಡುಕೊಳ್ಳುವುದು. ಒಂದು ಕಾಲಘಟ್ಟದಲ್ಲಿ ರಚನೆಯಾದ ಕತೆಯ ಹಿನ್ನೆಲೆ ಮತ್ತು ಆ ಕಾಲಘಟ್ಟದ ಬೆಳವಣಿಗೆಗಳ ಆಧಾರದ ಮೇಲೆ ಅಧ್ಯಯನ ಮಾಡುವುದು. ಪ್ರಸ್ತುತ ಪ್ರಬಂಧ ಕತೆಯಲ್ಲಿ ಬಂದಿರುವ ಸಾಂಸ್ಕೃತಿಕ ಅಂಶಗಳನ್ನು ಕಂಡುಕೊಳ್ಳುವಲ್ಲಿ ಇತರ ಜ್ಞಾನ ಶಾಖೆಗಳ ನೆರವನ್ನು ಪಡೆಯುವುದು. ಅವುಗಳೆಂದರೆ: ಸಮಾಜಶಾಸ್ತ್ರೀಯ, ಭಾಷಾಅಧ್ಯಯನ, ಉದರವಾದಿ ಸ್ತ್ರೀವಾದ ,ಮಾರ್ಕ್ಸವಾದಿ ಸ್ತ್ರೀವಾದ, ಭಾವನೆ ಸ್ತ್ರೀವಾದಿ ಸಮರ್ಥನೆ, ಸಮಾಜವಾದಿ, ಸಾಂಸ್ಕೃತಿಕ ಸ್ತ್ರೀವಾದಿ, ಕಪ್ಪು ಸ್ತ್ರೀವಾದ, ಇತ್ಯಾದಿಗಳನ್ನು ಶೋಧಿಸುವುದು ಈ ಅಧ್ಯಯನದ ಉದೇಶವಾಗಿದೆ. ಭಾಗಶಃ ಈ ಅಧ್ಯಯನವು ಬಹುಶಿಸ್ತೀಯ ಅಧ್ಯಯನ ಮಾದರಿಗೆ ಅನುಗುಣವಾಗಿ ರಚನೆಯಾಗಿದೆ.

ಸೃಜನಶೀಲತೆಯು ಕಾರ್ಯೋನ್ಮುಖವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಹಳೆಯ ವಿಚಾರಧಾರೆಗಳನ್ನು ಕೈಬಿಡದೆ, ಪರಿವರ್ತನೆಯೊಂದಿಗೆ ಅವುಗಳನ್ನು ಅಧ್ಯಯನದ ವ್ಯಾಪ್ತಿ, ವಿಸ್ತಾರ, ಹರವು ಎಲ್ಲಾ ವಲಯಗಳನ್ನು ಅದು ಪ್ರವೇಶಿಸಿದೆ ಎಂಬುದು ನಮ್ಮ ಅರಿವಿಗೆ ಬರುವ ಸಂಗತಿಯಾಗಿದೆ.

**ವೈಕಂ ಮಹಮ್ಮದ್ ಬಷೀರ್ ರವರ ಪ್ರಮುಖವಾದ 17 ಅನುವಾದಿತ ಕತೆಗಳಾದ-**

1.ಪ್ರೇಮ ಪತ್ರ ,2.ಹೂಬಾಳೆ. 3.ಯುದ್ದಮುಗಿವುದಾದರೆ, 4.ನೀಲಿ ಕಂದೀಲು, 5.ಒಂದು ಹಳೆಯ ಪ್ರೇಮ ಕತೆ, 6.ವಾರಸುದಾರರು, 7.ಲೋಕ ಪ್ರಸಿದ್ಧ ಮೂಗು, 8.ಏಕಾಂತದ ತೀರ ,9.ಶಬ್ದಗಳು ,10.ಗೋಡೆಗಳು, 11.ಜೀವನದ ಕರಿನೆರಳು, 12.ಅನರ್ಘ್ಯ ನಿಮಿಷ, 13.ಸಂಜೆಯ ಪ್ರಾರ್ಥನೆ, 14.ಬಂಗಾರಿ, 15.ಐಷುಕುಟ್ಟಿ, 16.ಜನ್ಮದಿನ, 17.ಹೀಗೊಬ್ಬ ಮನುಷ್ಯ ಎಂಬ ಕತೆಗಳನ್ನು ನನ್ನ ಎಂ.ಫಿಲ್ ಅಧ್ಯಯನದ ವ್ಯಾಪ್ತಿಗೆ ಆಯ್ಕೆ ಮಾಡಿ ಅಳವಡಿಸಿಕೊಳ್ಳಲಾಗಿದೆ.

## ಅಧ್ಯಯನದ ಮಹತ್ವ

ಮಲೆಯಾಳಂನ ಗದ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ ಮೊದಲನೆಯ ಪೀಳಿಗೆಯಲ್ಲಿ ವೈಕಂ ಬಷೀರ್ ಬಹುಮುಖ್ಯ ಲೇಖಕರ ಪಟ್ಟಿಯಲ್ಲಿ ಕಂಡುಬರುತ್ತಾರೆ.

ಬಷೀರ್‌ರವರ ಕಥೆಗಳ ವಸ್ತು ವೈವಿದ್ಯತೆ ಮತ್ತು ಆಶಯಗಳು ಎಂಥವರನ್ನು ಚಕಿತಗೊಳಿಸಿಬಿಡುತ್ತವೆ. ಅವರು ಓದುಗರೊಡನೆ ಇರಿಸಿಕೊಳ್ಳುವ ಅಪರೂಪದ ಆಪ್ತತೆ ಅವರು ಎಲ್ಲೂ ಓದುಗರನ್ನೂ ಅನುಮಾನಿಸುವ ಗೊಂದಲಗೊಳಿಸುವ ಸುದ್ಧಿಗೆ ಹೋಗುವುದಿಲ್ಲ. *5

ಅವರು ಬಹಳಷ್ಟು ಕಥೆಗಳಲ್ಲಿ ವೈಯಕ್ತಿಕ ಸಂಗತಿಗಳು ಬಂದರೂ ಆ ವೈಯಕ್ತಿಕ ಅನುಭವನಗಳುಅಸಮಾನ್ಯವಾದವುಗಳಾದ್ದರಿಂದಅವುಗಳುಕಥೆಯಶ್ರೀಮಂತಿಕೆಗೆ ಪೂರಕವಾಗುತ್ತದೆಯೇ ಹೊರತು, ಕಥೆಗಾರನ ಸ್ವರತಿ ಅಥವಾ ವೈಯಕ್ತಿಕ ಗೋಳಾಗಿ ಕಾಣುವುದಿಲ್ಲ ಅವರು ಈ ಲೌಕಿಕ ಪ್ರಪಂಚದ ಕಡು ವಾಸ್ತವ ಚಿತ್ರಗಳನ್ನು ಕೊಡತ್ತಲೇ, ಅತಿಮಾನುಷ ಲೋಕದ ರಹಸ್ಯಗಳಿಗೂ ಕರೆದೊಯ್ಯಬಲ್ಲರು

ಇವರ ಈ ಕಥೆಗಳ ಲೋಕದ ಹರವು ಹಲವು ಬಗೆಯದು ಇಲ್ಲ ನಿಷ್ಕಲ್ಮಷ ಪ್ರೀತಿಗಾಗಿ ಹಂಬಲಿಸುವ, ಜಾತಿ, ಧರ್ಮಗಳನ್ನು ಮೀರುವ ಮನಸುಗಳಿವೆ ಒಂದು ಕತೆಯನ್ನು ಹೊಸ ದೃಷ್ಟಿಕೋನದಿಂದ ನೋಡುವ ಮನಸ್ಥಿತಿ ಓದುಗರಲ್ಲಿ ಮೂಡಿಸುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ನಡೆದ ಅಧ್ಯಯನಗಳು ಕಾಲದಿಂದ ಕಾಲಕ್ಕೆ ಭಿನ್ನ ಸ್ವರೂಪ ಪಡೆದುಕೊಳ್ಳತ್ತವೆ. 19 ರಿಂದ 21 ನೇಶತಮಾನದಲ್ಲಿ ನಡೆದ,ನಡೆಯುತ್ತಿರುವ ,ಸಾಹಿತ್ಯ ಕುರಿತ ಪರಿಶೀಲನೆಗಳು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ.

ವೈಕಂರವರ ಕಥನ ಸಾಹಿತ್ಯದ ಅಧ್ಯಯನವು ಒಂದು ಸಮುದಾಯದ ರೂಡಿ–ಸಂಪ್ರದಾಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕ್ರತಿಕ ಜನಾಂಗಿಕ ಮತ್ತು ಭಾಷಿಕನೆಲೆ, ಮಹಿಳಾ ಸಂವೇದನೆಗಳು, ಕೌಟುಂಬಿಕ ಬಿಕ್ಕಟ್ಟುಗಳು,ಮಾನವೀಯ ಮೌಲ್ಯ, ಇತ್ಯಾದಿ ಅಂಶಗಳ ಮೂಲಕ ಕತೆಗಳ ಹಿನ್ನೆಲೆಯಲ್ಲಿ ನನ್ನ ಅಧ್ಯಯನದ ಪರಿಶೀಲನೆಯಾಗಿದೆ.

ಮನುಷ್ಯರ ಬದುಕನ್ನು ನೋಡುವ ನೋಟಕ್ಕೊಂದು ಹೊಸತನವನ್ನು ತಂದು, ಸಾಮಾಜಿಕ ಸ್ಥಿತಿಗತಿಗಳನ್ನು, ರೂಢಿಸಂಪ್ರದಾಯಗಳನ್ನು, ಸಂಸ್ಕೃತಮಯ ಸಂಪ್ರದಾಯವಾದಿಗಳ ಹಿಡಿತದಿಂದ ಸಾಮಾನ್ಯ ಬದುಕಿನತ್ತ ಎಳೆತಂದ ಬಷೀರರ ಬರಹಗಳು ನಮ್ಮ ಸಮಕಾಲೀನ ಭಾರತದ ಬದುಕಿಗೊಂದು ಕನ್ನಡಿಯಿದ್ದಂತೆ.

ಈ ಹಿನ್ನೆಲೆಯಲ್ಲಿ ಬಷೀರವರ ಬರಹಗಳು ನಮ್ಮ ಕನ್ನಡದಲ್ಲಿ ಬಲು ಮುಖ್ಯವಾಗುತ್ತವೆ. ಬಷೀರರಂಥ ಒಬ್ಬ ಹ್ಯೂಮನಿಸ್ಟ್ ಲೇಖಕನನ್ನು ಕೇವಲ ಕೇರಳದ ಸಾಮಾಜಿಕ ಚೌಕಟ್ಟಿನ ಹಿನ್ನೆಲೆಯಲ್ಲಿ

ಅಥವಾ ಯವುದೋ ಒಂದು ವರ್ಗದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವ ಮಿತಿಯನ್ನು ಸೃಷ್ಟಿಸಿಕೊಳ್ಳುವುದು ಮೂರ್ಖತನವಾಗುತ್ತದೆ.ಏಕೆಂದರೆ, ಯಾವುದೇ ಲೇಖಕನ ಎದೆಯಿಂದ ನೇರವಾಗಿ, ಮಾನವೀಯತೆಯ ಆಳದಿಂದ ಹೊರಹೊಮ್ಮುವ ಆಶಯಗಳು, ತುಡಿತಗಳು, ತಳಮಳಗಳು ಒಂದು ಜನಾಂಗಕ್ಕೆ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾದವುಗಳಲ್ಲ. ಅವು ಈ ಎಲ್ಲಾ ಮಿತಿಗಳನ್ನು ಮೀರಿ ಸಾರ್ವತ್ರಿಕವಾಗಿಬಿಡುತ್ತವೆ.

ಬಷೀರವರ ಕೆಲವು ಕಥೆಗಳು ಸಿನಿಮಾಗಳಾಗಿವೆ. ದೆವ್ವ ಮತ್ತು ಜೀವಂತ ಪಾತ್ರಗಳು ಒಟ್ಟೊಟ್ಟಿಗೆ ಬದುಕುವ ಕಾವ್ಯಾತ್ಮಕ ಕಥೆಯಾದ “ನೀಲಿ ಕಂದೀಲು” ಭಾರ್ಗವಿ ನಿಲಯಂ ಎಂಬ ಹೆಸರಿನಲ್ಲಿ ಸಿನಿಮಾವಾಗಿ ಈಗಲೂ ಮಲೆಯಾಳಿಗಳ ಮನದಲ್ಲಿ ಉಳಿದಿದೆ. “ಪ್ರೇಮಪತ್ರ” ಕತೆ ಸಿನಿಮಾಗಲಾಗಿದ್ದರೂ, ಈವರೆಗೂ ತೆರೆಕಂಡಿಲ್ಲ. ಆದರೆ, ನಮ್ಮ ದೇಶದ ಪ್ರಜ್ಞಾವಂತ ನಿರ್ದೇಶಕರುಗಳಲ್ಲಿ ಒಬ್ಬರಾದ ಆಡೂರು ಗೋಪಾಲಕೃಷ್ಣನ್ ರವರ ನಿದೇಶನದಲ್ಲಿ ತೆರೆಕಂಡ ಗೋಡೆಗಳು 1989ರ ಅತ್ಯುತ್ತಮ ಚಿತ್ರವೆಂದು ರಾಷ್ಟ್ರಪತಿಗಳ ಪದಕವನ್ನು, 1990ರಲ್ಲಿ UNICEF, SIPRESCI ಪ್ರಶಸ್ತಿಯನ್ನು ಪಡೆದುಕೊಂಡಿತು. ನೀಲಿಕಂದೀಲು, ಚಿತ್ರಕ್ಕೆ ವೈಕಂ ರವರೇ ಸ್ವತಃ ಸಂಭಾಷಣೆಗಳನ್ನು ಬರೆದಿದ್ದಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವೈಕಂ ರವರ ಕತೆಗಳನ್ನು ಪರಿಶೀಲಿಸುವುದು ನನ್ನ ಅಧ್ಯಯನ ಕ್ರಮವಾಗಿದೆ. ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು ವೈಕಂ ರವರ ಕತೆಗಳು ಎಷ್ಟು ಪ್ರಸ್ತುತ ಹಾಗೂ ವಾಸ್ತವತೆಗೆ ಹತ್ತಿರವಾದಂತಹವು ಎಂಬ ವಿಚಾರಗಳು ಈ ಅಧ್ಯಯನದಿಂದ ತಿಳಿದುಬರುತ್ತದೆ. ಈ ನೆಲೆಗಟ್ಟಿನಲಿ ವೈಕಂಮಹಮ್ಮದ್ ಬಷೀರ್ ರವರ ಕತೆಗಳಲ್ಲಿನ ಸಾಮಾಜಿಕತೆ ಮತ್ತು ಸಂಘರ್ಷ ಎನ್ನುವ ಶೀರ್ಷಿಕೆಯ ಮೂಲಕ ಈ ಕತೆಗಳಲ್ಲಿ ಅಡಗಿರುವಂತಹ, ಹಾಗೂ ಸ್ಥಬ್ಧವಾದಂತಹ ಪಾತ್ರಗಳು ಇವೆ ಎಂಬುದು ನನಗೆ ತಿಳಿದು ಬಂತು. ಆದ್ದರಿಂದ ಇವರ ಕತೆಗಳ ಬಗ್ಗೆ ನನಗೆ ಆಸಕ್ತಿಯಿಂದ ವಿವರಿಸುವ ಪ್ರಯತ್ನವನ್ನು ನನ್ನ ಅಧ್ಯಯನದಲ್ಲಿ ಪರಿಶೀಲಿಸಿದ್ದೇನೆ.

# ಅಧ್ಯಾಯ 7

## ಸಮಾರೋಪ

ವೈಕಂ ಮಹಮ್ಮದ್ ಬಷೀರ್ ರವರು ಮಲೆಯಳಂ ಕಥಾಲೋಕದಲ್ಲಿ ಚಿರಸ್ಥಾಯಿವಾದ ಹೆಸರು. ಅವರು ಬರೆಯುವ ಧಾಟಿ, ವಸ್ತು ವೈವಿಧ್ಯತೆ, ಪಾತ್ರಗಳ ನೈಜತೆ ಮುಂತಾದವುಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತೋರಿಸಿಕೊಡುವುದರ ಮೂಲಕ ತಮ್ಮದೇ ಅದ ವಿಶಿಷ್ಟ ಛಾಪನ್ನು ಒತ್ತಿದ ಬಷೀರ್ ಈ ಶತಮಾನ ಕಂಡ ವಿಸ್ಮಯ ಸೃಷ್ಟಿಕರ್ತ. ಮತ್ತೆ ಮತ್ತೆ ಓದಬೇಕೆನಿಸುವ ಲೇಖಕ. ಅಂತೆಯೇ ಎಷ್ಟು ಸಾರಿ ಓದಿದರೂ ತಮ್ಮ ಸೊಗಸನ್ನೂ, ಹೊಸತನವನ್ನು ಕಳೆದುಕೊಳ್ಳದಂಥ ಕಥೆಗಳನ್ನು ಬರೆದ ಅವರು ಕೇವಲ ಕೇರಳದ ಅವರ ಸಮಕಾಲೀನ ಲೇಖಕರಲ್ಲಿ ಅಥವಾ ಮಲೆಯಾಳಂ ಸಾಹಿತ್ಯದಲ್ಲಷ್ಟೇ ಪ್ರಮುಖರಾಗುವುದಿಲ್ಲ. ಹಾಗೆ ನೋಡಿದರೆ ಯಾವುದೇ ಸಾಹಿತ್ಯದ ಶ್ರೇಷ್ಠ ಲೇಖಕನ ಸಾಲಿನಲ್ಲಿ ನಿಲ್ಲುವಂಥವರು ಬದುಕಿದ್ದಾಗಲೇ ದಂತ ಕಥೆಯಾಗಿದ್ದರು.

ವೈಕಂ ರವರ ಕತೆಗಳಲ್ಲಿ ಸ್ತ್ರೀಸಂವೇದನೆಯ ನೆಲೆಗಳಿಗೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ಇಲ್ಲಿ ನೀಡುತ್ತಾ ಹೋಗುತ್ತಾರೆ. ಭಾರತೀಯ ಸಂಸ್ಕೃತಿಯ ಸೂಕ್ಷ್ಮತೆಗಳು, ಧಾರ್ಮಿಕವಾಗಿ ಮಹಿಳೆ ಯಾವ ರೀತಿ ಬಂಧನಕ್ಕೊಳಗಾಗಿದ್ದಾಳೆ ಹಾಗೂ ಜಾತಿಯನ್ನು ಮೀರುವುದಕ್ಕೆ ಆಗದೇ ಇರುವಂತಹ ಸನ್ನಿವೇಶದಲ್ಲಿ ಯಾವ ರೀತಿಯ ನಿರ್ಣಯ ಪಡೆಯುತ್ತಾಳೆ ಎನ್ನುವ ವಿಚಾರ ಕತೆಗಳಲ್ಲಿರುವುದನ್ನು ನನ್ನ ಅಧ್ಯಯನದ ಮೂಲಕ ಸಂಶೋಧಿಸಿದ್ದೇನೆ.

ಆಧುನಿಕ ಮಹಿಳಾ ಪ್ರಜ್ಞೆಯಾಗಿ ಮಹಿಳೆ ತನಗೆ ವಿರೋಧವಾದದ್ದನ್ನೇ ಪ್ರತಿಭಟಿಸುವ, ನಿರಾಕರಿಸುವಂತಹ, ನಿರ್ಣಯಗಳನ್ನು ತೆಗೆದುಕೊಳ್ಳುವ ಮನಸ್ಥಿತಿಯನ್ನು ಸಹ ವೈಕಂ ಬಷೀರ್‌ರವರು ತಮ್ಮ ಬರವಣಿಗೆಯಲ್ಲಿ ಈ ಎಲ್ಲ ಅಂಶಗಳನ್ನು ಹಿಡಿದಿಟ್ಟಿರುವಂತಹ ಲೇಖಕನಾಗಿ ಕಂಡುಬರುತ್ತಾನೆ.

ಮಾನವೀಯತೆಯನ್ನು ಪ್ರತಿಬಿಂಬಿಸುವ ಕತೆಗಳನ್ನು ಸಹ ವೈಕಂರವರು ಬರೆದಿದ್ದಾರೆ. ಇವರು ಮೂಲತಹ ಸದಾ ಮಾನವೀತೆಯ ಪರ ಒಲವಿದ್ದಂತಹ ವ್ಯಕ್ತಿ ಸಮಾಜದ ವಾಸ್ತವ ನಗ್ನ ಸತ್ಯವನ್ನು ಪ್ರತಿಬಿಂಬಿಸುವಂತಹ ಕತೆಗನ್ನು ಇವರ ಸಾಹಿತ್ಯವು ಜೀವಪರವಾಗಿದ್ದು, ಮಾನವೀಯ ಮೌಲ್ಯಗಳನ್ನು ಒಳಗೊಂಡಿದ್ದು ತಿಳಿದು ಬರುತ್ತದೆ.

'ಹೀಗೊಬ್ಬ ಮನುಷ್ಯ' ಕತೆ ಕಳ್ಳನಾಗಿದ್ದವನು ತನ್ನ ವರ್ತನೆಯನ್ನು ಬದಲಿಸಿಕೊಂಡು ಮತ್ತೆ ಕದ್ದ ಹಣವನ್ನು ಅದೇ ವ್ಯಕ್ತಿಗೆ ಕಷ್ಟಕಾಲದಲ್ಲಿ ಬಂದು ನೆರವಾಗವುದನ್ನು ಇವರ ಕತೆಯಲ್ಲಿ ಚಿತ್ರಿಸಿದ್ದಾರೆ. ಜೀವನದ ಕರಿನೆರಳು ಶಬ್ದಗಳು ಬಂಗಾರಿ, ಈ ಕತೆಗಳೂ ಸಹ ಮಾನವೀಯ ಮೌಲ್ಯಗಳನ್ನು ಕುರಿತು ಕತೆಗಳಲ್ಲಿ ವಿಡಂಬಿಸಿದ್ದಾರೆ.

ಧರ್ಮ, ಜಾತಿಗಳಿಗೆ ಸಂಬಂಧಿಸಿದಂತೆ ಅನೇಕ ವಿಚಾರಗಳನ್ನು ಕಾಣಬಹುದು, ಸರ್ವಧರ್ಮಸಹಿಷ್ಣುತೆಯನ್ನು ಕಾಪಾಡಿಕೊಂಡು ಬರುವಂತಹ ಇವತ್ತಿನ ದಿನದ ಸ್ಥಿತಿಯನ್ನು ಸಹ ಸೂಚಿಸುವಂತಿದೆ "ಪ್ರೇಮ ಪತ್ರ, ಗೋಡೆಗಳು, ಶಬ್ಧಗಳು ಈ ಕತೆಗಳು ಧಾರ್ಮಿಕ ಸಂಘರ್ಷಕ್ಕೆ ಸಂಬಂಧಿಸಿದಂತೆ ಕೆಲವು ಸಂಗತಿಗಳು ಬರುತ್ತವೆ. ಪ್ರೀತಿಯ ಮುಂದೆ, ಜಾತಿ, ಧರ್ಮಕ್ಕೆ ಯಾವುದೇ ರೀತಿಯ ಭಿನ್ನಗಳಿಲ್ಲದಂತೆ ಸೃಷ್ಟಿಗೊಂಡಿವೆ. ಇವರ ಕತೆಗಳಲ್ಲಿ ಸಾಮಾಜಿಕ ಬದಲಾವಣೆಗಳನ್ನು ಬಯಸುವಂತಹ ವ್ಯಕ್ತಿತ್ವ ವೈಕಂ ಮಹಮ್ಮದ್ ರವರ ಕತೆಗಳಲ್ಲಿ ಕಾಣಬಹುದು. ಕೌಟುಂಬಿಕ ಸ್ಥಿತಿಯ ವಾತಾವರಣ, ಮಹಿಳೆಯರ ಸ್ಥಿತಿ, ಗತಿಯನ್ನು ಕುರಿತಂತೆ, ಮಾತೃಪ್ರಧಾನ ಕುಟುಂಬದ ಅಳಿವಿಗೆ ಸಂಬಂಧಿಸಿದಂತಹ ಬದಲಾವಣೆಯನ್ನು ಕುರಿತಂತೆ ವಿಚಾರಗಳು ಇವರ ಕತೆಯಲ್ಲಿ ಕಂಡುಬರುತ್ತದೆ. ವೈಕಂ ಮಹಮ್ಮದ್ ಬಷೀರ್‌ರವರ ಕತೆಗಳಲ್ಲಿ ಕಂಡುಬರುವಂತಹ ಇಂತಹ ಅನೇಕ ಸೂಕ್ಷ್ಮ ಸಂಗತಿಗಳನ್ನು ಮತ್ತು ಅವರ ಕತೆಗಳಲ್ಲಿ ಕಂಡುಬರುವಂತಹ ಕಥಾವಸ್ತುಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅವರು ವಾಸ್ತವಕ್ಕೆ ಹತ್ತಿರವಾದ ಮತ್ತು ಇಂದಿನ ದಿನಕ್ಕೂ ಅದರ ಪ್ರಸ್ತುತತೆಯನ್ನು ಹೇಳುವಂತಹ ವಸ್ತುಗಳನ್ನು ಒಳಗೊಂಡಿರುವುದು ಇವರ ಕತೆಗಳ ವಿಶೇಷಗಳಲ್ಲಿ ಒಂದೆನಿಸಿದೆ. ತಮ್ಮ ವೈಯಕ್ತಿಕ ಜೀವನದ ಸಿಹಿ ಕಹಿ ಅನುಭವಗಳನ್ನು ಕತೆಯಲ್ಲಿ ತಂದಿರುವುದು ವಿಶೇಷಕಾರಿಯಾಗಿದೆ. ಮತ್ತು ಇವರು ಕೆಲವು ಕಡೆ ತನ್ನನ್ನೇ ಕೆಲವು ಪಾತ್ರಗಳಲ್ಲಿ ಪ್ರತಿಬಿಂಬಿಸಲು ಹೊರಟಿದ್ದಾರೆ.

**ಉದಾ:** ಗೋಡೆಗಳು ಕತೆಯಲ್ಲಿ ಜೈಲಿನಲ್ಲಿ ಸೆರೆಯಾಗಿರುವಂತಹ ವಿಚಾರಗಳನ್ನು ಪ್ರಸ್ಥಾಪಿಸಿದ್ದಾರೆ.

ಸಾಮಾನ್ಯವಾಗಿ ಇವರ ಕತೆಗಳಲ್ಲಿ ಬಹುಮುಖ್ಯವಾಗಿ ಕಂಡುಬರುವಂತಹ ವಸ್ತು ವಿಷಯಗಳೆಂದರೆ, ಬಡತನ, ಹಸಿವು, ನಿರುದ್ಯೋಗ, ಹುಸಿಕ್ರಾಂತಿಕಾರರು, ಕಳ್ಳರು, ಮೈಮಾರಿಕೊಂಡರೂ ಮನುಷ್ಯತ್ವವಿರುವ ಸೂಳೆಯರು, ನಪುಂಸಕರು, ರಾಷ್ಟ್ರೀಯ ಪ್ರಜ್ಞೆ, ಮುಗ್ಧತೆ, ಇತ್ಯಾದಿ ವಿಚಾರಗಳನ್ನು ಕಾಣಬಹುದು. ಸಮಾಜದ ಬಹುಮುಖಿಯಾದ ಎಲ್ಲ ರೀತಿಯ ಪಾತ್ರಗಳನ್ನು ಸೃಷ್ಟಿಸಿ ಅದಕ್ಕೆ ಜೀವ ತುಂಬಿ ತಮ್ಮ ತಮ್ಮ ಅನುಭವದ ಹಿನ್ನೆಲೆಯಲ್ಲಿ ಕತೆಗಳನ್ನು ಕಟ್ಟಿಕೊಟ್ಟಿದ್ದಾರೆ.

ಇವರ ಕತೆಗಳು ಸ್ವಾರ್ಥವಿಲ್ಲದ ಪ್ರೀತಿಯ ನೆಲೆಯನ್ನು ಹುಡುಕುವಂತಹ ಶೋಧಮಾಡುತ್ತಿವೆ. "ಜೀವನದ ಕರಿನೆರಳು" ಪ್ರೇಮ ಪತ್ರ, ಏಕಾಂತದ ತೀರ, ಗೋಡೆಗಳು, ಒಂದು ಹಳೆಯ ಪ್ರೇಮಕತೆ ಈ ಕತೆಗಳಲ್ಲಿ ಪ್ರೀತಿಯನ್ನು ಪಡೆಯುವ ಪ್ರಯತ್ನಗಳು, ಸಾಹಸಗಳನ್ನು ಈ ಕತೆಗಳಲ್ಲಿ ಪ್ರಮುಖವಾಗಿ ಕಂಡುಬರುವಂತಹ ವಿಚಾರಗಳಾಗಿ ಕಂಡುಬರುತ್ತವೆ.

ಕತೆಗಳಲ್ಲಿ ವಾಸ್ತವ ಕಲ್ಪನೆ ಮತ್ತು ಅವಾಸ್ತವಕ್ಕೆ ಸಂಬಂಧಿಸಿದಂತೆ ನೀಲಿಕಂದೀಲು ಕತೆಯ ಭಾರ್ಗವಿ ಎನ್ನುವ ಆತ್ಮಕ್ಕೆ ಸಂಬಂಧಿಸಿದಂತೆ ವಿಷಯಗಳು ಪ್ರಸ್ತಾಪಿತಗೊಳ್ಳುತ್ತವೆ. ಆತ್ಮ ಮತ್ತು ಜೀವದ ನೆಲೆಗೆ ಸಂಬಂಧಿಸಿದಂತಹ ಕಾಲ್ಪನಿಕ ಜಗತ್ತಿನ ಬಗ್ಗೆ ವಿಚಾರಗಳು ಕಂಡುಬರುತ್ತವೆ. ಅವಾಸ್ತವ ಕಲ್ಪನೆಯನ್ನು ಹೇಳುತ್ತಾ, ವಾಸ್ತವ ಜಗತ್ತಿನ ದರ್ಶನವನ್ನು ಮಾಡಿಸುವಂತಹ ತಂತ್ರಗಾರಿಕೆಯನ್ನು ಬಳಸಿಕೊಂಡಿದ್ದಾರೆ. ಪ್ರಸ್ತುತ ಜನಸಾಮಾನ್ಯರ ವಾಸ್ತವ ಮನಸ್ಥಿತಿಯನ್ನು ಪರಿಗಣಿಸಿ ಕತೆಯನ್ನೇ ಕಟ್ಟುವಂತಹ ಮೊನಚುನತದ ವಿಡಂಬನೆಯನ್ನು ವೈಕಂ ರವರ ಕತೆಗಳಲ್ಲಿ ನಾನು ಸಂಶೋಧಿಸಿದ್ದೇನೆ.

ಜೀವನದ ಕರಿನೆರಳು, ಬಂಗಾರಿ, ಶಬ್ದಗಳು, ವಾರಸುದಾರರು, ಯುದ್ಧಮುಗಿಯುವುದಾದರೆ, ಮುಂತಾದ ಕತೆಗಳು ಒಂದೊಂದು ಸಹ ಉತ್ತಮ ಮೌಲ್ಯಗಳನ್ನು ಒಳಗೊಂಡಿರುವುದು ಅದನ್ನು ಅಧ್ಯಯನದ ಹಿನ್ನೆಲೆಯಾಗಿ ಗಮನಿಸಿದಾಗ ಅನೇಕ ವಿಚಾರಗಳನ್ನು ಕತೆಯು ಪ್ರತಿನಿಧಿಸುತ್ತಿರುತ್ತದೆ ಉದಾ:- ಜೀವನದ ಕರಿನೆರಳು, ಈ ಕತೆಯಲ್ಲಿ ಮಾನವೀಯ ಗುಣಗಳಿಗೆ ಸಂಬಂಧಿಸಿದಂತಹ ಸನ್ನಿವೇಶಗಳು ಬರುತ್ತದೆ. ಸ್ತ್ರೀ ಸಂವೇದನೆಯ ಹಿನ್ನೆಲೆಯಲ್ಲಿಯೂ ಅನೇಕ ವಿಚಾರಗಳು ಕಂಡುಬರುತ್ತದೆ. ನಿಸ್ವಾರ್ಥ ಪ್ರೀತಿಯ ರೂಪವಾಗಿಯೂ ಈ ಕತೆ ಸಂವಾದಿಸುತ್ತದೆ. ಮತ್ತು ಸಾಮಾಜಿಕ ಪರಿಸರ, ಕುಟುಂಬ, ಜೀವನದ ಅನೇಕ ಆಯಾಮಗಳನ್ನು ಒಂದೇ ಕತೆಯ ಚೌಕಟ್ಟಿನಲ್ಲಿ ಹಿಡಿದಿಟ್ಟಿರುವಂತಹ ಸಾಮರ್ಥ್ಯವನ್ನು ಈ ಕತೆ ಪ್ರತಿಬಿಂಬಿಸುತ್ತದೆ.

ಮನುಷ್ಯನ ದೇಹದ ಪ್ರತಿಬಿಂಬ / ನೆರಳು ಹೇಗೆ ಅವನನ್ನು ಹಿಂಬಾಲಿಸುತ್ತದೆಯೋ ಹಾಗೆಯೇ ಜೀವನದ ಅನೇಕ ಬವಣೆಗಳಿಗೆ ಮನುಷ್ಯನು ಗಂಟುಬಿದ್ದಿರುತ್ತಾನೆ. ಅದೇ ರೀತಿಯಲ್ಲಿ ಎಲ್ಲಾ ಕತೆಗಳು ಸಹ ಅನೇಕ ವಿಭಿನ್ನ ದೃಷ್ಟಿಕೋನದಿಂದ ವಿಚಾರಗಳನ್ನು ಕತೆಯು ಒಳಗೊಂಡಿರುವುದು ತಿಳಿದುಬರುತ್ತದೆ.

ಬಷೀರ್‌ನನ್ನು ಒಬ್ಬ ಪ್ರೇಮಿ. ಮಹಾಹುಚ್ಚ ಎಂದು ಕರೆಯುತ್ತಾರೆ. ಇವರ ಕತೆಗಳಲ್ಲಿ ಅರೇಬಿಯಾದ ಕವಿ ಖಲೀಲ್ ಗಿಬ್ರಾನನ ಪ್ರಭಾವವನ್ನು ಕಾಣಬಹುದು. ಅವರ ಕತೆಗಳನ್ನು ಅಥವಾ ಸಾಹಿತ್ಯವನ್ನು ಗಮನಿಸಿದಾಗ ಅದರಲ್ಲಿ ಪ್ರೀತಿ ರಾಗ ದ್ವೇಷ ಇವರ ಕತೆಗಳನ್ನು ಆವರಿಸರುವಂತಹ ವಿಷಯ ವಸ್ತುಗಳಾಗಿರುತ್ತವೆ. ಪ್ರೀತಿಯ ಮುಗ್ಧತೆಯಾಗಿರಬಹುದು, ನಿಸ್ವಾರ್ಥ ಮನೋಭಾವದ ಪ್ರೀತಿಯನ್ನು ಇವರ ಕತೆಗಳಲ್ಲಿರುವುದನ್ನು ನನ್ನ ಅಧ್ಯಯನದಿಂದ ಸಂಶೋಧಿಸಿದ್ದೇನೆ. ಬದುಕಿಗೆ ಬರೀ ಕಷ್ಟ –ನೋವು – ಹಸಿವು – ಬಡತನ ಇವಿಷ್ಟೇ ಜೀವನ ಅಲ್ಲ ಅದರಾಚೆಗಿನ ಒಂದು ಒಲವು ನಲಿನ್ನು ಕಾಣಬೇಕೆನ್ನುವಂತಹ ಆಲೋಚನಾ ಕ್ರಮವು ಮೆಚ್ಚುಗೆಗೆ ಅರ್ಹವಾದಂತದ್ದು.

ಇಂದಿನ ಪ್ರೀತಿಯು ಸ್ವಾರ್ಥ, ಮೋಸ, ವಂಚನೆಯಿಂದ ಪ್ರೀತಿಯ ಪಾವಿತ್ರತೆಯನ್ನು ಹಾಳುಮಾಡುವಂತಹ ಈ ಕಾಲಕ್ಕೂ ಸಮನ್ವಯವಾಗುವಂತಹ ಆಲೋಚನೆಯನ್ನು ಹೊಂದಿರುವಂತದ್ದು ಇವರ ಕತೆಗಳಾದ ಜೀವನದ ಕರಿನೆರಳು ಪ್ರೇಮ ಪತ್ರ, ಏಕಾಂತದ ತೀರ ಗೋಡೆಗಳು, ಒಂದು ಹಳೆಯ ಪ್ರೇಮಕಥೆ, ಹೂಬಾಳೆ ಈ ಕತೆಗಳ ಮೂಲಕ ಪ್ರೀತಿಯಲ್ಲಿ ನಿಸ್ವಾರ್ಥತೆಯನ್ನು ಹುಡುಕುವಂತಹ ಕಾರ್ಯವನ್ನು ನನ್ನ ಸಂಶೋಧನೆಯಲ್ಲಿ ಮಾಡಿದ್ದೇನೆ.

ಹೀಗೆ ವೈಕಂ ಬಷೀರ್ ರವರು ತಮ್ಮ ಕತೆಳ ಮೂಲಕ ಜೀವನದೊಂದಿಗೆ ಬೆರತು ಹೋಗಿರುವಂತಹ ಅನೇಕ ವಾಸ್ತವ ಸಂಗತಿಗಳನ್ನು ಕತೆಗಳ ಮೂಲಕ ಹಿಡಿದಿಟ್ಟಿದ್ದಾರೆ. ಈ ಸಂಗತಿಗಳನ್ನು ನನ್ನ ಅಧ್ಯಯನದ ಮೂಲಕ ಅವುಗಳನ್ನು ವಿಮರ್ಶಿಸುವ ಹಾಗೂ ಸಂಶೋಧಿಸುವುದಕ್ಕೆ ಈ ಒಂದು ಅಧ್ಯಯನ ನನಗೆ ಸಹಾಯಕಾರಿ ಹಾಗೂ ಪರಿಣಾಮಕಾರಿಯಾಗಿ ಕಂಡು ಬಂದಿದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

# ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

## *"ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಕ್ತಿ ವಿಶಿಷ್ಟತೆಯ ನೆಲೆಗಳು"*


***ಮಾನಸ.ಹೆಚ್.ಇ***

***ಸಂಶೋಧನಾ ವಿದ್ಯಾರ್ಥಿ***

***ನೊಂದಣಿ ಸಂಖ್ಯೆ : ಏಗಿಒಃ/ಏ೦೦೬***

***೧೪೧೦೦೧೦೩೦೦೭೩***

ಮಾರ್ಗದರ್ಶಕರು

ಡಾ॥ ಅನ್ನಪೂರ್ಣಮ್ಮ ಸಿ.ಬಿ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ನ್ಯಾಷನಲ್ ಪದವಿ ಕಾಲೇಜು(ಸ್ವಾಯತ್ತ)
ಬಸವನಗುಡಿ, ಬೆಂಗಳೂರು–೫೬೦೦೦೪.


ಕಾವ್ಯಮಂಡಲ

ಬೆಂಗಳೂರು

೨೦೧೪–೨೦೧೫

***ದೃಢೀಕರಣ ಪತ್ರ***

**ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿನ ವ್ಯಕ್ತಿ ವಿಶಿಷ್ಟತೆಯ ನೆಲೆಗಳು**

**ಪರಿವಿಡಿ**

**ಪ್ರಸ್ತಾವನೆ :**

ಜಯಂತ್ ಕಾಯ್ಕಿಣಿಯವರ ಪರಿಚಯ

೧. ಅಧ್ಯಯನದ ಉದ್ದೇಶ ವ್ಯಾಪ್ತಿ, ಅಧ್ಯಯನದ ವಿಧಾನ
ವ್ಯಕ್ತಿ ವಿಶಿಷ್ಠತೆ ವಿವರಣೆ :

೨. ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿನ ವ್ಯಕ್ತಿ ವಿಶಿಷ್ಠತೆಯ ನೆಲೆಗಳು
   ೧. ಕಲಾವಿದರು
   ೨. ಮಹಿಳೆಯರು
   ೩. ಕುಶಲತೆಯಿಂದ ಬದುಕನ್ನು ಕಟ್ಟಿಕೊಂಡವರು
   ೪. ಸ್ನೇಹಿತರು
   ೫. ಮಕ್ಕಳು

೩. ಸಮಾರೋಪ
ಪರಾಮರ್ಶನ ಗ್ರಂಥಗಳು

**ಪ್ರಸ್ತಾವನೆ :**

ಸಾಹಿತ್ಯ ಎಂಬುದು ಬದುಕನ್ನು ಅನಾವರಣಗೊಳಿಸುವ ಕನ್ನಡಿಯಿದ್ದಂತೆ ಬದುಕಿನ ಎಲ್ಲವನ್ನು ಸಹಿತ ಮಾಡಿಕೊಂಡು ಒಂದು ಬರವಣಿಗೆ ಸೃಷ್ಟಿಯಾಗುತ್ತದೆ. ನಮ್ಮ ಬದುಕನ್ನು ನಾವು ಈ ಬರವಣಿಗೆಯ ಮೂಲಕ ಕಂಡುಕೊಳ್ಳಬಹುದು. ಯಾವ ಸಾಹಿತ್ಯವು ಇದರಿಂದ ಹೊರತಲ್ಲ. ಹೀಗೆ ನಮ್ಮ ಬದುಕಿಗೆ ಹಿಡಿದಂತಹ ಕನ್ನಡಿಯೇ ಸಾಹಿತ್ಯವಾಗಿದೆ. ಆ ಬರವಣಿಗೆಯಲ್ಲಿ ನಮ್ಮ ಮುಖವನ್ನು ನಾವೇ ನೋಡಿಕೊಳ್ಳಬಹುದು. ಸಾಹಿತ್ಯದ ಒಂದು ಬಹಳ ಮುಖ್ಯ ಪ್ರಕಾರವಾದಂತಹ ಸಣ್ಣ ಕತೆಯೂ ಸಹ ಇದರಿಂದ ಹೊರತಲ್ಲ. ಬದುಕಿನ ವಿವಿಧ ಆಯಾಮಗಳನ್ನು ಆ ಕತೆಗಳ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಬದುಕಿನ ಹಲವು ಮುಖಗಳಿಗೆ ಹಿಡಿಯುವಂತಹ ಕನ್ನಡಿಯಾಗಿ ಸಣ್ಣ ಕತೆಗಳು ಸಾಹಿತ್ಯಲೋಕದಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ.

ಭಾರತೀಯ ಸಾಹಿತ್ಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಅತ್ಯಂತ ವಿಶಿಷ್ಟವಾದ ಪ್ರಾಶಸ್ತ್ಯ ದೊರಕಿದೆ. ಹೇಳುವವನ ಆಸಕ್ತಿ ಕೇಳುವವನ ಕುತೂಹಲದೊಂದಿಗೆ ಜನಪದ ಕತೆಗಳು ಹುಟ್ಟಿಕೊಂಡವು. ನಂತರ ಶಿಷ್ಟ ಕತೆಗಳು ರೂಪುಗೊಂಡವು. ತದನಂತರದಲ್ಲಿ ಸಣ್ಣಕತೆಗಳೆಂಬ ವಿಶಿಷ್ಟ ಪ್ರಕಾರ ಕಾಣಿಸಿಕೊಂಡಿತು.

ಆಧುನಿಕ ಸಣ್ಣ ಕತೆಗಳ ಮಟ್ಟಿಗೆ ಹೇಳುವುದಾದರೆ, ೨೦ನೇ ಶತಮಾನದಲ್ಲಿ ಹಲವಾರು ನೆಲೆಗಳ ಪ್ರಭಾವದಿಂದ ಭಾರತದಲ್ಲಿ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಒಂದು ರೀತಿಯ ಹೊಸ ಮಾರ್ಪಾಡು ಉಂಟಾಯಿತು. ಈ ಹೊಸ ಸಂವೇದನೆಗಳಿಗೆ ಮತ್ತು ವಿಚಾರಗಳಿಗೆ ಹೊಸ ಅಭಿವ್ಯಕ್ತಿ ದೊರೆಯಿತು. ಸಣ್ಣಕತೆ ಇಂತಹ ಅರ್ಥ ಪೂರ್ಣ ಹೊಸ ಸಂಶೋಧನೆಗಳಲ್ಲಿ ಬಹುಮುಖ್ಯವಾದದ್ದು. ಭಾರತದಲ್ಲಿ ಮೊದಲಿನಿಂದಲೂ ಕಥನ ಪರಂಪರೆ ಇತ್ತು. ನಮ್ಮ ಪುರಾಣ, ಇತಿಹಾಸಗಳಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ಕಥಾ ಪ್ರಪಂಚವೇ ಮುಖ್ಯವಾಗಿದೆ. ಆದರೆ ಸಣ್ಣಕಥೆ ಎಂಬುದು ಆಧುನಿಕ ಪ್ರಜ್ಞೆಯ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿದ್ದು, ಪಾಶ್ಚಿಮಾತ್ಯ ಪ್ರಭಾವದಿಂದಲೆ ಎಂಬುದನ್ನು ಮರೆಯುಂತಿಲ್ಲ. ಹೀಗೆ ಸಂಕೀರ್ಣತೆ, ವಿಷಯ ವೈವಿಧ್ಯತೆ ಮತ್ತು ತಂತ್ರ ವೈಶಿಷ್ಟ್ಯತೆಗಳಿಂದಾಗಿ ಸಣ್ಣಕತೆಗಳು ವೇಗವಾಗಿ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿತು.

ಈ ಸಣ್ಣಕತೆಗಳ ಉಗಮಕ್ಕೆ ಬ್ರಿಟೀಷರ ಆಗಮನ ಹಾಗೂ ಅವರು ಜಾರಿಗೆ ತಂದ ಕಡ್ಡಾಯ ಇಂಗ್ಲಿಷ್ ಕಲಿಕೆಯ ನೀತಿ ಬಹು ಮುಖ್ಯ ಕಾರಣವೆಂದು ಹೇಲಬಹುದು. ಇದರಿಂದಾಗಿ ಯೂರೋಪಿನ ಸಾಹಿತ್ಯವನ್ನು ಓದಲು ಸಾಧ್ಯವಾಯಿತು. ಅಂದಿನ ದಿನಗಳಲ್ಲಿ ಕ್ಷಿಪ್ರವಾಗಿ ಬೆಳವಣಿಗೆಯಾಗಿ ವೈಜ್ಞಾನಿಕ ಅನ್ವೇಷಣೆಯಾಗಿ ಯಂತ್ರಗಳ ಬಳಕೆ ಜಾರಿಗೆ ಬಂದಿತು. ಆಧುನಿಕ ಅಭಿರುಚಿಯಂತೆ ಯೂರೋಪಿನ ರೊಮ್ಯಾಂಟಿಕ್ ಸಾಹಿತ್ಯ ತನ್ನತ್ತ ಸೆಳೆಯಿತು. ಇದರಿಂದಾಗಿ ಇಂಗ್ಲೀಷಿನ ಕತೆಗಳ ಪರಿಚಯವಾಯಿತು. ನಮ್ಮ ಪಾರಂಪರಿಕ ಕತೆಗಳಿಗೂ ಇಂಗ್ಲೀಷಿನ ಕತೆಗಳಿಗೂ ಕೆಲವು ಭಿನ್ನತೆಗಳಿದ್ದು, ಅವುಗಳ

ಸ್ವರೂಪವನ್ನು ಕಂಡಂತಹ ನಮ್ಮವರ ಕನ್ನಡದಲ್ಲೂ ಈ ರೀತಿಯ ಕತೆಗಳು ಬರಲಿ ಎಂಬ ಆಶಯವೇ ಸಣ್ಣಕತೆಗಳ ಉಗಮಕ್ಕೆ ಕಾರಣವಾಯಿತು. ಭಾರತೀಯ ಕಥನಗಳು ಕೆಲವೊಂದು ಉದ್ದೇಶಗಳನ್ನು ಹೊಂದಿರುತ್ತವೆ. ಅಂದರೆ ಶುಭದೊಂದಿಗೆ ಪ್ರಾರಂಭವಾಗುವುದೋ ಅಥವಾ ಸುಖಾಂತವನ್ನೋ ಅವು ಬಯಸುತ್ತವೆ. ಅದೇ ರೀತಿ ಒಂದು ದೈವಿಕ ಕಲ್ಪನೆಯನ್ನು ಅವು ಹೊಂದಿರುತ್ತವೆ. ಆದರೆ ಈ ರೀತಿಯ ಕಡ್ಡಾಯವೆಂಬುದು ಪಾಶ್ಚಾತ್ಯರ ಕತೆಗಳಲ್ಲಿ ಕಾಣಲು ಸಾಧ್ಯವಿಲ್ಲ. ಒಟ್ಟಾರೆಯಾಗಿ ಬ್ರಿಟೀಷರ ಆಗಮನ, ಇಂಗ್ಲಿಷ್ ಕಲಿಕೆ, ಸಣ್ಣಕತೆಗಳು ಬರಲಿಕ್ಕೆ ಕಾರಣವಾಗಿವೆ.

೭೦ರ ದಶಕದಲ್ಲಿ ಹೊಸ ಆಂದೋಲನವಾಗಿ ರೂಪುಗೊಂಡ ರೈತ ಚಳುವಳಿ, ದಲಿತ ಚಳುವಳಿ, ಮಹಿಳಾ ಚಳುವಳಿಗಳು ೯೦ ರ ದಶಕದ ಹೊತ್ತಿಗೆ ಕ್ಷೀಣಿಸತೊಡಗಿದವು. ಈ ಸಂದರ್ಭದಲ್ಲಿ ಬಂದಂತಹ ಹೊಸ ಆರ್ಥಿಕ ನೀತಿಯ ಪರಿಣಾಮದಿಂದಾಗಿ ವಿಶ್ವದಾದ್ಯಂತ ಮುಕ್ತ ಮಾರುಕಟ್ಟೆ ತೆರೆದುಕೊಂಡಿತು. ಇಡೀ ವಿಶ್ವವೇ ಒಂದು ಅಂಗಡಿಯಾಗಿ ಕಾಣತೊಡಗಿತು. ಮುಕ್ತ ಮಾರುಕಟ್ಟೆಯ ಜೊತೆಯಲ್ಲಿ ಬಂದ ಖಾಸಗೀಕರಣ, ಜಾಗತೀಕರಣ, ಉದಾರೀಕರಣಗಳು ಒಟ್ಟಿಗೆ ಬಂದು ಜನರ ಬದುಕಿನ ವಿನ್ಯಾಸವನ್ನು ಬದಲಿಸಿದವು. ಇದರಿಂದ ಪ್ರತಿಯೊಬ್ಬ ವ್ಯಕ್ತಿಯ ಸಣ್ಣ ಸಣ್ಣ ವೈಶಿಷ್ಟ್ಯತೆಗಳು ಜಗತ್ತಿಗೆ ತೆರೆದುಕೊಂಡವು. ಬಹಳ ಸಂಕ್ಷಿಪ್ತವಾದ ಕಾಲಾವಧಿಯಲ್ಲಿ ಓದುಗರಿಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳದಂತೆ ಒಂದಷ್ಟು ಖಚಿತವಾಗಿರುವಂತಹ ವಿವರಣೆಗಳನ್ನು ನೀಡಬಹುದಾದಂತಹ ಸಣ್ಣಕತೆಗಳು ರಚನೆಯಾದವು.

ಕತೆಯ ವಸ್ತು ಕಿರಿದಾಗಿದ್ದರೂ, ಸಂಕ್ಷಿಪ್ತತೆ ಇದರ ಮುಖ್ಯ ಗುಣವಾಗಿದ್ದರೂ ಇದರ ಬಹಳ ಮುಖ್ಯವಾದ ಸಾಧ್ಯತೆಯೆಂದರೆ ಪರಿಣಾಮದಲ್ಲಿನ ಅಗಾಧತೆ ಮತ್ತು ಅನನ್ಯತೆ. ಒಬ್ಬ ವ್ಯಕ್ತಿಯ ಕತೆ ಎನಿಸಿದರೂ ಆ ವ್ಯಕ್ತಿ ಎಲ್ಲರಲ್ಲಿಯೂ ಇರುವವನಾದ ಕಾರಣ ಓದುಗನಿಗೆ ಇದು ತನ್ನದೇ ಕತೆ ಎಂಬಂತೆ ಭಾಸವಾಗುವ, ತನ್ನ ಬದುಕಿಗೆ ಹಿಡಿದ ಕನ್ನಡಿ ಎಂದೆನಿಸುವ, ಆ ಕನ್ನಡಿಯಲ್ಲಿ ಕಾಣುವ ತನ್ನ ಬದುಕಿನ ಓರೆ ಕೋರೆಗಳನ್ನು ಸರಿಪಡಿಸಿಕೊಂಡು ಒಪ್ಪವಾಗಿಸಿಕೊಳ್ಳುವ ಸಾಧ್ಯತೆ ಈ ಕತೆಯಿಂದ ಆಗುವ ಒಟ್ಟು ಪರಿಣಾಮವೆಂದುಕೊಳ್ಳಬಹುದು.

**ವ್ಯಾಖ್ಯೆಗಳು:**

- "ಓದಲು ಅರ್ಧಗಂಟೆಯಿಂದ ಒಂದು ಅಥವಾ ಎರಡು ಗಂಟೆಗಳ ಕಾಲ ತೆಗೆದುಕೊಳ್ಳುವ ಸಂಕ್ಷಿಪ್ತವಾದ ಗದ್ಯ ನಿರೂಪಣೆ" ಎಂದು ಸಣ್ಣಕತೆಯ ಜನಕ ಅಮೇರಿಕಾದ ಎಡ್ಗರ್ ಅಲೆನ್ ಪೋ ಹೇಳಿದ್ದಾರೆ.
- ಮಿತವ್ಯಯದ ದೃಷ್ಟಿ ಇಲ್ಲಿ ಮುಖ್ಯವಾಗುತ್ತವೆ.
- ಆಯ್ದ ಘಟನೆಗಳನ್ನು ವಿಶಿಷ್ಟವಾಗಿ ನಿರೂಪಿಸುವ ಸಿಂಗಲ್ ಎಫೆಕ್ಟ್ ತರುವ ಪ್ರಯತ್ನವನ್ನು ಸಣ್ಣ ಕತೆಗಳು ಮಾಡುತ್ತವೆ.

- ಸಣ್ಣಕತೆ ಎಂಬ ಪದಕ್ಕೆ ಇಂಗ್ಲೀಷಿನಲ್ಲಿ "ಖುಂಡಿಣ ಖಣಂಡಿಥಿ" ಪದದ ಭಾಷಾಂತರವಾಗಿದೆ. ಸಣ್ಣ ಎಂಬ ಪದಕ್ಕೆ ಖಟಚಿಟಟ, ಮಿಣಣಟಜ, ಮಿಟಥಿ, ಒಟಿಣಜ ಮುಂತಾದ ಪದಗಳಿದ್ದರೂ, ಖಟಚಿಟಟ ಎಂಬ ಪದವನ್ನು ಬಿಟ್ಟರೆ, ಉಳಿದವು ಅಷ್ಟು ಸಮಂಜಸವಲ್ಲವೆಂದು ಖಟಚಿಟಟ ಪದಕ್ಕೆ ಖುಂಡಿಣ ಎಂಬ ಪದವು ಹೆಚ್ಚು ಸಾಪೇಕ್ಷವಾಗುವುದರಿಂದ ಇದನ್ನು ಬಳಸಲಾಗಿದೆ. ( ಅಮೂರರ ಹೇಳಿಕೆ).

ಸಣ್ಣಕತೆಯನ್ನು ಈ ಹೆಸರಿನಿಂದ ಕರೆಯಲು ಪ್ರಮುಖವಾಗಿ ಎರಡು ಕಾರಣಗಳಿವೆ:

೧) ಕತೆಯ ವಸ್ತು ಸಣ್ಣದಾಗಿದೆ.

೨) ನಿರ್ದಿಷ್ಟ ಉದ್ದೇಶಿತ ಪರಿಣಾಮಕ್ಕಾಗಿಯೇ ವಸ್ತುವನ್ನು ಚಿಕ್ಕದಾಗಿಸಿರಬಹುದು.

- ಮೊದಲನೆಯ ಅಂಶಕ್ಕೆ ಸಂಬಂಧಿಸಿದಂತೆ ಕತೆಯ ವಸ್ತುವೇ ಚಿಕ್ಕದಾಗಿರುತ್ತದೆ. ಅದರ ಸುತ್ತಹೆಣೆದ ಕತೆ ಇದಾಗಿರುವುದರಿಂದ ಅದು ಸಂಕ್ಷಿಪ್ತವಾಗಿರುತ್ತದೆ.

- ಎರಡನೇ ಅಂಶಕ್ಕೆ ಸಂಬಂಧಿಸಿದಂತೆ ತಂತ್ರ ನಿರ್ವಹಣೆ ಬಹಳ ಮುಖ್ಯವಾಗಿರುತ್ತದೆ. ಇಲ್ಲಿ ಸಣ್ಣ ವಸ್ತುವನ್ನು ಪರಿಣಾಮಕಾರಿಯಾಗಿ ನಿರ್ದಿಷ್ಟಿತ ಉದ್ದೇಶವನ್ನು ಅದು ಸಾಧಿಸಬೇಕಗಿರುತ್ತದೆ. ಒಟ್ಟಾರೆಯಾಗಿ ಸಣ್ಣಕತೆಯ ಸಂಕ್ಷಿಪ್ತತೆಯೇ ಅದರ ಎಲ್ಲಾ ಘಟಕಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಆದ್ದರಿಂದ ಅದು ಇತರ ಕತೆಗಳಿಗಿಂತ ಭಿನ್ನವಾಗಿರುತ್ತದೆ.

  ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಸ್ತ್ರೀ ಸಂಪಾದನೆ, ಹೀಗೆ ಕನ್ನಡದಲ್ಲಿ ಬಗೆಬಗೆಯ ಧೋರಣೆಗನುಗುಣವಾಗಿ ಅನೇಕ ಸಣ್ಣ ಕತೆಗಳು ರಚನೆಯಾಗಿವೆ. ಪಂಜೆ ಮಂಗೇಶರಾಯರು, ಆನಂದಕಂದ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಕುವೆಂಪು, ಬೆಸಗರಹಳ್ಳಿ ರಾಮಣ್ಣ, ಕೊಡಗಿನ ಗೌರಮ್ಮ, ತ್ರಿವೇಣಿ, ಅನುಪಮಾ ನಿರಂಜನ, ವೈದೇಹಿ, ನಾಗವೇಣಿ, ದೇವನೂರ ಮಹಾದೇವ, ಕುಂ.ವೀರಭದ್ರಪ್ಪ, ಯಶವಂತ ಚಿತ್ತಾಲ, ಜಯಂತ್ ಕಾಯ್ಕಿಣಿ ಹೀಗೆ ಇಂದಿನವರೆಗೆ ಈ ಭಿನ್ನ ಬಗೆಯ ಕತೆಗಾರರನ್ನು ಗುರುತಿಸಬಹುದು.

**ನವ್ಯೋತ್ತರದ ಕಂಡು ಬರುವ ಕತೆಗಾರರಲ್ಲಿ ಕಾಯ್ಕಿಣಿ ಪ್ರಮುಖರು.**

ಕನ್ನಡ ಕಥಾ ಸಾಹಿತ್ಯಕ್ಕೆ ನಗರ ಪ್ರಜ್ಞೆಯನ್ನು ತಮ್ಮ ಬರವಣಿಗೆಯ ಮೂಲಕ ಪರಿಚಯಿಸುತ್ತಿರುವ ಬಹುಮುಖ ಪ್ರತಿಭೆಯ "ಜಯಂತ ಕಾಯ್ಕಿಣಿಯವರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ದಲ್ಲಿ ೧೯೫೫ ರಲ್ಲಿ ಜನಿಸಿದರು. ಇವರು ಖ್ಯಾತ ವಿಚಾರವಾದಿ ಹಾಗೂ ಹೆಸರಾಂತ ಸಾಹಿತಿಗಳಾದ ಡಾ॥ ಗೌರೀಶ್, ಕಾಯ್ಕಿಣಿಯವರ ಮಗ. ಸಮಾಜಸೇವಕಿ ಶಾಂತಾಬಾಯಿ ಇವರ ತಾಯಿ. ತಂದೆ ವೃತ್ತಿಯಲ್ಲಿ ಹೈಸ್ಕೂಲು ಶಿಕ್ಷಕರಾಗಿದ್ದ ಕನ್ನಡದ ಮಹತ್ವದ ಚಿಂತನಶೀಲ

ಬರಹಗಾರರೆಂದು ಹಾಗೂ ವಿಚಾರವಾದಿ ಸಾಹಿತ್ಯದ ಆದ್ಯ ಪ್ರವರ್ತಕರೆಂದು ಗೌರವದಿಂದ ಗುರುತಿಸಿಕೊಳ್ಳುತ್ತಾರೆ. ಇವರು ಕನ್ನಡ ಸಾಹಿತ್ಯದಲ್ಲಿ ಕವಿಗಳಾಗಿ, ನಾಯಕರಾಗಿ, ವಿಮರ್ಶಕರಾಗಿ, ಅಂಕಣಕಾರರಾಗಿ, ಪ್ರಬಂಧಕರಾಗಿ, ಅನುವಾದಕರಾಗಿ ಇವರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಲ್ಲದೆ ಇವರಿಗೆ ಕನ್ನಡ, ಇಂಗ್ಲೀಷ್, ಸಂಸ್ಕೃತ ಕೊಂಕಣಿ, ಮರಾಠಿ ಹೀಗೆ ಹಲವು ಭಾಷಾ ಪಾಂಡಿತ್ಯವನ್ನು ಇವರು ಹೊಂದಿದ್ದರು. ತಮ್ಮ ಬದುಕಿನ ಕೊನೆಯ ಉಸಿರಿನ ತನಕ ಅಂದರೆ ಸತತವಾಗಿ ಎಪ್ಪತ್ತು ವರ್ಷಗಳಷ್ಟು ಸಮಯ ನಿರಂತರವಾಗಿ ಬರೆಯುತ್ತ ತಮ್ಮ ವಿಶಿಷ್ಟವಾದ ವೈಚಾರಿಕತೆಯಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಸಿದ್ದಾರೆ. ಶಾಂತಾಬಾಯಿ ಪ್ರಾರಂಭದಲ್ಲಿ ಶಿಕ್ಷಕಿಯಾಗಿದ್ದು, ಜಯಂತರ ಜನನದ ನಂತರ ಮಗನ ಪಾಲನೆ-ಪೋಷಣೆ ಯಲ್ಲಿ ಮನೆಯಲ್ಲಿ ಉಳಿಯುವಂತಾಯಿತು. ಆದರೂ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಇವರು ಪತಿಯ ನೆರಳಾಗಿ ಸ್ಪಂದಿಸುತ್ತಾ ಬಿಡಿ ಲೇಖನಗಳ ಬರಹಗಾರ್ತಿಯಾಗಿ ಸಮಾಜ ಕಾರ್ಯಕರ್ತೆಯಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು".[೧]

ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಕುಟುಂಬದ, ತಂದೆ, ತಾಯಿಯರ ಪಾತ್ರ ಬಹಳ ಮುಖ್ಯವಾದುದು. ಜಯಂತರ ಸಾಹಿತ್ಯಾಸಕ್ತಿಗೆ ಮೊದಲ ಪ್ರೇರಣೆ ಒದಗಿ ಬಂದದ್ದೇ ಈ ನೆಲೆಯಿಂದ. ಇಂತಹ ಸಾಹಿತ್ಯದ ವಾತಾವರಣದಲ್ಲಿ ಜಯಂತ್ ಕಾಯ್ಕಿಣಿಯವರ ಬಾಲ್ಯ ಕಳೆಯಿತು. "ತಂದೆ ಸಾಹಿತಿಯಾಗಿದ್ದ ಕಾರಣದಿಂದ ಸದಾ ಸಾಹಿತ್ಯಸಕ್ತರಿಂದ ಮನೆ ಸದಾ ತುಂಬಿ ತುಳುಕುತ್ತಿತ್ತು. ಸದಾ ಓದುವುದು, ತಾವು ಓದಿನಿಂದ ಪಡೆದ ಜ್ಞಾನವನ್ನು ಇತರರಿಗೆ ಹಂಚುವುದು ಗೌರೀಶರ ಜೀವನದ ಧ್ಯೇಯವಾಗಿತ್ತು. ಅಲ್ಲದೆ ಶಾಲೆಯ ಕಾರ್ಯಕ್ರಮಕ್ಕೆ ಆಗಮಿಸಿ, ನಂತರ ಕಾರ್ಯಕ್ರಮ ಮುಗಿಸಿ ಮನೆಗೆ ಆಗಮಿಸುತ್ತಿದ್ದ ಆ ಕಾಲದ ಸುಪ್ರಸಿದ್ದಾ ಸಹಿತಿಗಳ ಸಹವಾಸದ ಸವಿಯನ್ನು ಅರಿತಿದ್ದರು . ಇಂತಹ ವಾತಾವರಣದಲ್ಲಿ ಜಯಂತರುಬೆಳೆದರು. ಯಾವುದೇ ಜಯಂತರಿಗೆ ತಮ್ಮ ಪ್ರತಿಭೆಯ ಫಲದಿಂದ ಭಾಷಣ, ಪ್ರಬಂಧ ಮುಂತಾದವುಗಳಲ್ಲಿ ಭಾಗವಹಿಸಿದರೂ ಅದು ತಂದೆಯವರೇ ಬರೆದುಕೊಟ್ಟಿರಬಹುದೆಂಬ ಅಪವಾದಗಳು ಕೇಳಿಬರುತ್ತವಂತೆ. ಆದರೂ ಪರೋಕ್ಷವಾಗಿ ಸಾಹಿತ್ಯದ ಪ್ರಭಾವವಿರುವ ತಂದೆ ಬೀರಿದರಾದರೂ, ತಮ್ಮದೇ ಜ್ಞಾನ ಮೂಸೆಯಲ್ಲಿ ಹುದುಗಿದ್ದ ಪ್ರತಿಭೆ ತನ್ನ ಆಗಮನಕ್ಕಾಗಿ ಸೂಕ್ತವಾದ ಕಾಲವನ್ನು ಅದು ಎದುರು ನೋಡುತ್ತಿತ್ತು".[೨]

"ಕನ್ನಡ ಸಾಹಿತ್ಯ ಲೋಕದಲ್ಲಿ ಡಿ.ವಿ.ಜಿ-ಬಿ.ಜಿ.ಎಲ್, ಸ್ವಾಮಿ, ಕುವೆಂಪು-ತೇಜಸ್ವಿ, ಇವರಂತೆಯೇ ಗೌರೀಶ-ಜಯಂತ್ ಕಾಯ್ಕಿಣಿಯವರ ತಂದೆ ಮಗನ ಅಪರೂಪವಾದ ಜೋಡಿ ಪ್ರತಿಭಾವಂತನ ಮಗನಾಗಿ ಹುಟ್ಟಿ, ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಅಸ್ತಿತ್ವವನ್ನು ದಾಖಲಿಸಿದವರಲ್ಲಿ ತೇಜಸ್ವಿಯವರಂತೆಯೇ ಜಯಂತರೂ ಕೂಡ ಯಶಸ್ವಿಯಾದವರು. ಜಯಂತರು ಗೆಳೆಯರೊಡನೆ ಕೂಡಿ ಗೋಕರ್ಣದ ದೇವಾಲಯಗಳನ್ನು ಸುತ್ತುವುದು, ಸಿನಿಮಾ, ನಾಟಕಗಳ ವೀಕ್ಷಣೆ, ಯಕ್ಷಗಾನ, ಹರಿಕಥೆಗಳಿಗೆ ಹೋಗುವುದು, ಸಮುದ್ರ ತೀರದಲ್ಲಿ ಸುತ್ತುವುದು, ಇವೆಲ್ಲ ಅವರ ಆಸಕ್ತಿಯ ಕೇಂದ್ರಗಳಾಗಿದ್ದವು.

ಇವರು ಶಾಲೆ ಮುಗಿಸಿ ಕುಮುಟಾದ ಕಾಲೇಜಿಗೆ ಸೇರಿದ ನಂತರದಲ್ಲಿ ಅವರೇ ಹೇಳಿರುವಂತೆ, ೩ ಆಘಾತಗಳನ್ನು ಎದುರಿಸುವಂತಾಯಿತು. ೧) ಚಿಕ್ಕ ಊರಿನಿಂದ ದೊಡ್ಡ ಊರಿಗೆ ಹೋದದ್ದು ೨) ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಸೇರ್ಪಡೆ ೩) ಮನೆಬಿಟ್ಟು ಹಾಸ್ಟೆಲ್‌ನಲ್ಲಿ ವಾಸ".[೬]ಕೊನೆಗೆ ಹೊಂದಿಕೆಯಾಗದೆ ಮನೆಯಲ್ಲೇ ಉಳಿಯಬೇಕಾಗಿ ಬಂದಾಗ ಅಂದಿನ ನವ್ಯ ಕವಿ ಜಿ.ಎಸ್. ಅವಧಾನಿಯವರ ಕವನ ಸಂಕಲನ ಬೆಂಕಿಬಳ್ಳಿ, ಓದುವ ಅವಕಾಶ ಲಭಿಸಿತು. ಅದರಿಂದ ಪ್ರೇರಿತರಾಗಿ ಕವನ ಬರೆಯುವ ಆಸಕ್ತಿ ಮೂಡಿತು. (ಮಮತಾರಾವ್ ಕಥನಾವರಣ)

"೧೯೭೧ ರಲ್ಲಿ ಬರೆದ 'ಬಸಳೆ' ಮೊದಲ ಕವನ ಸಾಕ್ಷಿ ಪತ್ರಿಕೆಯಲ್ಲಿ ಪ್ರಕಟಗೊಂಡು ಅವರೊಬ್ಬ ಕವಿ ಎನ್ನುವ ಮಟ್ಟಿಗೆ ಅದು ಮುಂದುವರೆಯುವಂತೆ ಮಾಡಿತು. ಜಯಂತರ ಪ್ರಥಮ ಕವನ ಸಂಕಲನ 'ರಂಗದಿಂದೊಂದಿಷ್ಟು ದೂರಕ್ಕೆ', ೧೯೭೪ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತದ್ದು, ಅವರ ಅಸಾಧಾರಣ ಪ್ರತಿಭೆಗೆ ಸಾಕ್ಷಿಯಾಗಿದೆ".[೭]

"ಕುಮುಟಾದಲ್ಲಿ ಪದವಿಯನ್ನು ಪಡೆದರು. ನಂತರ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಯೋಕೆಮಿಸ್ಟ್ರಿಯಲ್ಲಿ ಸ್ನಾತಕೋತ್ತರ ಪದವಿಯನ್ನುಮುಗಿಸಿದರು. ಈ ಎರಡು ವರ್ಷದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾಹಿತ್ಯಾಭಿರುಚಿಯನ್ನು ಮೈಗೂಡಿಸಿಕೊಂಡಿದ್ದರು. ನಂತರ ೧೯೭೬ ರಲ್ಲಿ ಕೆಲಸ ಅರಸಿ ಮುಂಬೈಗೆ ಹೋದರು.೧೯೯೭-೯೮ರವರೆಗೆ ಮುಂಬೈನಲ್ಲಿಯೇ ಸ್ವತಂತ್ರ್ಯ ಬರಹಗಾರರಾಗಿ, ಲಿಂಟಾಸ್, ಮುದ್ರಾ ಮತ್ತು ತ್ರಿಕಾಯ ಜಾಹಿರಾತು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದೇ ಸಮಯದಲ್ಲಿ ಅಂದರೆ ೧೯೯೭ ರಲ್ಲಿ ಚೀನಾ ದೇಶಕ್ಕೆ ಕಳುಹಿಸಲ್ಪಟ್ಟ ಭಾರತೀಯ ಲೇಖಕರ ಪ್ರತಿನಿಧಿಯಾಗಿ ಕನ್ನಡದವರಾದ ಜಯಂತ್ ಕಾಯ್ಕಿಣಿಯವರು ಕೂಡ ಆಯ್ಕೆಗೊಂಡಿದ್ದರು ಎನ್ನುವುದು ಅಭಿಮಾನದ ಸಂಗತಿ. ಮುಂದೆ ೧೯೯೭-೯೯ ರ ಕಾಲಾವಧಿಯಲ್ಲಿ ಈ ಟಿ.ವಿ. ಕನ್ನಡ ವಾಹಿನಿಯ ಕಾರ್ಯಕ್ರಮ ಸಮಿತಿಯ ಸದಸ್ಯರಾಗಿ, ರಾಮೋಜಿ ಫಿಲ್ಮ್ ಸಿಟಿ ಹೈದರಾಬಾದಿನಲ್ಲಿ ಕಾರ್ಯಭಾರವನ್ನು ಮುಂದುವರೆಸಿದರು. (ಅಂತಃಕರಣ) ಜಯಂತ್ ಕಾಯ್ಕಿಣಿಯವರು ಕತೆಗಾರರರಾಗಿ, ನಾಟಕಗಾರರಾಗಿ, ಅನುವಾದಕರಾಗಿ ಅಂಕಣಕಾರರಾಗಿ ಹೆಸರನ್ನು ಮಾಡಿದ್ದಾರೆ".[೮]

**ಅವರು ಬರೆದಿರುವ ಪ್ರಮುಖ ಕೃತಿಗಳೆಂದರೆ.**

ಕವಿತಾ ಸಂಗ್ರಹ: "ರಂಗಮಂದಿರದಿಂದೊಂದಿಷ್ಟು ದೂರ ( ೧೯೭೪), ಕೋಟಿತೀರ್ಥ (೧೯೮೨) ಶ್ರಾವಣ ಮಧ್ಯಾಹ್ನ ( ೧೯೮೭) ನೀಲಿ ಮಳೆ (೧೯೯೨), ಒಂದು ಜಲೇಬಿ (೨೦೦೪)

ಕಥಾ ಸಂಕಲನಗಳು : ತೆರೆದಷ್ಟೇ ಬಾಗಿಲು ( ೧೯೮೨) ಗಾಳ ( ೧೯೮೨), ದಗಡೂ ಪರಬನ ಅಶ್ವಮೇಧ ( ೧೯೮೯), ಅಮೃತ ಬಳ್ಳಿಯ ಕಷಾಯ ( ೧೯೯೬), ಬಣ್ಣದ ಕಾಲು ( ೧೯೯೯) ತೂಫಾನ್ ಮೇಲ್ ( ೨೦೦೫), ಚಾರ್ ಮಿನಾರ್ ( ೨೦೧೨)

**ನಾಟಕಗಳು :** ಸೇವಂತಿ ಪ್ರಸಂಗ ( ೧೯೮೫),ಜತೆಗಿರುವವನು ಚಂದಿರ (೨೦೦೧) ಇತೀ ನಿನ್ನ ಅಮೃತಾ (೨೦೦೩), ಆಕಾಶ ಬುಟ್ಟಿ (೨೦೦೪)

**ಅಂಕಣ ಬರಹ :** ಬೊಗಸೆಯಲ್ಲಿ ಮಳೆ (೨೦೦೧), ಶಬ್ದತೀರ (೨೦೦೬), ಟೂರಿಂಗ್ ಟಾಕೀಸ್, (೨೦೧೫), ಲಭಿಸಿದೆ".[6] ಅಲ್ಲದೆ ತುಮಕೂರು ವಿಶ್ವವಿದ್ಯಾಲಯವು (೨೦೧೧) ಇತ್ತೀಚೆಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿದೆ. ಕೃತಿಕಾರರನ್ನಾಗಿ ಇವರನ್ನು ರೂಪಿಸುವಲ್ಲಿ ಕುಟುಂಬಕಷ್ಟೆ ಮಹತ್ತರವಾದ ಪಾತ್ರ ವಹಿಸಿದ್ದು ಇವರ ಬದುಕನ್ನು ಕಟ್ಟಿಕೊಳ್ಳಲು ಅರಸಿಹೋದ ಮುಂಬಯಿ ನಗರ ಜೀವನದ ಒತ್ತಡಗಳಲ್ಲಿ ಕ್ರಿಯಾಶೀಲತೆಯನ್ನೇ ಕಳೆದುಕೊಳ್ಳುವ ಮಂದಿ ಬಹಳಷ್ಟು. ಆದರೆ ಈ ಜನಸಾಂದ್ರತೆಯಿಂದ ಕೂಡಿದ, ಹಲವು ಬಗೆಯ ಇಕ್ಕಟ್ಟುಗಳಿಗೆ ಸಿಕ್ಕಿಸುವ ಈ ನಗರದ ಸಂಕೀರ್ಣತೆಯನ್ನೇ ಸಕಾರಾತ್ಮಕವಾಗಿ ಸ್ವೀಕರಿಸಿ, ತಮ್ಮ ಕ್ರಿಯಾಶೀಲತೆಯ ಕುಲುಮೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದವರು ಕಾಯ್ಕಿಣಿ.

ಜಯಂತ್ ಕಾಯ್ಕಿಣಿಯವರು "ಟೆಲಿವಿಷನ್ ಸಂದರ್ಶಕರಾಗಿದ್ದು (ಕುವೆಂಪು, ಕಾರಂತ, ಬೇಂದ್ರೆ, ರಾಜ್ ಕುಮಾರ್ ಕುರಿತು ಈ ಟಿವಿಯ ನಮಸ್ಕಾರ ಸರಣಿ, ಕಾರ್ಯಕ್ರಮವನ್ನೂ, ಹಾಗೆಯೇ ಚಿತ್ರಕಥೆ, ಸಂಭಾಷಣೆಗಾರರಾಗಿ ದ್ವೀಪ, ಪೂರ್ವಾಪರ, ಚಿಗುರಿದ ಕನಸು, ರಮ್ಯಚೈತ್ರಕಾಲ, ಸಿನಿಮಾಗಳಿಗೆ ಹಾಗೂ ಗೀತರಚನೆಯನ್ನು ಮುಂಗಾರು ಮಳೆ, ಮಿಲನ, ಗೆಳೆಯ, ಗಾಳಿಪಟ, ಹಾಗೆ ಸುಮ್ಮನೆ, ಮೊಗ್ಗಿನ ಮನಸ್ಸು,ಇಂತಿ ನಿನ್ನ ಪ್ರೀತಿಯ, ಮನಸಾರೆ, ಜಂಗ್ಲಿ, ಬಿರುಗಾಳಿ, ಪಂಚರಂಗಿ, ಪೃಥ್ವಿ, ಕೃಷ್ಣನ್ ಲವ್ ಸ್ಟೋರಿ, ಲೈಫು ಇಷ್ಟೇನೆ, ಚಿಂಗಾರಿ, ಪರಮಾತ್ಮ, ಅಣ್ಣ ಬಾಂಡ್ ಇತ್ಯಾದಿ ಚಲನಚಿತ್ರಗಳಿಗೆ ಮಾಡಿದ್ದಾರೆ. ಹೀಗೆ ಬಹುಮುಖ ಪ್ರತಿಭೆಯುಳ್ಳ ಜಯಂತ್ ಕಾಯ್ಕಿಣಿಯವರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರೂ ಮುಂಬೈಯಲ್ಲಿ ಸುಮಾರು ೨೩ ವರ್ಷ ಬಯೋಕೆಮಿಸ್ಟ್ ಆಗಿ ದುಡಿದು ೨೦೦೦ ರಿಂದೀಚೆಗೆ ಬೆಂಗಳೂರಿಗೆ ಬಂದು ಫ್ರೀಲಾನ್ಸರ್ ಆಗಿ ಬರವಣಿಗೆ ನಡೆಸಿದ್ದಾರೆ"[7].

ಇವರ ಪ್ರತಿಭೆಗೆ ಹಲವಾರು ಪ್ರಶಸ್ತಿಗಳು ಸಾಕ್ಷಿಯಾಗಿದ್ದು, ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಪ್ರತಿಷ್ಠಿತ 'ಕುಸುಮಾಗ್ರಜ', ನಾಲ್ಕು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಿನಕರ ದೇಸಾಯಿ ಕಾವ್ಯ ಪ್ರಶಸ್ತಿ, ಬಿ.ಹೆಚ್., ಶ್ರೀಧರ್ ಕಥಾಪ್ರಶಸ್ತಿ, ದೆಹಲಿಯ ಕಥಾ ಪುರಸ್ಕಾರ, ಕರ್ನಾಟಕ ಸರ್ಕಾರದ ಅತ್ಯುತ್ತಮ ಚಲನಚಿತ್ರ ಸಂಭಾಷಣೆಗಾರ, ಅತ್ಯುತ್ತಮ ಗೀತರಚನೆಕಾರ ಪ್ರಶಸ್ತಿಗಳ ಜೊತೆ ಎರಡು ಬಾರಿ ಫಿಲ್ಮ್‌ಫೇರ್ ಶ್ರೇಷ್ಠ ಗೀತ ರಚನೆಕಾರ ಪ್ರಶಸ್ತಿಗಳೂ ಇವರಿಗೆ ಸಂದಿವೆ.

ಕನ್ನಡ ಸಾಹಿತ್ಯದಲ್ಲಿ ನವ್ಯದ ಪ್ರಭಾವವು ಇಳಿಮುಖವಾಗುವ ಸಂದರ್ಭದಲ್ಲಿ ಬರೆಯಲು ಪ್ರಾರಂಭಿಸಿದ ಹೊಸ ತಲೆಮಾರಿನ ಕಥೆಗಾರರಾಧ ರಾಘವೇಂದ್ರ ಪಾಟೀಲ, ಎಸ್. ದಿವಾಕರ, ವಿವೇಕಶಾನಭೋಗ, ಮೊಗಳ್ಳಿ ಗಣೇಶ್

ಮುಂತಾದವರ ಸಾಲಿನಲ್ಲಿ ಜಯಂತ್ ಕಾಯ್ಕಿಣಿಯವರೂ ಒಬ್ಬರು. ಅವರು ಕಾವ್ಯ, ಕಥೆ, ನಾಟಕ, ಅಂಕಣ ಬರಹ ಹೀಗೆ ವಿಭಿನ್ನ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿರುವ ಜಯಂತರು ತಮ್ಮ ಬರವಣಿಗೆಯ ಮೂಲಕ ವಿಶಿಷ್ಟವಾಗಿ ಅಭಿವ್ಯಕ್ತಿಸುವ ಮಾರ್ಗಕಂಡು ಕೊಂಡವರು ನಿರ್ದಿಷ್ಟವಾದ ವಸ್ತು ಪಂಥಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ.

ಸಾಮಾನ್ಯ ಜನರನ್ನು ಗಮನಿಸಿ ಅವರ ಜೀವನ ಕ್ರಮವನ್ನು ಅರಿಯುವ ತವಕ ಅವರಲ್ಲಿದೆ. ನಿತ್ಯದ ಬದುಕಿನಲ್ಲಿ ಇತರರು ಕಂಡೂ ಕಾಣದ್ದನ್ನು ಹಲವರಿಗೆ ತಿಳಿಸಬೇಕೆನ್ನುವ ತವಕ ಜಯಂತರ ಒಟ್ಟು ಬರಹದಲ್ಲಿ ಎದ್ದು ಕಾಣುವುದು ಒಂದು ವಿಶೇಷತೆ ಇದನ್ನು ಅವರು ತಮ್ಮ ಕತೆಗಳಲ್ಲಿ ಬಹಳ ಯಶಸ್ವಿಯಾಗಿ ಚಿತ್ರಣ ಮಾಡಿದ್ದಾರೆ.

ಜಯಂತರು ಹೆಚ್ಚಿನ ಸಂಖ್ಯೆಯಲ್ಲಿ ಮುಂಬಯಿಯ ಕತೆಗಳನ್ನು ಬರೆದರೂ ಅವರ ಕತೆಗಳಲ್ಲಿ ಹುದುಗಿರುವ ಕಾಣ್ಕೆ, ಸಾರ್ವಕಾಲಿಕ ಸಾರ್ವತ್ರಿಕವಾಗಿರುವಂತಹದು, ಜಾಗತೀಕರಣದ ಪ್ರಭಾವದಿಂದ ಯಾಂತ್ರಿಕನಾಗುತ್ತಿರುವ ಮನುಷ್ಯನಲ್ಲಿ ಮನುಷ್ಯತ್ವವನ್ನು ಜಾಗೃತಗೊಳಿಸಿ ಭಾವಪರವಶ ನಾಗುವಂತಹ ಕತೆಗಳನ್ನು ಬರೆಯುತ್ತಿದ್ದಾರೆ. ಸಾಮಾನ್ಯರಲ್ಲೂ ಭರವಸೆಯನ್ನು ಮೂಡಿಸಿ, ಅಂತಹವರಲ್ಲೂ ಜೀವನದ ಆಸಕ್ತಿಯನ್ನು ಮೂಡಿಸುವಂತಹ ಕಥೆಗಳ ರಚನೆಯೇ ಇವರ ವಿಶಿಷ್ಟತೆ.

ಸಾಮಾನ್ಯರಲ್ಲಿ ಅತಿ ಸಾಮಾನ್ಯರೆನಿಸಿರುವವರ ಬದುಕಿನ ವಿಧಾನದಲ್ಲೂ ಅಡಗಿರಬಹುದಾದ ವಿಶಿಷ್ಟ ವಿನ್ಯಾಸಗಳನ್ನು ಗುರುತಿಸುವ ಮತ್ತು ಮುಖ್ಯವಾಹಿನಿಗೆ ಇವುಗಳನ್ನು ಪರಿಚಯಿಸುವ ಪ್ರಯತ್ನ ಮಾಡಿರುವುದೇ ಇವರ ವಿಶಿಷ್ಟತೆ ಎನ್ನಬಹುದು.

**ಕೊನೆಟಿಪ್ಪಣಿಗಳು.**

೧. ಜಯಂತ ಕಾಯ್ಕಿಣಿಯವರ ಕಥನಾವರಣ, ಪುಟ ಸಂಖ್ಯೆ ೨೦, ೨೦೧೫

೨. ಕಥನಾವರಣ, ಪುಟ ಸಂಖ್ಯೆ ೨೦, ೨೦೧೫

೩. ಶಬ್ದಾತೀರ, ಪುಟಸಂಖ್ಯೆ ೧೩೩

೪. ಕಥನಾವರಣ, ಪುಟ ಸಂಖ್ಯೆ ೨೧, ೨೦೧೫

೫. ಕಥನಾವರಣ, ಪುಟ ಸಂಖ್ಯೆ ೨೩, ೨೦೧೫

೬. ಕಥನಾವರಣ, ಪುಟ ಸಂಖ್ಯೆ ೨೮, ೨೦೧೫

೭. ಜಂಯತ್ ಕಾಯ್ಕಿಣಿರವರ ಕಥೆಗಳು

## ಅಧ್ಯಯನದ ವಸ್ತು, ಉದ್ದೇಶ, ವ್ಯಾಪ್ತಿ, ವಿಧಾನ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಣ್ಣ ಕಥೆಗಳಿಗೆ, ತನ್ನದೆ ಆದ ವಿಶಿಷ್ಠ ಪರಂಪರೆಯಿದೆ. ಅಂದರೆ ಕನ್ನಡ ಸಣ್ಣ ಕಥೆಗಳ ಬರವಣಿಗೆಯು ನವ್ಯೋದಯ ಪೂರ್ವದಿಂದ ಹಿಡಿದು ಆಧುನಿಕೋತ್ತರ (ದಲಿತ–ಬಂಡಾಯ) ನಂತರದಲ್ಲಿಯೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಅಂತೆಯೇ ಜಯಂತ್ ಕಾಯ್ಕಿಣಿಯವರು ಆಧುನಿಕೋತ್ತರ ಬರಹಗಾರರಲ್ಲಿ ಒಬ್ಬರು. ಇವರು ಮೂಲತ: ಗೋಕರ್ಣದವರು ನಂತರ ಉದ್ಯೋಗ ನಿಮಿತ್ತವಾಗಿ ಬಹಳಷ್ಟು ವರ್ಷ ಮುಂಬಯಿಯ ನಿವಾಸಿಯಾಗಿದವರು. ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದು, ಇತ್ತೀಚೆಗೆ ಚಲನಚಿತ್ರ ರಂಗದಲ್ಲಿಯೂ ಸಾಹಿತಿಯಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೀಗೆ ಮುಂಬಯಿಯ ಹಾಗೂ ಗೋಕರ್ಣದ ಅನುಭವಗಳನ್ನು ಪಡೆದ ಇವರು ತಮ್ಮ ಸಾಹಿತ್ಯ ರಚನೆಗೆ ಇಲ್ಲಿಯ ಅನುಭವಗಳನ್ನು ಬಹುತೇಕ ಬಳಸಿಕೊಂಡಿದ್ದಾರೆ. (ಸಾಮಾನ್ಯರಲ್ಲಿ ಸಾಮಾನ್ಯರಾದವರನ್ನು ಕುರಿತು ಕತೆಗಳನ್ನು ಬರೆಯುತ್ತ ಅವರನ್ನು ಜಗತ್ತಿನ ಇತರ ಜನರಿಗೆ ಪರಿಚಯಿಸುತ್ತ ಅವರಿಂದ ಕಲಿಯಬಹುದಾದ ಗುಣಗಳನ್ನು, ಅವರನ್ನು ಮಾದರಿಯನ್ನಾಗಿಸಿಕೊಳ್ಳಬಹುದಾದ ಸಾಧ್ಯತೆಗಳನ್ನು ತಮ್ಮ ಕತೆಗಳಲ್ಲಿ ಅನಾವರಣಗೊಳಿಸುತ್ತಾರೆ.

ಒಟ್ಟಾರೆಯಾಗಿ ಕವನ, ಕಥಾಸಂಕಲನ, ನಾಟಕಕಾರರಾಗಿ, ಅಂಕಣಕಾರರಾಗಿ ಗುರುತಿಸಿಕೊಂಡಿರುವ ಜಯಂತ್‌ಕಾಯ್ಕಿಣಿಯವರ ಎಲ್ಲಾ ಕತೆಗಳನ್ನು ಓದಿಗಕೊಂಡು ಮತ್ತು ಅದಕ್ಕೆ ಪೂರಕವಾಗಿ ಯಶವಂತ ಚಿತ್ತಾಲರ ನಗರ ಕೇಂದ್ರಿತ ಬದುಕನ್ನು ಕುರಿತಾದ ಕತೆಗಳು ಹಾಗೂ ದಲಿತ ಬಂಡಾಯೋತ್ತರ ಕತೆಗಳನ್ನು ಓಡಿಕೊಂಡು ಜಯಂತ್ ಕಾಯ್ಕಿಣಿಯವರ ಸಣ್ಣ ಕಥೆಗಳಲ್ಲಿನ ವ್ಯಕ್ತಿ ವೈಶಿಷ್ಟ್ಯತೆಯನ್ನು ಗುರುತಿಸುವ ಉದ್ದೇಶವನ್ನು ಇಟ್ಟುಕೊಂಡು ಅಧ್ಯಯನ ಮಾಡಲಿದ್ದೇನೆ.

೧) ಜಯಂತ್ ಕಾಯ್ಕಿಣಿಯವರ ಕಥೆಗಳು ಪ್ರಧಾನವಾಗಿ ಸಾಮಾನ್ಯರಲ್ಲಿ ಅತಿ ಸಾಮಾನ್ಯರ ಬದುಕಿನ ಸುತ್ತ ಹೆಣೆದ ಕತೆಗಳಾಗಿವೆ.

೨) ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಗೋಕರ್ಣದ ಪ್ರಶಾಂತತೆ ಹಾಗೂ ಮುಂಬಯಿ ನಗರದಂತಹ ವ್ಯವಹಾರ ಕೇಂದ್ರಗಳನ್ನು ಕುರಿತವುಗಳಾಗಿವೆ.

೩) ಸಾಮಾನ್ಯ ಜನರ ಜೀವನ ಸಂವೇದನೆಯನ್ನು ಕುರಿತ ಕತೆಗಳಾಗಿವೆ.

೪) ಸ್ತ್ರೀಯರ ಸಂವೇದನೆ/ ಸಮಸ್ಯೆಗಳು ಹಾಗೂ ಪರಿವರ್ತನೆ ಹಾದಿಯಲ್ಲಿ ಸಾಗಿರುವುದರ ಸ್ಪಷ್ಟ ನೋಟ ಕಂಡು ಬರುತ್ತದೆ.

ಹಾಗಾಗಿ ನನ್ನ ಸಂಶೋಧನೆ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಸಣ್ಣ ಕತೆಗಳ ಸಂಕಲನಗಳು.

- ಅಮೃತ ಬಳ್ಳಿಯ ಕಷಾಯ
- ಬಣ್ಣದ ಕಾಲು
- ತೂಫಾನ್ ಮೇಲ್
- ಚಾರ್ ಮಿನಾರ್
- ದಗಡೂ ಪರಬನ ಅಶ್ವಮೇಧ
- ತೆರೆದಷ್ಟೇ ಬಾಗಿಲು

ಹೀಗೆ ೬ ಕಥಾ ಸಂಕಲನಗಳಲ್ಲಿ ಬರುವ ವಿವಿಧ ಕತೆಗಳನ್ನು ನನಗೆ ಅಂದರೆ ಮುಖ್ಯವೆಂದು ಕಂಡುಬರುವ ಕಥೆಗಳಲ್ಲಿ ಕಂಡು ಬರುವ ವ್ಯಕ್ತಿ ವಿಶಿಷ್ಟತೆ ಕುರಿತು ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದೇನೆ. ಈ ಮೇಲಿನ ಏಳು ಕಥಾ ಸಂಕಲನಗಳ ಎಲ್ಲಾ ಕತೆಗಳನ್ನು ಆಯ್ದುಕೊಳ್ಳದೆ ಕೆಲವಾರು ಕಥೆಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇನೆ..

ಕತೆಗಳ ಹೆಸರು : ಅಮೃತ ಬಳ್ಳಿಯ ಕಷಾಯ, ತೂಫಾನ್ ಮೇಲ್, ಮಧುಬಾಲ, ಡೈಮಂಡ್ ಸರ್ಕಸ್‌ನಲ್ಲಿ ಒಂದು ಹೆರಿಗೆ, ಸಂತೆಯ ದಿನ, ಚಾರ್ ಮಿನಾರ್, ಅಭಂಗ–ಅಭಿಸಾರ, ಕಣ್ಮರೆಯ ಕಾಡು, ಬಣ್ಣದ ಕಾಲು, ತನ್ಮಯಿ ಸೂಟಿ, ಹಾಲಿನ ಮೀಸೆ ಇತ್ಯಾದಿ, ಜಯಂತ್ ಕಾಯ್ಕಿಣಿಯವರ ಈ ಏಳು ಕಥಾ ಸಂಕಲನದಲ್ಲಿ ಆರಿಸಿಕೊಂಡಿರುವ ಕಥೆಗಳಲ್ಲಿ ಕಂಡು ಬರುವ ವ್ಯಕ್ತಿಯ ವಿಶಿಷ್ಟತೆಯನ್ನು ಮೂಲವಾಗಿ ಇರಿಸಿಕೊಂಡು ಈ ನನ್ನ ಸಂಶೋಧನೆಯನ್ನು ಮಾಡುವ ಉದ್ದೇಶವನ್ನು ಹೊಂದಿದ್ದೇನೆ. ಏಕೆಂದರೆ ಜಯಂತ್ ಕಾಯ್ಕಿಣಿಯವರ ವಿಶೇಷತೆ ಎಂದರೆ, ಸಾಮಾನ್ಯ ಜನರಲ್ಲಿ ಅತಿ ಸಾಮಾನ್ಯರೆನಿಸಿಕೊಂಡವರ ಅಸಾಮಾನ್ಯತೆಯನ್ನು ಗುರುತಿಸಿ ಅವರನ್ನು ತಮ್ಮ ಕಥೆಗಳಲ್ಲಿ ಮುಖ್ಯ ಪಾತ್ರಧಾರಿಗಳಾಗಿ ಆರಿಸಿಕೊಂಡಿರುವುದು. ಇಂದಿನ ಸಮಾಜದಲ್ಲಿ ಹಣವಂತರು, ಉದ್ಯೋಗಸ್ಥರು,. ಮೇಲ್ಪಂಕ್ತಿಯಲ್ಲಿ ಬರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕಥೆ ಬರೆಯುವುದು ಸಹಜ, ಆದರೆ, ಕಾಯ್ಕಿಣಿಯವರದು ಇದಕ್ಕಿಂತ ಭಿನ್ನವಾದ ಆಸಕ್ತಿ ಇದೊಂದು ವಿಶೇಷತೆಯೇ ಆಗಿದೆ. ಇದರಿಂದ ಓದುಗರಲ್ಲಿಯೂ ಹಲವಾರು ಬದಲಾವಣೆಗಳಾಗುವುದರ ಜೊತೆಗೆ, ಅತಿಸಾಮಾನ್ಯರ ಜೊತೆ ಇವರನ್ನೂ ಮಾದರಿಯಾಗಿರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ನಮ್ಮ ವರ್ತನೆಯು ಬಹಳ ನವಿರಾಗಿ ಮುಂದುವರೆಯುವಂತೆ ಸಮಾಜದಲ್ಲಿ ನಾವೂ ಅವರನ್ನು ಭಿನ್ನವಾಗಿ ಮತ್ತು ಆಪ್ತವಾಗಿ ಗುರುತಿಸುವಂತೆ ಮಾಡುತ್ತದೆ.

## ಸಮಾರೋಪ

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಒಟ್ಟಾರೆಯಾಗಿ ಕಂಡು ಬರುವುದು ಹಿಂದಿನ ನಗರ ಬದುಕಿನ ಚಿತ್ರಣಕ್ಕಿಂತ ಭಿನ್ನವಾಗಿ ಮಾನವೀಯ ನೆಲೆಗಳನ್ನು ಕಟ್ಟಿಕೊಡುವಂತಹ ಪಾತ್ರಗಳಾದ ಕಲಾವಿದರು, ವಯೋವೃದ್ಧರು, ಮಹಿಳೆಯರು, ಮಕ್ಕಳು ಟ್ಯಾಕ್ಸಿ ಚಾಲಕರು, ಬೀದಿ ಬದಿಯ ವ್ಯಾಪಾರಿಗಳು ಮುಂತಾದವರ ಕುರಿತಂತೆ ವಿಶಿಷ್ಟವಾದ ರೀತಿಯಲ್ಲಿ ಕಟ್ಟಿಕೊಡುತ್ತಾರೆ. ಕತೆಗಾರರ ವಿಶಿಷ್ಟ ಕೌಶಲವನ್ನು ಇಲ್ಲಿ ಗುರುತಿಸಿದ್ದೇನೆ. ನಗರದ ಬದುಕನ್ನು ಸಂಕೀರ್ಣ, ಅನೇಕ ಗೋಜಲುಗಳಿವೆ ಎಂದು, ಭಾವನಾತ್ಮಕತೆ ಸತ್ತು ಕೇವಲ ಯಾಂತ್ರಿಕತೆಯಿದೆ ಎಂದು ಹೇಳುವುದು ಸಾಮಾನ್ಯ. ಆದರೆ ಕಾಯ್ಕಿಣಿ ಇವೆಲ್ಲವುಗಳ ನಡುವೆಯೂ ಬದುಕಿನಲ್ಲಿರುವ ಸಾಧ್ಯತೆಗಳನ್ನು ಗುರುತಿಸಿ ಸಕಾರಾತ್ಮಕವಾಗಿ ನಾವು ಬದುಕನ್ನು ನೋಡುವಂತೆ ಮಾಡಿದ್ದಾರೆ. ಈ ಗೋಜಲುಗಳ ಮಧ್ಯೆಯೂ ಇರುವ ಮಾನವೀಯ ನೆಲೆಗಳನ್ನು ವಿಶಿಷ್ಟವಾಗಿ ಅನಾವರಣಗೊಳಿಸಿದ್ದಾರೆ. ಇವೆಲ್ಲವುಗಳನ್ನು ಗುರುತಿಸಿ, ಇದರ ಒಟ್ಟು ಫಲಿತವನ್ನು ಈ ಭಾಗದಲ್ಲಿ ತಿಳಿಸಲಿದ್ದೇನೆ. ಬರಹಗಾರರಾಗಿ ಬಹಳ ಮುಖ್ಯವಾಗಿ ಕತೆಗಾರರಾಗಿ ಬದುಕಿನ ಈ ಸೂಕ್ಷ್ಮ ನೆಲೆಗಳನ್ನು, ಇದರ ನಡುವಿನ ವ್ಯಕ್ತಿಗಳ ವಿಶಿಷ್ಠತೆಗಳನ್ನು ಗುರುತಿಸಿ ಅನಾವರಣಗೊಳಿಸುವ ವಿಶಿಷ್ಠ ಬರಹಗಾರರಾಗಿ ಜಯಂತ್ ಕಾಯ್ಕಿಣಿಯವರು ಹೇಗೆ ಪ್ರಾತಿನಿಧಿಕ ಕತೆಗಾರರಾಗಿ ಗಮನ ಸೆಳೆಯುತ್ತಾರೆ ಎಂಬುದನ್ನು ಸ್ಪಷ್ಟಪಡಿಸಲಿದ್ದೇನೆ.

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ಕಂಡು ಬರುವ ಕಲಾವಿದರು,ಅವರ ವೃತ್ತಿಪರತೆ, ವೈಯಕ್ತಿಕ ಬದುಕಿನ್ನು ಕುರಿತ ಬದ್ದತೆ ಇದರ ನಡುವಿನ ಸಿಕ್ಕುಗಳು ಇವುಗಳ ನಡುವೆಯೂ ಒಟ್ಟಾರೆಯಾಗಿ ತಮ್ಮ ಘಟನೆಯನ್ನು ಕಾಯ್ದುಕೊಳ್ಳಲು ವಿಶಿಷ್ಠತೆಯನ್ನು ಕತೆಗಳಲ್ಲಿ ಗುರುತಿಸಿರುತ್ತೇನೆ.

ಮಹಿಳೆಯನ್ನು ಕೆಲವು ಸಿದ್ದ ಮಾದರಿಗಳಲ್ಲೇ ಆಕೆಯನ್ನು ನೋಡುವುದು ಸಾಮಾನ್ಯವಾದ ಸಂಗತಿ. ಈ ಸಿದ್ದ ಮಾದರಿ ಅವಳಿಗೆ ಸಹಜವಾಗಿ ಬಂದಿರುವುದಕ್ಕಿಂತಲೂ ಅನಿವಾರ್ಯ ಸಂದರ್ಭಗಳೇ ಆಕೆಯನ್ನು ಹೀಗೆ ರೂಪಿಸಿವೆ ಎಂಬುದೇ ಬಹುತೇಕ ಸತ್ಯ. ಮಹಿಳೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಸ್ವಭಾವ ಮಾತೃತ್ವ ಯಾವುದೇ ಒಂದು ಸಂದರ್ಭ ಅಥವಾ ವ್ಯಕ್ತಿಯನ್ನು ಅವಳು ಪರಿಗಣಿಸಬೇಕಾದರೆ, ಅವಳು ಆ ನೆಲೆಯಿಂದಲೇ ಪರಿಗಣಿಸುತ್ತಾಳೆ. ಈಕೆಯಲ್ಲಿ ಅಂತ:ಕರಣ ಸದಾ ಜಾಗೃತಿಗೊಂಡಿರುತ್ತದೆ. ಹಾಗೆಂದಾಕ್ಷಣ ಆ ಬದುಕು ಅಷ್ಟೇ ಅವಳಿಗೆ ಸೀಮಿತವಲ್ಲ. ಹಾಗೆ ಅಂದುಕೊಳ್ಳುವುದು ತಪ್ಪು. ಅವಳಲ್ಲಿ ಧೈರ್ಯವಿದೆ. ಸಹನಶೀಲತೆ ಇದೆ. ಬದುಕನ್ನು ಕಟ್ಟಿಕೊಳ್ಳುವ ಸ್ವಾವಲಂಬಿಯಾಗಿ, ನಿರ್ವಹಿಸುವ ಛಲ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಈ ಎಲ್ಲಾ ಗುಣಗಳು ಆಕೆಯಲ್ಲಿವೆ. ಇಂತಹ ಪಾತ್ರಗಳ ವಿಶಿಷ್ಠತೆಯನ್ನು ಕತೆಗಳಲ್ಲಿ ಗುರತಿಸಿರುತ್ತೇನೆ.

ಒಂದು ಗ್ರಾಮದ ಸರ್ವಾಂಗೀಣ ಅಭಿವೃದ್ಧಿ ಅದೇ ಗಾಂಧೀಜಿಯವರ ಸ್ವರಾಜ್ಯದ ಕಲ್ಪನೆಯಾಗಿತ್ತು. ಗ್ರಾಮ ಸಮಗ್ರವಾಗಿ ಅಭಿವೃದ್ಧಿಯಾಗಬೇಕಾದರೆ, ಗ್ರಾಮದಲ್ಲಿರುವ ಎಲ್ಲಾ ಕಸುಬುದಾರರು, ಕುಶಲಕರ್ಮಿಗಳಿಂದ ಹಿಡಿದು ಭೂ ಹಿಡುವಳಿದಾರರು, ಜಮೀನ್ದಾರರು ಎಲ್ಲರೂ ಕೂಡಿ ಪೂರಕವಾಗಿ ಪರಸ್ಪರ ಕೆಲಸ ಮಾಡಿದಾಗ ಮಾತ್ರ ಒಂದು ಗ್ರಾಮ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದು ಗಾಂಧೀಜಿಯವರ ತಿಳುವಳಿಕೆಯಾಗಿತ್ತು. ಅದು ನಮ್ಮ ಪ್ರಾಚೀನ ಗ್ರಾಮ ವ್ಯವಸ್ಥೆಯಲ್ಲಿ ಸಹಜವಾಗಿಯೇ ಅಳವಡಿಕೆಯಾಗಿತ್ತು. ಆದರೆ, ಇಂದು ಅಂತಹ ಚಿತ್ರಣಗಳು ಇಲ್ಲ. ಏಕೆಂದರೆ, ಹಳ್ಳಿಯ ಬದುಕಿನಲ್ಲಿ ಪಲ್ಲಟವಾಗಿರುವುದನ್ನು ಕಾಣಬಹುದಾಗಿದೆ. ಒಂದು ಕಡೆ ಹಳ್ಳಿಯೂ ಅಲ್ಲದೆ, ನಗರವೂ ಅಲ್ಲದೆ ಇರುವಂತಹ ವಾತಾವರಣ ನಿರ್ಮಾಣವಾಗಿದೆ. ಆದರೆ ಹಳ್ಳಿಗಾಡಿನಿಂದ ನಗರಕ್ಕೆ ಬಂದಾಗ, ನಗರ ಜೀವನ ಎಂದಾಕ್ಷಣ ಒಂದು ರೀತಿಯ ಬೆಚ್ಚಿ ಬೀಳುವ ಭಾವನೆಗಳು ನಮ್ಮ ಮನಸ್ಸಿನಲ್ಲಿ ಒಂದುಕಡೆ ನೆಲೆಗೊಂಡಿವೆ. ನಗರ ಜೀವನವೆಂದರೆ ಒಂದು ರೀತಿಯ ಭಯಂಕರವಾದ ಜೀವನ, ನಗರೀಕರಣ ಹಲವು ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತದೆ. ಈ ಸಂಕೀರ್ಣತೆಯ ನಡುವೆ ಬದುಕನ್ನು ಕಟ್ಟಿಕೊಳ್ಳುವುದೇ ದುಸ್ಸಾಹಸ ಎಂದುಕೊಂಡಿದ್ದೇವೆ. ಅದು ಭಾಗಶ: ನಿಜವೂ ಇರಬಹುದು. ಆದರೆ ಅದರ ಇನ್ನೊಂದು ಮುಖವನ್ನು ಗಮನಿಸುತ್ತ ನೋಡಿದಾಗ, ಜೀವನ ನಿರ್ವಹಣೆಗಾಗಿ ನಗರದಲ್ಲಿ ಬಂದಿರುವವರು ಯಾರು? ಹಳ್ಳಿಗರೇ ಅಲ್ಲವೇ? ಹಳ್ಳಿಗಳಲ್ಲಿ ಹೇಗೆ ಪರಸ್ಪರ ಒಬ್ಬರಿಗೊಬ್ಬರು ದುಡಿಮೆ ಪೂರಕನೋ ಹಾಗೇ ನಗರದಲ್ಲೂ ಸಹ ಒಬ್ಬನ ದುಡಿಮೆ ಇನ್ನೊಬ್ಬನ ದುಡಿಮೆಗೆ ಪೂರಕ.. ಒಬ್ಬನ ದುಡಿಮೆ ಇನ್ನೊಬ್ಬನ ಬದುಕಿಗೆ ಪೂರಕ ಎಲ್ಲವೂ ಬೇಕು. ಒಂದು ದೊಡ್ಡ ಬಂಡವಾಳ ಹೂಡುವ ಉದ್ದಿಮೆದಾರನೂ ಬೇಕು ಹಾಗೆಯೇ ಅದರಲ್ಲಿ ಕೆಲಸ ಮಾಡಲು ನುರಿತ ಕೆಲಸಗಾರರು ಬೇಕು. ವಿದ್ಯಾಭ್ಯಾಸ ಮಾಡಿರುವ ಬೌದ್ಧಿಕ ಶಕ್ತಿಯನ್ನು ಬಳಸಿಕೊಂಡು ಕೆಲಸ ಮಾಡುವ ಕುಶಲಕರ್ಮಿಗಳು ಬೇಕು. ಅಂದರೆ ಅಕ್ಷರ ಜ್ಞಾನದ ಮೂಲಕ ಬೌದ್ಧಿಕ ಸಾಮರ್ಥ್ಯ. ಅಂದರೆ, ಶಾಲಾ ಕಾಲೇಜುಗಳ ಮೂಲಕ ಪಡೆದಿರುವಂತಹ ಬುದ್ಧಿಯ ಸಾಮರ್ಥ್ಯ, ಅಲ್ಲದೆ ಶಾಲಾಕಾಲೇಜುಗಳ ಮೂಲಕ ಬೌದ್ಧಿಕ ಸಾಮರ್ಥ್ಯವನ್ನು ಪಡೆಯಲು ಸಾಧ್ಯವಾಗದೇ ಹೋದಾಗ, ತಮ್ಮ ದೈಹಿಕ ಸಾಮರ್ಥ್ಯವನ್ನು ಬಳಸಿಕೊಂಡು ಅಥವಾ ಯಾವುದೇ ಬಗೆಯಲ್ಲಿ ಪ್ರಭಾವಕ್ಕೆ ಒಳಗಾಗಿ ಯಾವುದೋ ಒಂದು ಕರಕುಶಲ ವಿದ್ಯೆಯನ್ನು ಕಲಿತುಕೊಂಡು ಆ ಮೂಲಕ ಬದುಕನ್ನು ಕಟ್ಟಿಕೊಂಡಿರುವವರೂ ಇದ್ದಾರೆ. ಇವರೆಲ್ಲರೂ ಬೇಕು. ನಮಗೆ ಒಂದು ನಗರ ಜೀವನ ಎಂದಾಗ ಒಬ್ಬ ಚಹಾ ಮಾರುವವನು ಬೇಕು, ರೊಟ್ಟಿ ಮಾರಾಟ ಮಾಡುವವರು ಬೇಕು,. ಹಣ್ಣು ಮಾರಾಟ ಮಾಡುವವರು ಬೇಕು, ಕೀ ಚೈನ್ ಮಾರುವವರು, ಟಾಂಗಾ ಓಡಿಸುವವರು, ಬನ್ನು ಬಿಸ್ಕತ್ ಮಾರುವವನು ಕೂಡ ಬೇಕು. ಯಾರ ಅವಶ್ಯಕತೆಯೂ ಇಲ್ಲದೆ ಬದುಕಲು ನಗರದಲ್ಲಿ ಸಾಧ್ಯವಿಲ್ಲ. ಕೀ ಗೊಂಚಲು ಬೇಡವೇ?. ಬೇಸರವೆನಿಸಿದಾಗ ಒಂದು ಕಡಕ್ ಟೀ ಬೇಡವೇ ಹೀಗೆ ಎಲ್ಲವೂ ಬೇಕು. ಇವರೆಲ್ಲರೂ ಒಟ್ಟಾಗಿ ನಗರದ ಬದುಕನ್ನು ಕಟ್ಟುವಲ್ಲಿ, ನಗರದಲ್ಲಿ ವಾಸ ಮಾಡುವಂತಹ ಜನರ ಬದುಕು ಒಂದಷ್ಟು ಯಶಸ್ಸಿನ ಕಡೆ, ಒಂದಷ್ಟು ನೆಮ್ಮದಿಯ ಕಡೆ ಸಾಗಬೇಕೆಂದರೆ, ಇವರೆಲ್ಲರ ಬದುಕು ಸಹ ಅತ್ಯಂತ ಅವಶ್ಯಕವಾಗಿರುತ್ತದೆ.

ಇವರೆಲ್ಲರ ಬಗ್ಗೆಯೂ ಪರಸ್ಪರ ಒಂದು ರೀತಿಯ ಪ್ರೀತಿ ಇರಬೇಕು. ನನಗಿಂತ ಅವನು ಕಡಿಮೆ. ನಾನು ದೊಡ್ಡ ಕೆಲಸದಲ್ಲಿ ಇದ್ದೇನೆ. ಅವನೇನೂ ಓದಿಲ್ಲ. ನನಗಿಂತ ಅವನದು ಸಣ್ಣ ಕೆಲಸ, ಬೀದಿ–ಬೀದಿಗಳಲ್ಲಿ ಕೆಲಸ ಮಾಡುತ್ತನೆ. ಚಹಾ ಮಾರ್ತಾನೆ ಎಂಬುದು ಮೂರ್ಖತನ. ಏಕೆಂದರೆ ಕೇವಲ ಹಣಕ್ಕಾಗಿ ಕೆಲಸವನ್ನು ಮಾಡದೆ, ಮಾನವೀಯತೆಗಾಗಿ ಬದುಕುತ್ತಿರುವುದನ್ನು ಕಾಣುತ್ತೇವೆ. ಉದಾ: ಕೆಲವು ಮಂದಿ ಎಷ್ಟೋ ಕೋಟಿಗಟ್ಟಲೆ ಹಣವನ್ನು ಕಪ್ಪು ಹಣವಾಗಿ ಮಾಡಿ ಫಾರಿನ್ ಬ್ಯಾಂಕ್ ಗಳಲ್ಲಿ ಇಟ್ಟು, ತಮ್ಮಿಂದ ಇತರರಿಗೆ ಯಾವುದೇ ಸಹಾಯವಾಗದ ರೀತಿಯಲ್ಲಿ ಬದುಕುತ್ತಿರುತ್ತಾರೆ. ಆದರೆ, ಈ ಚಪಾತಿ ಮಾಡುವ, ಬೀದಿ ಬದಿಗಳಲ್ಲಿ ವ್ಯಾಪಾರ ಮಢುವವರಲ್ಲಿ ಯಾವ ಗಂಟೂ ಇಲ್ಲದೆ, ತಮ್ಮಲ್ಲಿರುವುದನ್ನು ಇತರರಿಗೆ ಕೊಟ್ಟು ತಾವು ನೆಮ್ಮದಿಯನ್ನು ಕಾಣುತ್ತ ಅದರಲ್ಲೇ ಬದುಕನ್ನು ಸಾಧಿಸುತ್ತಿರುತ್ತಾರೆ. ಅಷ್ಟೇ ಅಲ್ಲದೆ, ಅವರು ಮಾಡುವ ಆ ಪುಟ್ಟ ಕೆಲಸಗಳಿಂದಲೂ ಕೋಟಿಗಟ್ಟಲೆ ಸಂಪಾದನೆ ಮಾಡುವ ವ್ಯಕ್ತಿಗೆ ನೆಮ್ಮದಿ ಸಿಗುತ್ತಿರುತ್ತದೆ. ಉದಾ: ಟೀ ಮಾಡುವ ವ್ಯಕ್ತಿಯನ್ನು ಕಂಡಾಗ ಛೀ ಇವನಾ ಅನ್ನಬಾರದು ಏಕೆಂದರೆ ನಾವು ಬಹಳಷ್ಟು ಗಳಿಸಿರಬಹುದು. ಆದರೆ ಅವನು ಮಾರುವ ಎರಡು ರೂಪಾಯಿ ಟೀ ಬಹಳ ಅತ್ಯವಶ್ಯಕ. ನಮ್ಮಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಗೌರವಿಸಿಕೊಳ್ಳುವ ಮನಸ್ಸಿರಬೇಕು. ಅಂದರೆ ಅವರು ವಿವಿಧ ಕುಶಲತೆಯಿಂದ ಬದುಕನ್ನು ಕಟ್ಟಿಕೊಳ್ಳುವುದನ್ನು ಗೌರವಿಸಬೇಕು. ಏಕೆಂದರೆ ಎಷ್ಟೋ ಮಂದಿ ಕೆಲಸದ ಹುಡುಕಾಟದಲ್ಲೆ ಜೀವನವನ್ನು ಸವೆಸದೆ ಈ ರೀತಿಯಲ್ಲಿ ಕೆಲಸಗಳನ್ನು ಮಾಡಿಯೂ ಬದುಕನ್ನು ಕಟ್ಟಿಕೊಳ್ಳಬಹುದು ಎಂಬ ಚಿತ್ರಣವನ್ನು ಕಾಯ್ಕಿಣಿಯವರು ಇಲ್ಲಿ ಕಟ್ಟಿಕೊಡುತ್ತಾರೆ. ಇಂತಹ ಪಾತ್ರಗಳಲ್ಲಿ ವಿಶಿಷ್ಟವಾದ ಜ್ಞಾನ, ವಿಶಿಷ್ಠವಾದ ಆಲೋಚನೆ, ಅವರ ಜನಪರವಾದ ನಿಲುವು ಅವರ ಸಂಬಂಧಗಳಲ್ಲಿರುವ ಸೂಕ್ಷ್ಮತೆ, ಹಣದ ಪರವಾಗಿರದೆ, ಮಾನವ ಪರವಾದ ಅವರ ಕಾಳಜಿ ಸ್ನೇಹದ ಪರವಾದ ಔದಾರ್ಯ, ಇವೆಲ್ಲವನ್ನು ಕಟ್ಟಿಕೊಡುವ ಪ್ರಯತ್ನವನ್ನು ಕಾಯ್ಕಿಣಿಯವರು ಮಾಡಿದ್ದು, ಇದನ್ನು ಅಧ್ಯಯನದಲ್ಲಿ ಗುರುತಿಸಿ ಸ್ಪಷ್ಟಪಡಿಸಿರುತ್ತೇನೆ.

ಜಯಂತ್ ಕಾಯ್ಕಿಣಿಯವರ ಕತೆಗಳಲ್ಲಿ ವಿದ್ಯಾವಂತ ಯುವಕರ ತಮ್ಮ ಗೆಳೆಯರನ್ನೂ ತಮ್ಮಂತೆ ಪ್ರಗತಿಯ ಪಥಗಳಲ್ಲಿ ಕರೆದೊಯ್ಯುವ ಮನಸ್ಸನ್ನು ಹೊಂದಿರುತ್ತಾರೆ. ಅಲ್ಲದೆ ಗೆಳೆಯನ ಮಾತಿನ ಮೇಲೆ ತನ್ನ ಜೀವ ಮತ್ತು ಜೀವನವನ್ನೂ ನಿರ್ಧರಿಸುವಂತಹ ಗೆಳೆತನದ ವಿಶಿಷ್ಠತೆಯನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾನೆ. ಶ್ರೀಮಂತ ಗೆಳೆಯನಿಗೆ ತನ್ನ ಬಡ ಸ್ನೇಹಿತ ಹಣ ನಿರೀಕ್ಷಿಸಬಹುದು ಎಂಬ ಭಯವಿರುತ್ತದೆ. ಆದರೆ ಅದನ್ನು ಬುಡಮೇಲು ಮಾಡಿ ಕೇವಲ ತನ್ನನ್ನು ಕಳ್ಳನಲ್ಲ ಎಂದು ಹೇಳು ಎಂದು ಕೇಳಿಕೊಳ್ಳುವ ಸ್ನೇಹಿತನ ಬಗ್ಗೆ ಅಭಿಮಾನ ಮೂಡುತ್ತದೆ. ಇಂತಹ ನೆಲೆಗಳ ಪರಿಚಯ ಮಾಡಿಕೊಟ್ಟಿರುತ್ತೇನೆ.

ಕಾಯ್ಕಿಣಿಯವರ ಕತೆಗಳಲ್ಲಿ ಮಕ್ಕಳ ಪಾತ್ರಗಳೂ ಕೂಡ ವಿಶಿಷ್ಠವಾಗಿದ್ದು, ತಂದೆ ತಾಯಿ ಮಕ್ಕಳಿಗೆ ಸಾಂಪ್ರದಾಯಿಕ ಶಿಕ್ಷಣದ ಆ ಕ್ಷಣದ ಮೂಲಕ ಬದುಕನ್ನು ನಿರ್ಮಿಸಬೇಕೆಂದು ಬಯಸುವಾಗ ಆ ಮಕ್ಕಳು ಯಾರ ಸಹಕಾರವಿಲ್ಲದೆ. ತಮ್ಮ

ಬದುಕನ್ನು ನಿರ್ಮಿಸಿಕೊಂಡು ಅದರ ಮೂಲಕವೂ ಇತರರಿಗೆ ಪ್ರೇರಕವಾಗುವ ವಿಶಿಷತೆಗಳನ್ನು ಗುರುತಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡಿದ್ದೇನೆ.

ಕಾಯ್ಕಿಣಿಯವರು ಕತೆಗಾರರು ಮತ್ತು ಕಲಾ ಜಗತ್ತಿನೊಂದಿಗೆ ಸಂಪರ್ಕ ಬಿರಿಸಿಕೊಂಡವರೂ ಹೌದು. ಅಲ್ಲದೇ ಯಾವುದೇ ಕತೆಗಾರನೂ ಮೂಲತಃ ಒಬ್ಬ ಕಲಾವಿದನೆ ಹೌದು ಎಂಬುದು ಸತ್ಯ. ಭಾಷಿಕ ಕಲೆ ಈತನದು. ಹೀಗೆ ಕಾಯ್ಕಿಣಿಯವರು ಭಾಷಿಕ ಕಲಾಕಾರರಾಗಿ ನಗರದ ಬದುಕಿನ ಸಂಕೀರ್ಣತೆಯನ್ನು ವಿವಿಧ ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಅದರ ವಿಶೇಷತೆಗಳನ್ನು ಓದುಗರಿಗೆ ಪರಿಚಯಿಸಿದ್ದಾರೆ. ಸೂಕ್ಷ್ಮ ಸಂವೇದಿಯಾದ ಬರಹಗಾರ ಇಂತಹ ಸೂಕ್ಷ್ಮ ಚಿತ್ರಗಳನ್ನು ಅನಾವರಣಗೊಳಿಸಬಲ್ಲ. ಈ ವಿಶೇಷತೆ ಕಾರಣವಾಗಿಯೇ ಅನೇಕ ಅಲಕ್ಷಿತರ ವ್ಯಕ್ತಿ ವಿಶಿಷ್ಟತೆಗಳ ನೆಲೆಗಳನ್ನು ಅವರ ಕತೆಗಳಲ್ಲಿ ಅನಾವರಣ ಗೊಳಿಸಿರುವುದನ್ನು ಗುರುತಿಸುವಂತಹುದಾಗಿದೆ.

## ಹಂಪಿ ಕನ್ನಡ ವಿಶ್ವವಿದ್ಯಾಲಯ

# " ಡಾ.ಡಿ.ಎನ್ ಶಂಕರಭಟ್ ಮತ್ತು ಕನ್ನಡ ಬರಹ"

ಹಂಪಿ ಕನ್ನಡ ವಿಶ್ವವಿದ್ಯಾಲಯ

ಎಂ.ಫಿಲ್ ಪ್ರಬಂಧ

**ಸಂಶೋಧಕರು: ವರಲಕ್ಷ್ಮೀ.ಆರ್**

**ನೋಂದಣಿ ಸಂಖ್ಯೆ :೧೪೧೦೦೧೦೩೦೦೭೪**

**ಮಾರ್ಗದರ್ಶಕರು:**

**ಡಾ. ಅನ್ನದಾನೇಶ್.ಬಿ.ಎ**

ಕನ್ನಡ ವಿಭಾಗದ ಮುಖ್ಯಸ್ಥರು

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿಮಹಿಳಾ ವಿದ್ಯಾಲಯ,

ಮಲ್ಲೇಶ್ವರಂ, ಬೆಂಗಳೂರು – ೫೬೦೦೧೨

ಕಾವ್ಯ ಮಂಡಲ

ಜೆ.ಪಿ.ನಗರ, ಬೆಂಗಳೂರು – ೫೬೦೦೭೮

೨೦೧೪-೧೫

## ಪರಿವಿಡಿ

ಪುಟ ಸಂಖ್ಯೆ

ಅಧ್ಯಾಯ ೦೧ – ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ. ೧–೦೯

ಅಧ್ಯಾಯ ೦೨ – ಕನ್ನಡ ಬರಹವನ್ನು ಕುರಿತು

– ಅಭಿಪ್ರಾಯ ಮತ್ತು ಚಿಂತನೆ ೧೦–೩೦

ಅಧ್ಯಾಯ ೦೩ – ಬದಲಾದ ಬರಹದ ರೂಪಗಳು

* ಸಂಸ್ಕೃತ ಪದಗಳಿಗೆ ಪರ್ಯಾಯವಾಗಿ

ಕನ್ನಡ ಪದಗಳನ್ನು ಬಳಸುವುದು ೩೧–೪೪

ಅಧ್ಯಾಯ ೦೪ – ಧ್ವನಿ, ವಾಕ್ಯ, ಪದ–

ವೈಜ್ಞಾನಿಕವಾಗಿ ಆದ ಮಾರ್ಪಾಟುಗಳು ೪೫–೫೮

ಅಧ್ಯಾಯ ೦೫ – ಸಮಾರೋಪ ೫೯–೬೨

ಪರಾಮರ್ಶನ ಗ್ರಂಥ ೬೩–೬೪

## ಅಧ್ಯಾಯ – ೧

## ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ನಾಡೋಜ ಡಾ॥ ಡಿ.ಎನ್ ಶಂಕರ್‌ಭಟ್ ಅವರು ಪ್ರಪಂಚದ ಪ್ರಸಿದ್ಧ ನುಡಿಯರಿಗರು ಮದ್ರಾಸ್ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಎಂ.ಎ. ಹಾಗೂ ಪುಣೆ ವಿಶ್ವವಿದ್ಯಾಲಯದಿಂದ ನುಡಿಯರಿಮೆಯಲ್ಲಿ ಪಿ.ಎಚ್.ಡಿ. ಪಡೆದಿರುವ ಭಟ್ಟರು ಅಮೇರಿಕಾದ ಸ್ಟ್ಯಾನ್ಫೋರ್ಡ್ ವಿಶ್ವವಿದ್ಯಾಲಯ ಆಸ್ಟ್ರೇಲಿಯಾದ ಲಾಟ್ರೋಬೆ ವಿಶ್ವವಿದ್ಯಾಲಯ ಬೆಲ್ಜಿಯಂ ದೇಶದ ಅಂಟೆರೆಪ್ ವಿಶ್ವದ್ಯಾಲಯ, ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಇನ್ಸ್ಟಿಟ್ಯೂಟ್ ನಂತಹ ಜಗತ್ತಿನ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಭಾರತೀಯ ಭಾಷಾ ಸಂಸ್ಥಾನ ಮಣಿಪುರ ವಿಶ್ವವಿದ್ಯಾಲಯ ಪುಣೆಯಲ್ಲಿರುವ ಡೆಕ್ಕನ್ ಕಾಲೇಜ್ ಹೀಗೆ ಹಲವಾರು ಕಡೆ ಕಲಿಸುಗರಾಗಿ, ಅರಕೆಗಾರರಾಗಿ, ಕಾರ್ಯನಿರ್ವಹಿಸಿದ್ದಾರೆ.

ನುಡಿಯರಿಮೆಯ ಬಗ್ಗೆ ಬರೆದಿರುವ ಅವರ ಹತ್ತಾರು ಪುಸ್ತಕಗಳು ಮತ್ತು ಸಂಶೋಧನೆಗಳು ಪ್ರಸಿದ್ಧವಾಗಿದೆ ಕನ್ನಡ ನುಡಿಯ ಬಗ್ಗೆ ಶಂಕರಭಟ್ಟರು ಹಲವು ವರ್ಷಗಳ ಕಾಲ ಸಂಶೋಧನೆ ನಡೆಸಿದ್ದು ಇವುಗಳ ಆಧಾರದ ಮೇಲೆ ಹಲವು ಪುಸ್ತಕಗಳನ್ನು ಬರೆದಿದ್ದಾರೆ ಕನ್ನಡವನ್ನು ಹೊಸದಾದ ರೂಪದಲ್ಲಿ ಬರೆಯುವುದನ್ನೂ ತಿಳಿಸಿದ್ದಾರೆ.

ಹೀಗೆ ಡಿ.ಎನ್. ಶಂಕರಭಟ್ಟರು ಎಂಬ ನುಡಿಯರಿಗರು ಕನ್ನಡ ಭಾಷೆಯ ಕಲಿಕೆ ಹಾಗೂ ಅದರ ಜೀವಂತಿಕೆಗಾಗಿ ಹಲವಾರು ಸಂಶೋಧನೆಗಳನ್ನು ಮಾಡುತ್ತಿದ್ದಾರೆ. ಅವರು ಕನ್ನಡ ಬರಹ ಹಾಗೂ ಕ್ಲಿಷ್ಟವಾದ ಅಕ್ಷರಗಳ ಉಚ್ಚಾರಣೆ ಕಷ್ಟವಾಗುವುದರಿಂದ ೪೮ ಅಕ್ಷರಗಳ ಬದಲಿಗೆ ೩೨ ಅಕ್ಷರಗಳನ್ನು ಬಳಸಿ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸಬೇಕೆಂಬ ವಾದವನ್ನು ಪ್ರತಿಪಾದಿಸುತ್ತಾರೆ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ ಎಂದು ಹೇಳುವ ನುಡಿಗರಿಗರ ವಾದವನ್ನು ಒಪ್ಪುತ್ತಾರೆ. ಆದರೆ ಬರಹ ಭಾಷೆಗೆ ಒರತು ಆಡು ಭಾಷೆಗೆ ಅಲ್ಲ, ಎಂಬುದು ಇವರ ವಾದವಾಗಿದೆ ಏಕೆಂದರೆ ಆಡು ಭಾಷೆಯ ಸೊಲ್ಲುಗಳುಆಡಿದ ಕೂಡಲೇ ಮರೆಯಾಗುವಂತಹದು ಆದರೆ ಬರಹದ ಭಾಷೆಯನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯಲು ಹಲವಾರು ಭಾಷೆಗಳಿಂದ ಪದಗಳನ್ನು ಎರವಲಾಗಿ

ಪಡೆದಿರುತ್ತಾರೆ. ಹಾಗೆಯೇ ಸಂಸ್ಕೃತ ಹಾಗೂ ಇನ್ನಿತರ ಭಾಷೆಗಳ ಪ್ರಭಾವಕ್ಕೆ ಒಳಗಾದ ಕನ್ನಡ ಭಾಷೆಯಲ್ಲಿ ಕನ್ನಡ ಭಾಷೆಗಿಂತ ಬೇರೆ ಭಾಷೆಯ ವ್ಯಾಕರಣ ಹಾಗೂ ಪದಗಳೇ ಹೆಚ್ಚಾಗಿರುವುದರಿಂದ ಕನ್ನಡ ಭಾಷೆಯಲ್ಲಿನ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ಕಟ್ಟುವ ಬಗೆಯನ್ನು ವಿವರಿಸಿದ್ದಾರೆ.

ಜಗತ್ತಿನ ಜೀವರಾಶಿಗಳಲ್ಲಿ ಮಾನವ ಪ್ರಾಣಿಗಳಿಗೆ ಮಾತ್ರ ಭಾಷೆಯನ್ನಾಡುವ ಕೌಶಲ್ಯವನ್ನು ಪಡೆದಿದ್ದಾನೆ. ಇನ್ನಿತರ ಪ್ರಾಣಿ ಪಕ್ಷಿಗಳಿಗೆ ನಾನಾ ಬಗೆಯ ಧ್ವನಿಗಳ ಮೂಲಕ ನಿರ್ದಿಷ್ಟವಾದ ಹಾವಭಾವಗಳನ್ನು ವ್ಯಕ್ತಪಡಿಸುವ ಕೌಶಲ್ಯವಿದ್ದರೂ ತಾವು ನೋಡಿದ ಅಥವಾ ತಿಳಿದ ಯಾವುದೇ ದೃಶ್ಯಗಳನ್ನು ಘಟನೆಗಳನ್ನು ಮತ್ತು ವಿಷಯಗಳನ್ನು ವ್ಯವಸ್ಥಿತವಾದ ಧ್ವನಿ ಸಂಕೇತಗಳ ಮೂಲಕ ಹೇಳುವ ಸಾಮರ್ಥ್ಯವಿಲ್ಲ.

ಮಾನವನಿಗೆ ಭಾಷೆಯ ಮೂಲಕ ಹಿಂದಿನ – ಇಂದಿನ ಮುಂದಿನ ವಿಷಯಗಳೆಲ್ಲಾವನ್ನು ಮತ್ತು ಕಂಡ ಕಲ್ಪಿತ ಸಂಗತಿಗಳನ್ನು ಹೇಳಬಲ್ಲ ಸಾಮರ್ಥ್ಯವಿದೆ ಈ ರೀತಿಯ ಸಾಮರ್ಥ್ಯ ಉಸಿರಾಟದಂತೆ ಮಾನವನಿಗೆ ಹುಟ್ಟಿನಿಂದಲೇ ಬಂದಿದೆ ಭಾಷೆಯನ್ನು ಆಡುವ ಸಾಮರ್ಥ್ಯವನ್ನು ಪೂರಕವಾಗಿ ಮಾನವನು ಗಳಿಸಿಕೊಂಡಿದ್ದಾನೆ.

ಜನ ಸಮುದಾಯಗಳ ಸಾಮಾಜಿಕ ವ್ಯವಹಾರಗಳಲ್ಲಿ ನಿತ್ಯ ಬಳಕೆಯಲ್ಲಿರುವ ಭಾಷೆಗಳಲ್ಲಿ ಕಾಲದಿಂದ ಕಾಲಕ್ಕೆ ಉಂಟಾಗುವ ಬದಲಾವಣೆಗಳನ್ನು ಅದರ ಪರಿಣಾಮಗಳನ್ನು ಕುರಿತು ಅಧ್ಯಯನಗಳು ನಡೆಯುತ್ತಲೇ ಇರುತ್ತದೆ ಹಿಂದಿನ ಕಾಲದಿಂದ ಇಂದಿನ ಕಾಲದವರೆಗೆ ವಿವಿಧ ಕಾಲಘಟ್ಟಗಳಲ್ಲಿ ರಚನೆಗೊಂಡಿರುವ ಶಾಸನಗಳಲ್ಲಿ ತಾಮ್ರಪಟಗಳಲ್ಲಿ ತಾಳೆಗರಿಗಳಲ್ಲಿ ಮತ್ತು ಗ್ರಂಥಗಳಲ್ಲಿ ಲಿಪಿರೂಪದಲ್ಲಿ ದಾಖಲಾಗಿದ್ದೂ ಇಂದಿಗೂ ಬಳಕೆಯಲ್ಲಿರುವ ಭಾಷೆಯನ್ನು ಅವಲೋಕಿಸಿದಾಗ ಅದರ ಭಾಷಿಕ ಸಾಮಗ್ರಿಗಳಲ್ಲಿ ಅನೇಕ ತೆರನಾದ ಬದಲಾವಣೆಗಳು ಉಂಟಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಭಾಷೆಯ ಬದಲಾವಣೆ ಎಂದರೆ ಭಾಷಿಕ ಸಾಮಗ್ರಿಗಳಾದ ಧ್ವನಿರಚನೆ, ಪದರಚನೆ, ವಾಕ್ಯರಚನೆ, ಅರ್ಥ ರಚನೆ, ಶಬ್ದಸಂಪತ್ತು ಮತ್ತು ಭಾಷೆಯ ಕಾರ್ಯಗಳಲ್ಲಿ ಉಂಟಾಗುವ ಬದಲಾವಣೆಗಳು ಎಂದು ಅರ್ಥ.

ಕನ್ನಡ ಭಾಷಾ ವಿಜ್ಞಾನಿ ಡಿ.ಎನ್. ಶಂಕರಭಟ್ಟರು ಕನ್ನಡ ಭಾಷೆಯ ಚರಿತ್ರೆಯನ್ನು ರಚಿಸಿದ್ದಾರೆ. ಕನ್ನಡ ಬರಹದ ಚರಿತ್ರೆಯನ್ನು ಬೇರೆ ಬೇರೆ ಶತಮಾನಗಳಲ್ಲಿನ ಶಾಸನಗಳು ಹಾಗೂ ಇತರ ಗ್ರಂಥಗಳನ್ನು ಹೋಲಿಸಿ ರಚಿತವಾದ ಕನ್ನಡ ಬರಹಗಳನ್ನು ನೋಡಿ ಅವುಗಳ ನಡುವೆ ಕಾಣಿಸುವ ವ್ಯತ್ಯಾಸಗಳ ಆಧಾರದ ಮೇಲೆ ಬರೆಯುವ ಚರಿತ್ರೆಯಾಗಿ ನೋಡಿದ್ದಾರೆ. ಹಾಗೆಯೇ ಮಾತಿನ ಚರಿತ್ರೆಯನ್ನು ಈಗ ಬಳಕೆಯಲ್ಲಿರುವ ಕನ್ನಡ ಭಾಷೆಯನ್ನು ಇತರ ಕನ್ನಡ ಉಪಭಾಷೆಗಳ ಜೊತೆಯಲ್ಲಿ ಮತ್ತು ಇತರ ದ್ರಾವಿಡ ಭಾಷೆಗಳೊಂದಿಗೆ ಹೋಲಿಸಿನೋಡಿ ಅವುಗಳ ನಡುವೆ ಕಾಣಿಸುವ ವ್ಯತ್ಯಾಸಗಳ ಆಧಾರದ ಮೇಲೆ ಮಾತಿನ ಚರಿತೆಯನ್ನು ಬರೆಯುವುದು ಎಂದು ಹೇಳಿದ್ದಾರೆ.

ಕನ್ನಡ ಭಾಷೆಯನ್ನು ಕಲಿಯಲು ಹಾಗೂ ಬರಹವನ್ನು ಬರೆಯಲು ಹಲವಾರು ತೊಡಕುಗಳು ಉಂಟಾಗುತ್ತದೆ. ಭಾಷೆಯೂ ಕ್ಲಿಷ್ಟವಾದಾಗ ಅದು ಜೀವಂತಿಕೆಯನ್ನು ಪಡೆಯುವುದಿಲ್ಲ ಕನ್ನಡ ಭಾಷಿಕ ಸಮುದಾಯದವರು ಕನ್ನಡ ಅಕ್ಷರಗಳ ಮಹಾಪ್ರಾಣಾಕ್ಷರಗಳನ್ನು ಉಚ್ಚರಣೆಯ ಸಮಯದಲ್ಲಿ ಬಳಸುವುದಿಲ್ಲ. ಅವರು ಆಡುನುಡಿಗಳನ್ನು ಹಾಡುವಾಗ ಸಾಮಾನ್ಯವಾಗಿ ಅಲ್ಪಪ್ರಾಣಾಕ್ಷರಗಳನ್ನು ಬಳಸುತ್ತಿರುವುದನ್ನು ಡಿ.ಎನ್.ಶಂಕರಭಟ್ಟರು ವೈಜ್ಞಾನಿಕವಾದ ಆಲೋಚನೆಗಳ ಮೂಲಕ ವಿವರಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡದ ಬರಹ ಭಾಷೆಯೂ ಸಂಸ್ಕೃತ ಭಾಷೆಯಿಂದ ಹಲವಾರು ಪದಗಳನ್ನು ಎರವಲಾಗಿ ತೆಗೆದುಕೊಂಡು ಸಂಸ್ಕೃತಮಯವಾಗಿದೆ ಇದನ್ನು ಬದಲಾಯಿಸಲು ಸಾಧ್ಯ ಆದರೆ ಈ ನಿಯಮವನ್ನು ತಲೆಮಾರಿನಿಂದ – ತಲೆಮಾರಿಗೆ ಯಾವುದೇ ಬದಲಾವಣೆಗೆ ಒಳಗಾಗದೆ ಅದನ್ನು ಕಟ್ಟಳೆಯಂತೆ ಪಾಲಿಸುತ್ತಿರುವುದು ಶೋಚನೀಯ ಸ್ಥಿತಿಯಾಗಿದೆ.

ಸಂಸ್ಕೃತದಿಂದ ಎರವಲು ತೆಗೆದುಕೊಂಡಿರುವ ಪದಗಳನ್ನು ಉಚ್ಚಾರಣೆಯಂತೆ ಬರೆಯುವಾಗ ಹಲವಾರು ತೊಡಕುಗಳು ಉಂಟಾಗುತ್ತದೆ. ಆದ್ದರಿಂದ ಸಂಸ್ಕೃತ ಪದಗಳಿಗೆ ಬದಲಾಗಿ ನಮ್ಮ ಕನ್ನಡ ಭಾಷೆಯ ಪದಗಳನ್ನು ಬಳಸುವುದರಿಂದ ಕನ್ನಡ ಭಾಷೆಯಲ್ಲಿ ಹೊಸ ಪದಗಳನ್ನು ಕಟ್ಟುವುದರಿಂದ ಭಾಷೆಯೂ ಸುಲಭವಾಗುತ್ತದೆ

ಹಾಗೂ ಕನ್ನಡಿಗರು ಬರಹವನ್ನು ಸುಲಭವಾಗಿ ತಪ್ಪಿಲ್ಲದ ಹಾಗೆ ಬರೆಯುವರು. ಆದ್ದರಿಂದ ಷ.ಋ.ಐ.ಔ. ಅಕ್ಷರಗಳನ್ನು ವರ್ಣಮಾಲೆಯಿಂದ ಹೊರಗಿಡುವುದು ಅಕ್ಷರಗಳ ಸಂಖ್ಯೆಯನ್ನು ಕಡಿಮೆ ಮಾಡುವುದು.

ಇದರಿಂದ ಕನ್ನಡ ಭಾಷಿಕ ಸಮುದಾಯವರು ತಾವು ಉಚ್ಛರಿಸುವ ಹಾಗೆಯೇ ಅಕ್ಷರಗಳನ್ನು ಬರೆಯುವುದರಿಂದ ಕನ್ನಡ ಭಾಷೆಯೂ ಸುಲಭವಾಗುತ್ತದೆ. ಭಾಷೆಯು ಹೇಗೆ ಹುಟ್ಟಿತು ಎಂಬುದನ್ನು ಕುರಿತು ಇದರವರೆಗೂ ಅನೇಕ ಬಗೆಯ ವಾದಗಳನ್ನು ಭಾಷಾ ವಿಜ್ಞಾನಿಗಳು ಮಂಡಿಸಿದ್ದಾರೆ. ಆದರೆ ಇದುವರೆಗೂ ಯಾವೊಂದು ವಾದವನ್ನು ಸಮರ್ಪಕವೆಂದು ಒಪ್ಪಿಕೊಂಡಿಲ್ಲ.

ಇತಿಹಾಸ ಪೂರ್ವದಿಂದಲೂ ಇಂದಿನ ತನಕ ವಿವಿಧ ಕಾಲಘಟ್ಟಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಸಮುದಾಯಗಳ ನಡುವೆ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ತಂತ್ರಜ್ಞಾನ ಮತ್ತು ವೈಜ್ಞಾನಿಕ ಸಂಬಂಧ ಹಾಗೂ ಸಂಘರ್ಷಗಳು ಉಂಟಾದಾಗ ಭಾಷಿಕ ಸಮುದಾಯವರು ಇನ್ನೊಂದು ಭಾಷಿಕ ಸಮುದಾಯದವರ ವೇಶಭೂಷಣಗಳು, ಆಚಾರ ವಿಚಾರಗಳು, ಆಹಾರ ಪದ್ಧತಿಗಳು ಹಾಗೂ ಇನ್ನಿತರ ನಡೆನುಡಿಗಳು ದುರ್ಬಲ ಸಮುದಾಯಗಳ ಮೇಲೆ ಪರಿಣಾಮ ಬೀರುವಾಗ ಪ್ರಬಲ ಭಾಷಿಕ ಸಮುದಾಯದವರ ವಸ್ತುಗಳ, ವಿಷಯಗಳ, ಆಚರಣೆಗಳ ಹೆಸರುಗಳನ್ನು ಉಚ್ಚರಿಸಿ ಬಳಸುವಾಗ ಹಲವಾರು ಬದಲಾವಣೆಗಳಿಗೆ ಒಳಗಾಗುತ್ತದೆ.

ಕನ್ನಡ ಭಾಷಿಕ ಸಮುದಾಯದವರು ಕ್ರಿ.ಪೂ ದಿಂದ ಕ್ರಿ.ಶ ೨೧ನೇ ಶತಮಾನದವರೆಗೂ ಅನ್ಯ ಭಾಷಿಕ ಸಮುದಾಯದವರಿಂದ ಅಪಾರ ಸಂಖ್ಯೆಯ ಭಾಷಿಕ ಸಾಮಾಗ್ರಿಗಳನ್ನು ಸ್ವೀಕರಿಸುತ್ತಲೇ ಇದ್ದಾರೆ. ಕ್ರಿ.ಪೂದಲ್ಲಿ ಆರ್ಯ ಜನಾಂಗದವರಿಂದ ಸಂಸ್ಕೃತ ಭಾಷಿಕ ಸಾಮಾಗ್ರಿಗಳನ್ನು ಕ್ರಿ.ಶ.ದ ಪ್ರಾರಂಭದ ಅವಧಿಯಲ್ಲಿ ಪ್ರಾಕೃತ ಭಾಷಿಕ ಸಮುದಾಯದಿಂದ ಪ್ರಾಕೃತ ಭಾಷೆಯ ಸಾಮಾಗ್ರಿಗಳನ್ನು ಕ್ರಿ.ಶ. ೧೩-೧೪ನೇ ಶತಮಾನದಿಂದ ಮೊಘಲ್ ಜನಾಂಗದವರಿಂದ ಪರ್ಷಿಯನ್, ಅರಾಬಿಕ್ ಮತ್ತು ಉರ್ದು ಭಾಷಿಕ ಸಾಮಾಗ್ರಿಗಳನ್ನು ಕ್ರಿಶ ೧೮ನೇ ಶತಮಾನದಲ್ಲಿ ಪೋರ್ಚುಗೀಸರಿಂದ ಪೋರ್ಚುಗೀಸ್ ಭಾಷಾ ಸಾಮಗ್ರಿಗಳನ್ನು ಕ್ರಿಶ ೧೯-೨೦ನೇ ಶತಮಾನದಲ್ಲಿ ಬ್ರಿಟಿಷರಿಂದ ಇಂಗ್ಲೀಷ್ ಭಾಷಿಕ ಸಾಮಗ್ರಿಗಳನ್ನು ಕನ್ನಡ ಭಾಷಿಕ ಸಮುದಾಯದವರು

ಸ್ವೀಕರಿಸಿದ್ದಾರೆ. ಆದುದರಿಂದಲೇ ಇಂದು ಕನ್ನಡಿಗರಾದ ನಾವು ಬಳಸುತ್ತಿರುವ ಕನ್ನಡ ಭಾಷೆಯಲ್ಲಿ ಶೇ೭೦ ಕ್ಕಿಂತ ಹೆಚ್ಚಿನ ಸಂಖ್ಯೆಯ ಪದಗಳು ಅನ್ಯ ಭಾಷಾ ಪದಗಳಾಗಿವೆ. ಅದರಲ್ಲೂ ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಯ ಪದಗಳು ಜಾಸ್ತಿ.

ಆರ್ಯ ಜನಾಂಗದವರು ದ್ರಾವಿಡರನ್ನು ಅಧೀನವಾಗಿಸಿಕೊಂಡು ಕ್ರಿಪೂದಲ್ಲಿ ಆಡಳಿತವನ್ನು ನಡೆಸಿದ ಕಾರಣದಿಂದ ಕನ್ನಡಿಗರ ಧಾರ್ಮಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಸಂಸ್ಕೃತ ಪದಗಳ ಬಳಕೆ ಹೇರಳವಾಗಿದೆ.

ಯಾವುದೇ ಒಂದು ಭಾಷಿಕ ಸಮುದಾಯದವರು ಅನ್ಯಭಾಷೆಯ ಪದಗಳನ್ನು ಸ್ವೀಕರಿಸಿ ಬಳಸುವಾಗ ತಮ್ಮ ಭಾಷೆಯ ಧ್ವನಿ ರಚನೆ ಮತ್ತು ಪದರಚನೆಯ ನಿಯಮಗಳಿನುಗುಣವಾಗಿ ಅನ್ಯ ಭಾಷಾ ಸಾಮಗ್ರಿಗಳನ್ನು ಹೊಂದಿಸಿಕೊಂಡು ಉಚ್ಚರಿಸುತ್ತಾರೆ. ಆದುದರಿಂದ ಅನ್ಯಭಾಷೆಯ ಪದಗಳು ಅನೇಕ ಬಗೆಯ ವ್ಯತ್ಯಾಸಗಳು ಪಡೆದು ಬಳಕೆಗೆ ಬರುತ್ತದೆ.

ಕನ್ನಡ ಭಾಷೆಗೆ ತಮಿಳು, ಮಲಯಾಳಂ, ತೆಲುಗು, ತುಳು, ಗೋಂಡಿ, ಕೂಯಿ, ಮೊದಲಾದ ಭಾರತದ ಹಲವು ದ್ರಾವಿಡ ಭಾಷೆಗಳೊಂದಿಗೆ ಸಂಬಂಧವಿದೆ. "ಕನ್ನಡ ವ್ಯಾಕರಣ ಎಂದು ಶಾಲೆಯಲ್ಲಿ ಕಲಿಸುತ್ತಿರುವುದು ನಿಜಕ್ಕೂ ಕನ್ನಡದ ವ್ಯಾಕರಣವೇ ಅಲ್ಲವೆಂದು ಹೇಳುವುದು ಡಿ.ಎನ್. ಶಂಕರಭಟ್ಟರ ಗಟ್ಟಿನಿಲುವುಗಳಲ್ಲಿ ಒಂದಾಗಿದೆ". ಕನ್ನಡದ ವ್ಯಾಕರಣ ಎಂತಹದು, ಅದು ಹೇಗೆ ಪದಗಳನ್ನು ಮತ್ತು ಸೊಲ್ಲುಗಳನ್ನುಕಟ್ಟುವ ಬಗೆಯನ್ನು ತಿಳಿಸಿಕೊಡುತ್ತದೆ. ಮತ್ತು ಈ ತಿಳಿವಿನ ಮೂಲಕ ಹೇಗೆ ಬರಹಗಳನ್ನು ಸರಿಯಾಗಿ ಬರೆಯಲು ಅಥವಾ ಬರವಣಿಗೆಯನ್ನು ಸರಿಪಡಿಸಬಹುದು ಎಂದು ತಿಳಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ.

ಕನ್ನಡದಲ್ಲಿ ಬಳಕೆಯಾಗುವ ಪದಗಳು ಮತ್ತು ಪದರೂಪಗಳು ಸರಿಯೋ ತಪ್ಪೋ ಎಂದು ತೀರ್ಮಾನಿಸುವಲ್ಲಿ ನಾವು ಯಾವ ನಿಯಮಗಳನ್ನು ಬಳಸಬೇಕು ಹಾಗೂ ಕನ್ನಡದ ನಿಯಮಗಳನ್ನೇ ಪಾಲಿಸಬೇಕೆಂದು ಯಾರೂ ಹೇಳಬಹುದು. ಆದರೆ ಇದರಲ್ಲಿಯೂ ಹಲವಾರು ಗೊಂದಲಗಳಿವೆ ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ಕನ್ನಡದಲ್ಲಿ ಬಳಸುವಾಗ ಸಂಸ್ಕೃತದ ಕಟ್ಟಲೆಗಳನ್ನು ಬಳಸಬೇಕೆಂದು

ಹೇಳುತ್ತಾರೆ. ಕನ್ನಡದ ವಿದ್ವಾಂಸರಲ್ಲಿ ಹಿಂದಿನ ಕಾಲದಿಂದಲೂ ಬೆಳೆದು ಬಂದಿರುವ ಕನ್ನಡದ ಕುರಿತಾಗಿರುವ ಕೀಳರಿಮೆ ಮತ್ತು ಸಂಸ್ಕೃತದ ಕುರಿತಾಗಿರುವ ಅತಿಯಾದ ಆದರ ಮತ್ತು ಅಭಿಮಾನಗಳೇ ಇದಕ್ಕೆ ಕಾರಣವಾಗಿದೆ.

ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳಲ್ಲಿ ಬರುವ ಮಹಾಪ್ರಾಣ ಷ ಕಾರ ಋ ಕಾರ ಮೊದಲಾದ ಎಲ್ಲ ಮಹಾಪ್ರಾಣಾಕ್ಷರಗಳು ಕೆಲವು ಬರಿಗೆಗಳು ಹೆಚ್ಚಿನ ಕನ್ನಡಿಗರ ಓದಿನಲ್ಲಿ ಇಲ್ಲವೇ ಮಾತಿನಲ್ಲಿ ಕಾಣಿಸುವುದಿಲ್ಲ ಹಾಗಿದ್ದರೂ ಅವನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯಬೇಕು ಇಲ್ಲವಾದರೆ ಅದು ತಪ್ಪಾಗುತ್ತದೆ ಎಂದು ಹೇಳುವುದೂ ಸಂಸ್ಕೃತದ ಕಟ್ಟಲೆಗಳನ್ನು ಕನ್ನಡದ ಮೇಲೆ ಹೊರಿಸುವ ತಪ್ಪು ದಾರಿಯಾಗಿದೆ ಹೆಚ್ಚಿನ ಕನ್ನಡಿಗರ ಓದಿನಲ್ಲಿ ಇಲ್ಲವೇ ಮಾತಿನಲ್ಲಿ ಈ ಎರವಲು ಪದಗಳು ಹೇಗೆ ಕಾಣಿಸುತ್ತವೆಯೋ ಹಾಗೆ ಬರೆಯುವುದೇ ಕನ್ನಡದ ಮಟ್ಟಿಗೆ ಸರಿಯಾದ ದಾರಿ ಎಂದು ಅಭಿಪ್ರಾಯ ಪಡುತ್ತಾರೆ.

ಬರಹದಲ್ಲಿ ತಪ್ಪು-ಸರಿ ಎಂಬ ಪರಿಕಲ್ಪನೆಯನ್ನು ಈ ಅರ್ಥದಲ್ಲಿ ಬಳಸಲು ಸಾಧ್ಯವಿದೆ ಕನ್ನಡದ ಕೆಲವು ಆಡುನುಡಿಗಳಲ್ಲಿ ಪದಗಳ ಮೊದಲಿನ ಹ, ಕಾರ ಬಿದ್ದು ಹೋಗಿದೆ ಹಾಲು ಎಂಬುದು ಆಲು ಎಂದಾಗಿದೆ, ಹಣ್ಣು ಎಂಬುದು ಅಣ್ಣು ಎಂದಾಗಿದೆ, ಹಕ್ಕಿ ಎಂಬುದು ಅಕ್ಕಿ ಎಂದಾಗಿದೆ, ಹುಳ ಎಂಬುದು ಉಳ ಎಂದಾಗಿದೆ, ಈ ರೀತಿ ಕೆಲವರು ಕನ್ನಡಿಗರು ತಮ್ಮ ಆಡುನುಡಿಯ ಪದಗಳಲ್ಲಿದ್ದ ಹ ಕಾರವನ್ನು ಕಳೆದುಕೊಂಡುದರಲ್ಲಿ ತಪ್ಪಾಗಿರುವಂತಹದು ಏನೂ ಇಲ್ಲ. ಅದು ಅವರ ಆಡುನುಡಿಯಲ್ಲಿ ಸ್ವಾಭಾವಿಕವಾಗಿ ನಡೆದಿರುವ ಒಂದು ಬದಲಾವಣೆ ಮಾತ್ರ. ಇದಲ್ಲದೆ ಅದು ಅವರ ಆಡುನುಡಿಯನ್ನು ಕೆಡಿಸಿಲ್ಲ ಅದರ ಜೀವಂತಿಕೆಯನ್ನು ಉಳಿಸಿದೆ ಭಾಷೆಯ ನಿರಂತರ ಬದಲಾವಣೆಯೂ ಜೀವಭಾಷೆಯ ವೈಶಿಷ್ಟ್ಯ

ಸಂಸ್ಕೃತ ಎರವಲುಗಳನ್ನು ಹೆಚ್ಚು ಕಡಿಮೆ ಸಂಸ್ಕೃತದಲ್ಲಿರುವ ಹಾಗೆಯೇ ಬರೆಯಬೇಕು ಎಂಬ ಕಟ್ಟಲೆ ಕನ್ನಡದ ಮಟ್ಟಿಗೆ ತೀರ ಅನವಶ್ಯಕವಾದುದು ಮಾತ್ರವಲ್ಲ ಕನ್ನಡ ಬರಹವನ್ನು ಎಲ್ಲಾ ಕನ್ನಡಿಗರೂ ಸುಲಭವಾಗಿ ಕಲಿತು ತಮ್ಮದಾಗಿಸಿಕೊಳ್ಳುವಲ್ಲಿ ಒಂದು ದೊಡ್ಡ ತೊಡಕಾಗಿದೆ. ಆದ್ದರಿಂದ ತದ್ಭವ ಮತ್ತು ಗ್ರಾಮ್ಯರೂಪದಲ್ಲಿ ಈಗಲೂ ಬದಲಾಯಿಸಿ ಬಳಸುತ್ತಿರುವುದು.

ಸುಲಭಗೊಳಿಸಿ ಕನ್ನಡ ಭಾಷೆಯನ್ನು ಹೊಸ ರೂಪವಾಗಿ ಬರೆಯಲು ವೈಜ್ಞಾನಿಕ ಆಲೋಚನೆಗಳನ್ನು ಮುಂದಿರಿಸಿ ಕನ್ನಡ ಭಾಷೆಯನ್ನು ಬರೆಯಲು ೩೨ ಅಕ್ಷರಗಳೇ ಅಗತ್ಯವೆಂದು ಪ್ರತಿಪಾದಿಸಿದ್ದಾರೆ.

ಈ ರೀತಿ ಜಗತ್ತಿನ ಎಲ್ಲಾ ಭಾಷೆಗಳನ್ನು ಬೇರೆ ಬೇರೆ ಭಾಷಾ ಕುಟುಂಬಗಳಲ್ಲಿ ಇರಿಸಿ ಹೇಳಲು ಮುಖ್ಯವಾಗಿ ಅವುಗಳ ಚರಿತೆ ಆಧಾರವಾಗಿರುತ್ತದೆ ಒಂದು ಭಾಷೆಯನ್ನಾಡುವ ಜನ ಸಮುದಾಯದಲ್ಲಿ ಹಲವಾರು ಗುಂಪು ಗುಂಪುಗಳಾಗಿ ದೂರ-ದೂರದಲ್ಲಿರುವ ಊರುಗಳಿಗೆ ಹೋಗಿ ನೆಲೆಸಿದಾಗ ಅವರೊಳಗಿನ ಸಂಪರ್ಕ ಕಡಿಮೆಯಾಗುತ್ತಾ ಬರುತ್ತದೆ. ಇದರಿಂದಾಗಿ ಅವರು ಬಳಸುವ ಭಾಷೆಯಲ್ಲಿ ಬದಲಾವಣೆಗಳು ಬೇರೆ ಬೇರೆ ಕಾರಣಗಳಿಂದ ಉಪ ಭಾಷೆಗಳಿಂದ ಪದಗಳನ್ನು ಎರವಲಾಗಿ ಪಡೆಯುತ್ತದೆ. ನಂತರ ಆ ಪದವು ಹೇಗೆ ಉಚ್ಚರಿಸುತ್ತೇವೆಯೋ ಹಾಗೆ ಬರವಣಿಗೆಯಲ್ಲಿ ಬರೆಯುವಾಗ ಹಲವಾರು ತಪ್ಪುಗಳನ್ನು ಮಾಡುತ್ತೇವೆ. ಉಲಿಯುವ ಪದಕ್ಕೂ ಬರಿಗೆಯ ಪದಕ್ಕೂ ಹಲವಾರು ವ್ಯತ್ಯಾಸಗಳು ಉಂಟಾಗಿ ಕಲಿಸುವರ ಹಾಗೂ ಕಲಿಯುವವರ ನಡುವೆ ಹಲವಾರು ತೊಡಕುಗಳು ಹಾಗೂ ಗೊಂದಲವನ್ನು ಉಂಟು ಮಾಡಿ ಭಾಷೆಯೂ ಆ ಭಾಷಿಕ ಸಮುದಾಯದವರ ತಾಯ್ನುಡಿಯಿಂದ ಭಿನ್ನವಾಗಿ ಕಾಣುವುದರಿಂದ ಭಾಷೆಯೂ ಕಷ್ಟವಾಗುತ್ತದೆ.

ಅಡಿ ಟಿಪ್ಪಣಿ:

೧.ಕನ್ನಡ ವ್ಯಾಕರಣ ಯಾಕೆ ಬೇಕು. ಡಿ.ಎನ್.ಶಂಕರಭಟ್ಟ, ಭಾಷಾ ಪ್ರಕಾಶನ-೨೦೦೬, ಪು.ಸ-೧೧.

೨. ಕನ್ನಡ ಬರಹವನ್ನು ಸರಿಪಡಿಸೋಣ, ಡಿ.ಎನ್.ಶಂಕರಭಟ್ಟ, ಪ್ರಕಾಶಕರು ಭಾಷಾ ಪ್ರಕಾಶನ, ಹೆಗ್ಗೋಡು,ಸಾಗರ-೨೦೦೬.ಪು-೨೪,೨೬೧೦

ಆದಿಮಾನವರ ಆಂಗಿಕ ಸಂಜ್ಞೆಗಳ ಜೊತೆ ಜೊತೆಯಲ್ಲೇ ಹೊರಟ ಧ್ವನಿಗಳು ಮತ್ತು ರಾಗವಾಗಿ ಹಾಡ ತೊಡಗಿದ ಧ್ವನಿಯಿಂದ ಭಾಷೆಯು ರೂಪುಗೊಂಡಿರಬೇಕೆಂದುವಾದಿಸಲಾಗಿದೆ. ಆದರೆ ಈಗಾಗಲೇ ನಾವು ತಿಳಿದಿರುವಂತೆ ಭಾಷೆ ಎಂಬುದು ಯಾದೃಚ್ಛಿಕ ಧ್ವನಿ ಸಂಕೇತಗಳಿಂದ ಕೂಡಿದ ಒಂದು ವ್ಯವಸ್ಥೆ ಕೆಲವೇ
ಸೀಮಿತವಾದ ಮಾತಿನ ಧ್ವನಿಗಳ ಸಂಯೋಜನೆಯಿಂದ ಸಾವಿರಾರು ಪದಗಳು ಮತ್ತು ವಾಕ್ಯಗಳು ನಿರಂತರವಾಗಿ ಹೊಸ ಹೊಸ ಬಗೆಗಳಲ್ಲಿ ರಚನೆಗೊಳ್ಳುತ್ತಿರುತ್ತವೆ.

ಪ್ರಪಂಚದಲ್ಲಿ ಇದುವರೆಗೆ ಬಳಕೆಯಲ್ಲಿದ್ದ ಹಾಗೂ ಬಳಕೆಯಲ್ಲಿರುವ ಎಲ್ಲಾ ಭಾಷೆಗಳು ಸ್ವಯಂ ಪರಿಪೂರ್ಣವಾಗಿವೆ. ಅಂದರೆ ಅವುಗಳ ವ್ಯಾಕರಣ ವ್ಯವಸ್ಥೆ ಸುಸಂಬದ್ಧವಾಗಿದೆ. ಯಾವೊಂದು ಭಾಷೆಯಲ್ಲಿಯೂ ಪ್ರಾರಂಭದ ಹಂತ, ಬೆಳವಣಿಗೆಯ ಹಂತ, ಪರಿಪೂರ್ಣತೆಯ ಹಂತ, ಎಂಬುದಿಲ್ಲ ಪ್ರತಿಯೊಂದು ಭಾಷೆಯೂ ನಿತ್ಯ ಪರಿವರ್ತನಾಶೀಲವಾಗಿದೆ. ಆದುದರಿಂದ ಭಾಷೆಯು ಹೇಗೆ ಹುಟ್ಟಿತು ಎಂಬ ವಾದಗಳನ್ನು ನುಡಿಯರಿಗರು ಕೈ ಬಿಟ್ಟಿದ್ದಾರೆ.

ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸಂಖ್ಯೆಯ ಭಾಷೆಗಳಲ್ಲಿನ ಧ್ವನಿಗಳನ್ನು ಪರಸ್ಪರ ಹೋಲಿಸಿ ಅವುಗಳ ಧ್ವನಿ ರೂಪದಲ್ಲಿ ಮತ್ತು ಅರ್ಥದಲ್ಲಿ ಕಂಡು ಬರುವ ಸಮಾನವಾದ ಮತ್ತು ವಿಭಿನ್ನವಾದ ಲಕ್ಷಣಗಳ ಆಧಾರದ ಮೇಲೆ ಜಗತ್ತಿನಲ್ಲಿ ಬಳಕೆಯಲ್ಲಿದ್ದ ಮತ್ತು ಬಳಕೆಯಲ್ಲಿರುವ ಭಾಷೆಗಳೆಲ್ಲವನ್ನು ಹಲವು ಭಾಗಗಳಾಗಿ ಅಧ್ಯಯನಕ್ಕೆ ತೊಡಗಿಸಿಕೊಂಡಾಗ ಭಾಷೆಗಳಲ್ಲಿನ ಪದ ರೂಪಗಳನ್ನು ಗುರುತಿಸಿ ವಿಂಗಡಿಸಿ ವಿಶ್ಲೇಷಣೆ ಮಾಡುವಾಗ ಮೂಲ ಭಾಷೆಗಳ ಚರಿತ್ರೆಯಲ್ಲಿ ನಡೆದ ಬದಲಾವಣೆಯ ಫಲದಿಂದಾಗಿ ಇವತ್ತು ಸಾವಿರಾರು ಭಾಷೆಗಳು ಕವಲೊಡೆದು ಪ್ರತಿಯೊಂದು ಭಾಷೆಯೂ ಇತರ ಭಾಷೆಗಳೊಂದಿಗೆ ಕೊಡು–ಕೊಳುಗೆಗಳನ್ನು ಮಾಡಿಕೊಂಡಿರುವುದರಿಂದ ಕನ್ನಡ ಭಾಷೆಯ ಮೇಲೆ ಹಲವಾರು ಭಾಷೆಗಳ ಪ್ರಭಾವ ಹಾಗೂ ಅಧಿಕಾರದಿಂದ ನಮ್ಮ ಭಾಷೆಯೂ ಅಳಿವಿನ ಹಂಚಿನಲ್ಲಿದೆ. ಇದನ್ನು ನಾವು ಸರಿಪಡಿಸಲು ಕನ್ನಡ ಭಾಷೆಯನ್ನು ಕ್ಲಿಷ್ಟವೆಂಬ ಭಾವನೆಯಿಂದ ಹೊರ ತಂದು ಕಬ್ಬಿಣದ ಕಡಲೆಯಂತೆ ಇರುವ ಭಾಷೆಯನ್ನು ಸುಲಿದ ಬಾಳೆಹಣ್ಣಿನ ಹಾಗೆ ಮಾಡಬೇಕೆಂಬ ನಿಲುವಿನ ಆಧಾರವನ್ನು ಇಟ್ಟುಕೊಂಡು ಡಿ.ಎನ್. ಶಂಕರಭಟ್ಟರು ಬರವಣಿಗೆಯನ್ನು

## ಅಧ್ಯಾಯ –೫

## ಸಮಾರೋಪ

ಪ್ರಪಂಚದಲ್ಲಿರುವ ಜನರೆಲ್ಲಾ ಒಂದೇ ಭಾಷೆಯನ್ನಾಡುತ್ತಿದ್ದಿದ್ದರೆ ಭಾಷಿಕ ಸಮುದಾಯದವರು ಕೆಲವರಿದ್ದಾರೆ ಹೀಗಿದ್ದಾಗ ಜಗತ್ತಿನ ಬೇರೆ ಬೇರೆ ಭಾಷೆಯನ್ನು ಕಲಿಯುವ ಕೆಲಸವೂ ಇಲ್ಲವಾಗುತ್ತಿತ್ತು ಇದರಿಂದ ಭಾಷೆಯ ಹೆಸರಿನಲ್ಲಿ ನಡೆಯುವ ಹೋರಾಟಗಳನ್ನು ನಿಲ್ಲಿಸಬಹುದು ಆದರೆ ಎಲ್ಲವೂ ಏಕರೂಪತೆಯನ್ನು ಪಡೆದರೆ ಸಮಾಜದಲ್ಲಿ ನಡೆಯುವ ಮೇಲು–ಕೀಳು ಎಂಬ ಭಾವನೆ ತೊಲಗಿಸಬಹುದು.

ಪ್ರತಿಯೊಂದು ಮಾನವನ ತನ್ನ ಭಾವನೆ ಹಾಗೂ ಅನಿಸಿಕೆಯನ್ನು ವ್ಯಕ್ತಪಡಿಸಲು ಮನುಷ್ಯ ಮಾತನ್ನು ಮಾಧ್ಯಮವನ್ನಾಗಿಸಿಕೊಂಡನು. ಭಾಷೆಯೂ ಕಾಲದಿಂದ ಕಾಲಕ್ಕೆ ಬದಲಾವಣೆಗೆ ಒಳಗಾಗುತ್ತಲೇ ಇರುತ್ತದೆ ಇದರಿಂದ ಎಲ್ಲಾ ಸಂದರ್ಭದಲ್ಲೂ ಭಾಷೆಯೂ ಇನ್ನೊಂದು ಭಾಷೆಯ ಸಂಪರ್ಕವನ್ನು ಪಡೆದು ಹಲವಾರು ಹೊಸತನವನ್ನು ಪಡೆಯುತ್ತವೆ ಇದರಿಂದ ಹೊಸದಾಗಿ ಹೊಸ ಕಾಲಕ್ಕೆ ಹೊಂದಿಕೊಳ್ಳದ ಜೀವಿಗಳು ಅಸಮರ್ಥವಾಗಿ ನಾಶಗೊಳ್ಳುತ್ತದೆ ಇದರಿಂದ ಯಾವ ಜೀವಿಯೂ ಸಾಮರ್ಥ್ಯವನ್ನು ಪಡೆಯಲು ಪ್ರಯತ್ನಿಸುವುದಿಲ್ಲ ಹಾಗೆಯೇ ಭಾಷೆಯಲ್ಲಿ ಕಾಣಿಸುವ ವೈವಿಧ್ಯತೆಯೂ ಇದೇ ರೀತಿಯದು ನಮ್ಮ ಜೀವನದಲ್ಲಿ ಕಾಣಿಸುವ ಇತರ ವೈವಿಧ್ಯತೆಗಳಂತೆಯೇ ಅದೂ ಅತ್ಯವಶ್ಯಕವಾದುದು ಒಂದು ಭಾಷೆಯೂ ತಿಳಿಯಲು ಅದರಲ್ಲಿ ಕಾಣಿಸುವ ವೈವಿಧ್ಯತೆಯ ಮೇಲೆ ಅವಲಂಭಿಸಿರುತ್ತದೆ.

ಭಾಷಾ ವಿಜ್ಞಾನದ ನೆಲೆಯಲ್ಲಿ ಭಾಷೆಯ ರಚನೆ ಮತ್ತು ಬಳಕೆಯಲ್ಲಿಯೇ ಶುದ್ಧ – ಅಶುದ್ಧದ ದೃಷ್ಟಿಕೋನವಿಲ್ಲ ಭಾಷಾವಿಜ್ಞಾನಿಗಳು ಭಾಷಿಕ ಬದಲಾವಣೆಯ ಎಲ್ಲ ಬಗೆಗಳನ್ನು ಗಮನಿಸಿ ವಿಂಗಡಿಸಿ ವಿಶ್ಲೇಷಣೆ ಮಾಡುತ್ತಾರೆಯೋ ಹೊರತು ಯಾವುದೇ ಒಂದು ಬಗೆಯ ಬದಲಾವಣೆಯನ್ನು ಕಲುಷಿತವೆಂದು ಅಥವಾ ದೂಷಣೆಯೆಂದು ನಿರ್ಧರಿಸುವುದಿಲ್ಲ. ಪ್ರತಿಯೊಂದು ಭಾಷೆಗೂ ಅದರದೇ ಆದ ವ್ಯಾಕರಣ

ಪರಂಪರೆಯೊಂದು ಬೆಳೆದು ಬರುವ ಅವಶ್ಯಕತೆಯಿದೆ ಇಲ್ಲವಾದರೆ ಅದರ ವ್ಯಾಕರಣದ

ಮೇಲೆ ಬರೆದ ಬರಹಗಳು ಆ ಭಾಷೆಯ ಮೂಲ ಸೂತ್ರಗಳನ್ನು ಪ್ರತಿಬಿಂಬಿಸುವ ಬದಲು ಬೇರೆ ಭಾಷೆಯ ಮೂಲಸೂತ್ರಗಳನ್ನು ಅದರ ಮೇಲೆ ಹೇರುವಂತಾಗುತ್ತದೆ. ಇಂತಹ ಮೂಲಸೂತ್ರಗಳನ್ನು ಅದರ ಮೇಲೆ ಹೇರುವಂತಾಗುತ್ತದೆ.

ಮೂಲಸೂತ್ರಗಳು ಬೇರೊಂದು ಭಾಷಾ ಕುಟುಂಬಕ್ಕೆ ಸೇರಿರುವ ಭಾಷೆಯಾಗಿದ್ದರೆ ಅವುಗಳಿಂದಾಗುವ ತೊಂದರೆ ಇನ್ನೂ ಹೆಚ್ಚಾಗಿರುತ್ತದೆ. ಕನ್ನಡ ವ್ಯಾಕರಣದ ಮೇಲೆ ಬರೆದ ಬರಹಗಳಲ್ಲಿ ಹೆಚ್ಚಿನವೂ ಇಂತಹ ತೊಂದರೆಗೆ ಸಿಲುಕಿಕೊಂಡಿವೆ, ಸಂಸ್ಕೃತ ಭಾಷೆಯ ವ್ಯಾಕರಣ ಪರಂಪರೆಯಿಂದ ಪ್ರಭಾವಿತವಾಗಿರುವುದೇ ಇದಕ್ಕೆ ಕಾರಣ ಸಂಸ್ಕೃತ ಭಾಷೆ ಇಂಡೋ-ಆರ್ಯನ್ ಎಂಬ ಭಾಷಾ ವರ್ಗಕ್ಕೆ ಸೇರಿದೆ ಆದರೆ ಕನ್ನಡ ಇದಕ್ಕಿಂತ ತೀರ ಭಿನ್ನವಾಗಿರುವ ದ್ರಾವಿಡ ಭಾಷಾ ವರ್ಗಕ್ಕೆ ಸೇರಿರುವ ಭಾಷೆಯಾಗಿದೆ.

ಸಂಸ್ಕೃತ ವ್ಯಾಕರಣ ಪರಂಪರೆಯಲ್ಲಿ ಬರೆದಿರುವ ಈ ಬರಹಗಳೆಲ್ಲ ಕನ್ನಡ ವ್ಯಾಕರಣದ ನಿಜಸ್ವರೂಪವನ್ನು ತಿಳಿಸಿ ಹೇಳುವಲ್ಲಿ ಬಹಳ ಮಟ್ಟಿಗೆ ಅಸಮರ್ಥವಾಗಿದೆ. ಮನುಷ್ಯರು ಪ್ರಾಣಿಗಳಿಂದ ಭಿನ್ನವಾದ ವ್ಯಕ್ತಿಗಳಾಗಿ ವಿಕಾಸಗೊಂಡಾಗ ಅವರೊಂದಿಗೆ ಅವರ ಭಾಷೆಯೂ ವಿಕಾಸಗೊಂಡಿರಬೇಕು ಮತ್ತು ಮನುಷ್ಯರು ಅನಂತರ ಬೇರೆ ಬೇರೆ ಸಮಾಜಗಳಾಗಿ ವಿಭಜಿತರಾದಾಗ ಇದರೊಂದಿಗೆ ಅವರಾಡುವ ಭಾಷೆಯೂ ಬೇರೆ ಬೇರೆ ಭಾಷೆಗಳಾಗಿ ವಿಭಜಿತವಾಗಿರಬೇಕು ಹಾಗಾಗಿ ಮಾನವರೆಲ್ಲರ ನಡುವೆಯೂ ಸಾಮ್ಯವಿದ್ದೇ ಇರಬೇಕು. ಈ ಕಾರಣಕ್ಕಾಗಿ ಕನ್ನಡ, ಸಂಸ್ಕೃತ, ಲ್ಯಾಟಿನ್, ಇಂಗ್ಲೀಷ್ ಮಾತ್ರವಲ್ಲದೆ ಜಗತ್ತಿನಲ್ಲಿರುವ ಇತರ ಸಾವಿರಾರು ಭಾಷೆಗಳ ನಡುವೆಯೂ ಬೇರೆ ಬೇರೆ ರೀತಿಯ ಸಾಮ್ಯಗಳನ್ನು ಕಾಣಲು ಸಾಧ್ಯವಿದೆ. ಇಂತಹ ಸಾಮ್ಯಗಳ ಆಧಾರದ ಮೇಲೆ ಈ ಎಲ್ಲಾ ಸಾವಿರಾರು ಭಾಷೆಗಳಿಗೂ ಅನ್ವಯಿಸುವಂತಹ ವ್ಯಾಕರಣ ಪರಂಪರೆಯೊಂದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ ಇಂತಹ ವ್ಯಾಕರಣ ಪರಂಪರೆಯನ್ನು ಕಲ್ಪಿಸಿಕೊಳ್ಳುವ ಪ್ರಯತ್ನ ಈಗ ಹಲವು ದಶಕಗಳಿಂದಲೂ ನಡೆಯುತ್ತಾ ಇದೆ. ಆದರೆ ಈ ಭಾಷೆಗಳೊಳಗೆ ಸಾಮ್ಯ ಮಾತ್ರವಲ್ಲದೆ ವ್ಯತ್ಯಾಸವೂ ಇದೆಯಾದ ಕಾರಣ, ಅವುಗಳ ನಡುವಿರುವ ಸಾಮ್ಯವನ್ನು ಪ್ರತಿನಿಧೀಕರಿಸುವ ವ್ಯಾಕರಣ ಪರಂಪರೆ ಮಾತ್ರವಲ್ಲದೆ ವ್ಯತ್ಯಾಸವನ್ನು ತೋರಿಸಿಕೊಡುವ ವ್ಯಾಕರಣ ಪರಂಪರೆಯೂ ಅತ್ಯವಶ್ಯಕವಾಗಿದೆ.

ಒಟ್ಟಾರೆಯಾಗಿ ಯಾವ ಭಾಷೆಯು ಮೇಲಲ್ಲ. ಯಾವ ಭಾಷೆಯು ಕೀಳಲ್ಲ. ಪ್ರತಿಯೊಂದು ಭಾಷೆಯು ತನ್ನದೇ ಆದ ಭಾಷಾ ಪರಂಪರೆಯನ್ನೂ, ವಿಶಿಷ್ಟ್ಯವನ್ನು ಒಳಗೊಂಡಿರುತ್ತದೆ. ಯಾವ ಭಾಷೆಯು ಯಾವ ಭಾಷೆಯ ಪ್ರಭಾವಕ್ಕೆ ಒಳಗಾಗಿದ್ದರೂ, ಆ ಭಾಷೆಯ ಸಹಜ ಸ್ವರೂಪತೆಯಲ್ಲಿ ಬದಲಾವಣೆಯಾಗುವುದಿಲ್ಲ. ಸಹಜ ಸ್ವಾಭಾವಿಕತೆಯು ಹಾಗೆಯೇ ಉಳಿದಿರುತ್ತದೆ ಎಂಬುದನ್ನು ಶೋಧನೆಯಲ್ಲಿ ಕಂಡುಕೊಳ್ಳಲಾಗಿದ್ದು, ನಮ್ಮ ಭಾಷೆಯನ್ನು ಉಳಿಸಿ, ಬೆಳೆಸಲು ಸಹಕಾರಿಯಾದುದಾಗಿದೆ.

ಅಡಿ ಟಿಪ್ಪಣಿ:

- ಕನ್ನಡದಲ್ಲೇ ಹೊಸಪದಗಳನ್ನು ಕಟ್ಟುವ ಬಗೆ, ಡಿ.ಎನ್.ಶಂಕರಭಟ್ಟ, ಪ್ರಕಾಶಕರು, ಮುಂಗವಳ್ಳಿ, ಭೀಮನಕೋಣೆ, ಸಾಗರ–೨೦೧೪. ಪು ೬೭
- ಕನ್ನಡ ಬರಹವನ್ನು ಸರಿಪಡಿಸೋಣ, ಡಿ.ಎನ್.ಶಂಕರಭಟ್ಟ, ಪ್ರಕಾಶಕರು ಭಾಷಾ ಪ್ರಕಾಶನ, ಹೆಗ್ಗೋಡು, ಸಾಗರ–೨೦೦೬ ಪು ೨೪, ೨೭
- ಕನ್ನಡ ವಾಕ್ಯಗಳ ಒಳರಚನೆ, ಡಿ.ಎನ್.ಶಂಕರಭಟ್, ಪ್ರಕಾಶಕರು :–ಭಾಷಾ ಪ್ರಕಾಶನ, ರೂಪಾನಗರ, ಮೈಸೂರು –೨೦೦೪. ಪು ೬೬
- ಅಂತರ್ ಜಾಲ ಮಾಹಿತಿ – ಮಿಂಚಂಚೆ, ಹೊನಲು, ಸಂಪದ